ಕೈಮುಗಬಾರ

ಕವಾಬಾರ

3-1-1949 ರಿಂದ
19-12-1949 ವರೆಗೆ

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
ರಾ. ಪುರೋಹಿತ]

[ಸಂಸ್ಥಾಪಕರು:
ರಂ. ರಾ. ದಿವಾಕರ

ಸ್ವಾತಂತ್ರ್ಯ, ಮುಕ್ತ
...ತಿಯೆಂಬೀ ಈಪ್ಸಿತ
...ಪಡೆಯಬೇಕಾದರೆ
ಅವುಗಳನ್ನು ಅನ್ಯರಿಗೆ
...ದೊಂದೇ ದಾರಿ. ಇದು
ನಿಗೂಢ ನಿಯಮ.

—ಆರ್ಟ್ ಹುಡ್

*

...ರಗಳು ನಕ್ಷತ್ರಗಳಂತಿರು
...ಗೂ ಅವನ್ನು ಎಂದೂ
...ರರು. ಆದರೂ ಸಮುದ್ರ
ನಾವಿಕರಂತೆ ನಾವು ಅವು
...ನೋಡಿ ದೆಸೆಯನ್ನು ನಿರ್ಧರಿ...

—ಸ್ಟೀಶನರ್

*

...ವೆಂದರೆ ಭಯದ ಅಭಾವ
...ದರ ನಿಗ್ರಹ.

—ಜಾನ್ ಬೊನಿಲ್

*

...ಗಾರನಿಂದ ನೀವೊಂದು
...ಹಣ್ಣು ಕೊಂಡರೆ ನೀವು
...ರ್ತಿಯನ್ನು ಬುಟ್ಟಿಯ
...ಲ್ಲಿ ಕಾಣುವಿರಿ; ಅವನ
ಪರಿಚಯ ಮಾತ್ರ
...ತಳದಲ್ಲಿ ಆಗುವದು.

—ಜಾರ್ಜ ಬ್ಲ್ಯಾಂಟ



ಚಲಚಿತ್ರ ತಾರೆ ವನಮಾಲಾ

ಈ ವರ್ಷದಲ್ಲಿ ತೆಗೆಯಲ್ಪಟ್ಟ ಜಗತ್... ಛಾಯಾಚಿತ್ರ... ಅತ್ಯುತ್ತಮ ... ಗಳಲ್ಲಿ ಇದೊಂದು ಎಂದು ಪರಿಗಣಿಸ...ಲ್ಪಟ್ಟಿದೆ. ಕೊಲ್ಹಾಪುರ...

...ಡು ಸಂಸ್ಕೃತಿ (ಚಿಕ್ಕಕತೆ)

ಶ್ರೀ ಕೃಷ್ಣ ಪಾಟೀಲ —ಪುಟ ೨

...ರತೀಯ ಮಹಿಳೆಯರ ಉಡಿಗೆ ತೊಡಿಗೆ

ಶ್ರೀ ಚೆ...

... ದಾಸರಾಸ್ತ್ರಗಳ ...ಗಿ ಕೊಂಟಕಟ್ಟಿ ನಿಂತಿರು ...ಇದು ಚೆನ್ನಾಗಿ ನಿದರ್ಶಿಸುತ್ತದೆ. ...ರ ಸಭೆಯ ಸದಸ್ಯರಲ್ಲಿಯ ಬಹುಸಂಖ್ಯ ಬಿಳಿಯರ ಮೇಲೆ ಸಮರ್ಥನೆ ಅಷ್ಟೇನೂ ಸರಿ...

... ನಿರ್ಮಾಣದಪತ್ರದ ...ರು ಸ್ವಲ್ಪ ಲಾಠಿ ಪ್ರಹಾರ ಮಾಡಿ ಅದರಿಂದ ೯ ಜನರಿಗೆ ಗಾಯ, ೧೨ ಜನರಿಗೆ ಬಂಧನ ಸಂಭವಿಸಿತು. ಈ ಮಾತ ಪ್ರದರ್ಶನಕ್ಕೆ ಮುಂಬಯಿ ಬಂದರಿಗೆ ಡಚ್ ಹಡಗು ಬಂದದ್ದೇ ಕಾರಣ. ವಿದ್ಯಾರ್ಥಿಗಳು ಮೊದಲು ಅದರೆದುರು ಮೂಕಪ್ರದರ್ಶನ ಮಾಡಿದರು. ಹಡಗನ್ನೇರಲು ಅನಂತರ ಅವರು ಪ್ರಯತ್ನಿಸಿದಾಗ ಪೋಲೀಸರು ಅವರನ್ನು ತಡೆದರು. ಆಗ ಆ ಮೆರವಣಿಗೆ ಮೇಲೆ ಹೇಳಿದ

...ತೀರದಾಳಿಗೆ ಸಜ್ಜಾಗಿರುವ ...ಳಿಯುತ್ತದೆ. ಆದರೆ ಚಿಯಾಂಗರ ಹೊಸ ಸರಕಾರವೇನೋ ಕದೆಯುತನಕ ಕಾಯುವ ನಿರ್ಧಾರ ಮಾಡಿದೆಯೆಂದು ಅವರು ಸಾರುತ್ತಾರೆ.

ಯೆಹೂದಿಗಳ ದಂಡಯಾತ್ರೆ

ಇಸ್ರೇಲಿನ ಸೈನಿಕರು ಈಜಿಪ್ತದ ಮೇಲೆ ದಂಡಯಾತ್ರೆ ಕೈಕೊಂಡಿರುವರೆಂದೂ ಅವರು ಆಗಲೇ ಅದರೊಳಗೆ ಹೊಕ್ಕಿರುವರೆಂದೂ ಕೈರೋದಲ್ಲಿರುವ ಬ್ರಿ. ರಾಯಭಾರಿಯ ಕಚೇರಿಯಿಂದ ತಂತಿ ಬಂದಿರುವುದಾಗಿ ತಿಳಿಯುತ್ತದೆ.

ಎರಡು ಸಂಸ್ಕೃತಿ

[ಶ್ರೀಕೃಷ್ಣ ಪಾಟೀಲ, ಕಲಾಮಂಟಪ, ಬೆಳಗಾವಿ]

[illegible] ... ತಿಳುಕಿಕೊಂಡು ಹೋಗುತ್ತಿ[...] ... ಗಂಡಸರು, [...] ಹೊಗಳು.

[illegible]

... ಎನ್ನ ರಾಯರೇ, ... ನಿಮ್ಮ ಪ್ರಶಂಸಾಭಾಷಣದಿಂದ ನಾವು ಉದ್ಧರಿಸಲ್ಪಟ್ಟೆವು!" ಎಂದು ಅವನು ಆಕೆಯ ... ಅಂಗೈಗಳಿಗೆ ಮುದ್ದಿಟ್ಟನು.

[illegible] ... ಗಾಡಿ ... ಅವರ ಪ್ರೇಮ ಪ್ರದರ್ಶನವು ಒಂದು ... ಸಂಗತಿ ಎನಿಸಿತು.

... ದೇ, ನಿನಗೆ ... ಅವರ ನಾನೇ ... ಎಂದು ಅವಳು ತನ್ನ ... ಒಂದು ... ತೆಗೆದು ಅವನ ಕೈಗೆ ...

... ಗಂಡನ ಮೇಲೆ ಎಷ್ಟು ಮಮತೆ!! ... ಲೂಸಿ ನೀನು ತಿಂದರೆ ನನ್ನ ಹೊಟ್ಟೆ ... ನೀನು ಮೊಲುಕು ಹಾಕಿದಂತೆ ... ನೀನು ಇಳಿಯುವವು. ... ನಾನು ನೋಡುತ್ತಿರುವೆ." ... ನೋಡಿ ಹೊಟ್ಟೆ ತುಂಬಿಸಿ ... ನಿನಗೆ ಬೇರಾವ ಕೆಲಸದ ... ಎಂದು ಗಟ್ಟಿಸಿ ನಕ್ಕಳು.

... ವಾಗಿ ಮಾತಾಡಿದೆ, ಲೂಸಿ." ... ಎಂಥ ಉದಾತ್ತ ಅಸ್ತ್ರ ...!

... ಈ ಪ್ರೇಮ ... ಕೇಳುತ್ತಿದ್ದೆ. ... ಒಂದೆರಡು ಸಾರೆ ನೋಡಿದೆ. ಅವರ ಮೇಲೆ ... ದೃಷ್ಟಿಯ ಭಾವವು ...

... ನಾನು ಎದುರು ಕುಳಿತಿರುವದು ... ಅದು ಯೋಗ್ಯವೇ ಇರ ... ಬೆಳೆದ ತಲೆ, ಹಣ್ಣು ಒಡೆದ ... ಬಿಟ್ಟಿ, ಮುಖದ ಮೇಲಿನ ... ಛಾಯೆ, ಅವರ ಶೃಂಗಾರಮಯ ... ದೃಷ್ಟಿಯಲ್ಲಿ ಅಸಹ್ಯವಾಗಿ ಕಂಡಿರ ... ಒಂದೆರಡು ಸಾರೆ ತಿರಸ್ಕಾರ ... ನೋಡಿದಳು. ನನ್ನ ಪರಕು ... ಅವಳ ಕಾಲಕೆಳಗೇ ಬಿದ್ದಿದ್ದವು. ... ಕಾಲು ತೂಗಾಡಿಸುವ ... ಬುಟಿಗೆ ತಗುಲಿದವು.

... ಕೊಡಬಲ್ಲಿರಾ?" ಎಂದು ...

... ನಾನು ಈ ಮೊದಲೇ ... ಮಾಡಬೇಕೆನಿಸಿ," ಎಂದು ... ಮುಗ್ಗುಲಿಗೆ ಕುಳಿತ.

... ಅತಿಸಾಯ ನನಗೆ ನಗೆಯನ್ನು ...

... ನಿಮಗಿರಿ?" ದೇ ಕೇಳಿದನು. ... ಜೀವನದ ರೀತಿ-ನೀತಿಗಳು ... ತಿಳಿಯವು. ತನ್ನ ಅಜ್ಞಾ ... " ಎಂದು ಮುಗುಳು ... ಕೇಳಿದನು.

... ಗೂ ರಮ್ಯವೆನಿಸಿತು. ... " ಲೂಸಿ ಕೇಳಿ ...

"ಹಾಗಾದರೆ ನಿಮ್ಮನ್ನು ಬಿಟ್ಟಳೋ?" ದೇ ಕೇಳಿದನು.

"ಹಾಗೂ ಅಗಲಿಲ್ಲ."

"ಆಶ್ಚರ್ಯ!" ಇಬ್ಬರೂ ನುಡಿದರು.

"ತೀರಿಕೊಂಡಳು."

"ಅದರಿಂದೇನು ಬಂದಿತು!"

"ಬೇರೊಬ್ಬಳನ್ನು ಮದುವೆಯಾಗಲಿಲ್ಲವೇ?" ಲೂಸಿ ತಡೆಯಿಲ್ಲದೆ ಕೇಳಿಬಿಟ್ಟಳು.

"ಇಲ್ಲ."

"ಹಾಗಾದರೆ ನೀವು ಬ್ರಹ್ಮಚಾರಿಗಳು."

"ಅನ್ನಬಹುದು."

"ಒಂಟಿ ಜೀವನ ನಿಮಗೆ ಅಸಹ್ಯವೆನಿಸುವದಿಲ್ಲವೇ?"

"ಜಂಟಿ-ಜೀವನವೂ ಅಸಹ್ಯವೆಂದು ಕೇಳಿದ್ದೇನೆ."

ಈ ಮಾತು ಉಭಯತರಿಗೂ ಚುಚ್ಚಿದಂತಾಯಿತು.

"ಹಾಗಾದರೆ ಪ್ರೇಮಜೀವನದ ಮೇಲಿನ ನಿಮ್ಮ ಆರೋಪ," ದೇ ಅಂದನು.

"ಇದನ್ನು ಒಟ್ಟಿನಿಂದ ಮಾತಾಡಿಲ್ಲವಷ್ಟೇ?"

"ಜೀವನದಲ್ಲಿ ಪ್ರೇಮಕ್ಕೆ ಬೆಲೆ ಇಲ್ಲವೇ?"

"ಇಲ್ಲದಂತೇ?"

"ಹೋಗಲಿ. ನಿಮ್ಮ ದೃಷ್ಟಿಯಿಂದ ಪ್ರೇಮವೆಂದರೇನು. ಹೇಳಿ?" ಲೂಸಿ ಕೇಳಿ[...]

"ಹೂ. ಹೇಳಿರಿ," ದೇ ಅನು[...]ದನು.

"ನೀವೇ ಹೇಳಿರಿ," ನಾನು ನುಡಿದೆ.

"ಪ್ರೇಮವು ನಕ್ಷತ್ರ ಆಕಾಶದ ಪಕ್ಷಿಗಳ ಮುಗುಳುನಗೆ. ಅದು ಪರಮಪವಿತ್ರವಾದುದು. ಪರಿಶುದ್ಧವಾದುದು. ದಿವ್ಯದಲ್ಲಿ ಮಹಾದಿವ್ಯವಾದುದು. ಸೌಂದರ್ಯದಲ್ಲಿ ಸುಂದರವಾದುದು. ಇಹಪರಗಳನ್ನು ಜೋಡಿಸುವ ಸರಣಿ. ಅದು ಮಾನವನ ಪಾಲಿಗೆ ಸಿಕ್ಕ ಸ್ವರ್ಗ ಸಂಪತ್ತು....."

ನಾನು ನಡುವೆ ತಡೆದು-"ಶ್ರೀಮಾನ್ ದೇ, ಇದೆಲ್ಲ ಸ್ವರ್ಗದ ಮಾತುಗಳಾದವು. ನೀವು ಭೂಮಿಯನ್ನೇ ಮರೆತಿರುವಿರಿ. ಈಗ ನಮ್ಮ ಗಾಡಿಯು ಭೂಮಿಯ ಮೇಲೆ ಓಡುತ್ತಿರುವದು."

ದೇ ಗಕ್ಕನೆ ನಿಂತು ಬಾಯಿಬಿಟ್ಟನು.

ನನ್ನ ಅಭಿಪ್ರಾಯವನ್ನು ಕೇಳಿ ಪ್ರತಿಭಟಿಸುವ ಆತುರದಿಂದ "ನೀವು ಹೇಳಿರಿ," ಎಂದು ಲೂಸಿ ಕೇಳಿದಳು.

"ಪ್ರೇಮವೆಂದರೆ ಕಾಮ. ಇದಕ್ಕೂ ಹೆಚ್ಚಿನ ಭಾವನೆಯು ಮಾನವೀಯ ಪ್ರಪಂಚದಲ್ಲಿ ಸಿಕ್ಕುವದು ಕಷ್ಟ. ಏಕೀಭಾವದ ಕಾಮನೆಗೇ ನಾವು ದಿವ್ಯಪ್ರೇಮವೆನ್ನುವೆವು."

"ಭಾರತೀಯ ದಾಂಪತ್ಯ ಜೀವನದಲ್ಲಿ ಇದು ಸತ್ಯವಿರಬೇಕು," ಎಂದು ಟೀಕಿಸಿದಳು ಲೂಸಿ.

ಅವಳ ವಾದ ಅಸತ್ಯವಿದ್ದಿತು. ನಾನು ಸುಮ್ಮನಿದ್ದೆ.

"ಮದುವೆಯಾದ ವರನು ನಿಮ್ಮಲ್ಲಿ ತನ್ನ ಹೆಂಡತಿಗೆ ಮಾತುಕಲಿಸುವನಂತೆ, ಹೌದೇ?" ದೇ ಕೇಳಿದನು.

"ಮಾತು ಕಲಿಸುವದಿಲ್ಲ, ಮಾತಿನ ರೀತಿಯನ್ನು ಕಲಿಸುತ್ತಿರಬೇಕು."

"ವ್ಯಕ್ತಿತ್ವವನ್ನು ಕಳೆದುಕೊಂಡು ದಾಸಿಯಂತೆ ಗಂಡನ ಮನೆಯನ್ನು ಸೇರುವಳಂತೆ, ಹೌದೇ?" ಲೂಸಿ ಕೇಳಿದಳು.

"ಹಾಗೇನಿಲ್ಲ. ಆಗ ಆಕೆ ಪರೀಕ್ಷೆಯ ವರಣದಲ್ಲಿರುವಳು. ಅಪರಿಚಿತ ಗಂಡನ ಮನೆ, ಬಳಗವನ್ನು ಮೌನದಿಂದ ಪರೀಕ್ಷಿಸುತ್ತಿರುವಳು. ಆಗ ಅವಳು ಅತಿಮೌನ, ಅತಿಸಹನೆ, [...]ಯುತ ಭಾವನೆಗಳಿಂದ ದಾಸಿಯಂತೆ ಕಾಣು[...]

[...]!" ಲೂಸಿ [...]

ಧಾರ್ಮಿಕ ನಿಯಮಗಳಿಂದ ಮುಚ್ಚಿಕೊಂಡು ಹೋಗುವವು. ದಾಂಪತ್ಯಜೀವನದಲ್ಲಿ ಅವು ಕಮಭಾವದಿಂದ ಅವ್ಯಕ್ತವಾಗುವವು. ಮತ್ತು ಮುಂದೆ ಜೀವಾವಧಿ ಅವುಗಳ ಅಭಿವೃದ್ಧಿಗೆ ಅವಕಾಶವನ್ನು ಕಲ್ಪಿಸಗೊಡುವದಿಲ್ಲ. ಇದಕ್ಕೂ ಹೆಚ್ಚಾಗಿ ಹೇಳುವದೆಂದರೆ ಮದುವೆಯಾದ ಮೇಲೆ ಅವರು ವಿಮರ್ಶಾತ್ಮಕ ದೋಷ ದೃಷ್ಟಿಯುಳ್ಳವರಾಗುವರು. ಸ್ತ್ರೀ ತನ್ನ ಅಪೂರ್ಣತೆಯಲ್ಲಿ ಪುರುಷನ ಅಪೂರ್ಣತೆಯನ್ನು ಕಲಬೆರಿಸಿ ಪೂರ್ಣತೆಯ ಸಿದ್ಧಿಗಾಗಿ ಹೆಣಗುವಳು."

ಹುಬ್ಬಳ್ಳಿಯ ಸ್ಟೇಶನು ಬಂದಿತು.

"ಭಾರತೀಯ ದಾಂಪತ್ಯ ಜೀವನವು ನಮಗೆ ವಿಚಿತ್ರವಾಗಿ ಕಂಡರೂ ಜನನ ಪ್ರಮಾಣವು ಸುಶಿಕ್ಷಿತವಾದ ಯಾವ ಪಾಶ್ಚಾತ್ಯ ರಾಷ್ಟ್ರಕ್ಕೂ ಕಡಿಮೆಯಿಲ್ಲ," ಎಂದು ನ[...]ಯಿತ್ತ ಲೂಸಿಯು ದೇನ ಕಂಠದಲ್ಲಿ ಕೈಹಾಕಿ "ಓ! ಎನ್ನ ಪ್ರಿಯ ದೇ, ನನಗೆ ಚಹ ಬೇಕು! ನಡೆ," ಎಂದು ಎಳೆದುಕೊಂಡು ಹೋದಳು.

ಆ ಉನ್ಮಾದಿನಿಯ ಈ ಟೀಕೆ ಅಲ್ಲಿಯವರೆಗೆ ಸೇರಲಿಲ್ಲ.

ಇಷ್ಟು ಹೊತ್ತಿನ ವರೆಗೆ ಮೂಲೆಯಲ್ಲಿಯ ಭಾರತೀಯ ದಂಪತಿಗಳು ಸುಮ್ಮನಿದ್ದರು. [...]ಯನ್ನು ಕೇಳುತ್ತಿರಬೇಕು. [...]ದಮೇಲೆ ಗಂಡನು ನನ್ನ ಹತ್ತರ ಸರಿದು,

"ನಿಮ್ಮ ಪರಿಚಯ ನನಗಾಗಬಹುದೇ?" ಎಂದನು.

ನಾನು ಹೇಳಿದೆ.

ತನ್ನ ಪರಿಚಯವನ್ನು ನನಗೆ ಮಾಡಿಕೊಡುತ್ತ "ಸುಮನಾ ಇವರೇ ಭಾರತಾಚಾರ್ಯರು. ನಿನ್ನೆ ನಿನ್ನ ತಾಯಿ ಇವರ ಭಾರತ ಪ್ರವಚನದ ಸಂಬಂಧ ತೆಗೆದ [...]ಕೋದ್ಗಾರಗಳಿಗೆ ಇವರೇ ಮೂಲ. ಇವರನ್ನೇ ಹೊಗಳಿದರು." ಎಂದು ಪರಿಚಯಮಾಡಿಕೊಟ್ಟನು. ಸುಮನಾ ನನ್ನ ಕಾಲು ಮುಟ್ಟಿ ನಮಸ್ಕಾರ ಮಾಡಿದಳು.

"ಮಗು, ಇದೇನು?" ಎಂದೆ.

"ನನ್ನ ತಾಯಿಯ ವರ್ಣನೆಗೆ ಪಾತ್ರರಿದ್ದವರು ನನಗೆ ಪೂಜ್ಯರಲ್ಲವೆ?" ಎಂದು ನುಡಿದಳು.

ಸುಮನಾ ಚಿಕ್ಕವಳಾದರೂ ಎಂಥ ದೊಡ್ಡ ಮಾತು!

ನನಗೆ ಪರಮ ಸಂತೋಷವಾಯಿತು.

ಆ ಹಿಂದೂ ಸಾಧ್ವಿ ೧೦-೫೦ ಮೈಲು ಗಾಡಿಯಲ್ಲಿ ಗಂಡನ ಜೊತೆಗೆ ಸಾಗಿದರೂ ಒಂದು ಮಾತು ಆಡಿರಲಿಲ್ಲ. ಲಜ್ಜಾವರಣದಲ್ಲಿ ಮುದುಗಿಕೊಂಡು ಮೂಲೆಯಲ್ಲಿ ಸುಮ್ಮನೆ ಕುಳಿತಿದ್ದಳು. ಗಂಡನಾದರೂ ಪುರುಷ-ಪಂಜರವನ್ನು ಹರಿದು ಮುಗ್ಗುಲಲ್ಲಿಯೇ ಕುಳಿತಿದ್ದನು. ಈಗನಾನೊಬ್ಬ ನಡುವೆ ಸಿಕ್ಕೆ.

"ನೀವು ಧಾರವಾಡಕ್ಕೆ ಬರುವದಿಲ್ಲವೇ?"

"ಮುಂದಿನ ವರುಷ ಬರಬೇಕೆಂದಿರುವೆ."

"ಬಂದರೆ ಅಗತ್ಯ ನಮ್ಮನ್ನು ಮರೆಯಬಾರದು. ಇದೊ ನನ್ನ ವಿಳಾಸ," ಎಂದು ಒಂದು ಕಾಗದವನ್ನು ಕೊಟ್ಟ.

"ಆಗಬಹುದು."

ಗಾಡಿ ಬಿಟ್ಟಿತು. ಲೂಸಿ-ದೇ ದಂಪತಿಗಳು ಗಾಡಿಯನ್ನು ಏರಲಿಲ್ಲ. ಏನಾದರೊ.

ಮುಂದೆ ವಿಶೇಷ ಮಾತು ನಡೆಯಲಿಲ್ಲ. ಧಾರವಾಡವೂ ಬಂದಿತು. ಅವರೂ ಇಳಿದರು. ಹೋಗುವ ಮುಂದೆ ಸುಮನಾ ಇನ್ನೊಮ್ಮೆ ನಮಸ್ಕರಿಸಿ- "ಮುಂದಿನ ವರುಷ ನೀವು ಅವಶ್ಯವಾಗಿ ಬನ್ನಿರಿ. ನಮ್ಮಲ್ಲಿಯೇ ಇಳಿಯಬೇಕು. ಇದು ನಿಮ್ಮ ಮಗಳ ಅಪೇಕ್ಷೆ," ಎಂದಳು. ಗಂಡನೂ ಅನುಮೋದಿಸಿದನು.

"ಆಗಲಿ," ಎಂದೆನು.

ಗಾಡಿ ಬಿಟ್ಟ ಮೇಲೆ ಅವರು ಹೊರಗೆ ಹೋದರು.

೨

ಇದಾದ ೫-೬ ವರುಷದ ಮೇಲೆ ನಾನು [...] ಹೋಗುವ ಪ್ರಸಂಗ ಬಂದಿತು. [...]ವನ್ನು ಸಕ್ಕಿದೆ. [...] ಕಾಡು [...]ಳಿದು [...]ಸು ಇಳಿದೆ. ಅದೇ ಗಾಡಿಯಿಂದ ಇಳಿಯುವ ಶ್ರೀಮಾನ್ ದೇನ[...] ಅವರಿಬ್ಬರೂ ಬೇರೆಯಾಗಿಕೊಂಡು[...] ಒಂದು ಆಸನವನ್ನು ಕೊಟ್ಟ[...] ಮೊದಲಿನ ಉತ್ಸಾಹ, ಹರ್ಷ, [...] ಉನ್ಮಾದ ಈಗ ದೇನ ಮುಖದಲ್ಲಿ [...] ಉದಾರ ಗಂಭೀರ ಭಾವನೆಯು [...] ಕುತ್ತಿದ್ದವು. ಮುಖದ ಮೇಲೆ [...] ಬೆಳೆದು [...]

"ಓ! ಶ್ರೀಮಾನ್ ದೇ! ಶ್ರೀ[...] ಲೂಸಿ ಎಲ್ಲಿ?" ಎಂದೆನು.

ದೇನು ಒಂದು ದೀರ್ಘಶ್ವಾಸ [...] ಸುಮ್ಮನಾದನು. ನಾನು ಉತ್ತರಕ್ಕೆ [...] ಮುಖವನ್ನು ನೋಡುತ್ತಿದ್ದೆನು.

"ರಾಯರೇ, ಆ ಚಂಚಲೆಯನ್ನು [...] ಪೆಟ್ಟಿಗೆಯಲ್ಲಿಟ್ಟು ಕಾಪಾಡಲು ನಾನು ಅಸಮ[...]ನಾದೆನು," ದೈನ್ಯದಿಂದ ಅವನು ನುಡಿ[...]

"ಏನಾಯಿತು?"

"ನನ್ನನ್ನು ಬಿಟ್ಟು ಈಗ ಬೇರೊಬ್ಬ[...] ಮದುವೆಯಾಗಿರುವಳು."

"ಅದು ಹೇಗೆ, ದೇ?" ಎಂದು [...]ಹಲದಿಂದ ಕೇಳಿದೆ.

"ಕಾರಣ ಇಷ್ಟೇ ರಾಯರೇ! [...] ಸಂಬಳ ಕಡಿಮೆ. ನನ್ನ ಗಿರಣಿಯ ಒಡೆ[...] ಇನ್ನೆರಡು ತಿಂಗಳಲ್ಲಿ ಸಂಬಳ ಹೆಚ್ಚ[...]ನೆಂದು ಹೇಳಿದ್ದನು. ಮಿತವ್ಯಯ[...] ಖರ್ಚು ಮಾಡಿದ್ದರೆ ಈಗಿದ್ದುದು [...] ಬೀಳದು. ಆದರೆ ಆ ಚಂಚಲೆಗೆ[...] ಅದೆಲ್ಲ ಹೇಗೆ ತಿಳಿಯಬೇಕು? ನಾನು [...]ರ್ಜನ ಹೆಂಡತಿಯಿಂದೇ ತಿಳಿದಳು.

"ಒಂದಾನೊಂದು ದಿನ ನನ್ನ ಮಾಲಕನನ್ನು [...] ಬರಲು ತಿಳಿಸಿದಳು. ಮರುದಿನ [...] ಮಾಡಿದಳು. ಮೂರನೆಯ ಸಲ [...] ಕೊಡಲು ಅವನನ್ನು ಕಂಡು ಬರಲು [...] ದೈನ್ಯದಿಂದ ಬೇಡಿಕೊಂಡೆ. [...]ಯನ್ನು ತಿಳಿಸಿದೆ. ಅವನೂ ಒಪ್ಪಿದನು. [...] ನನ್ನ ದುರ್ದೈವ. ಅಂದು ಲೂಸಿ ನನ್ನ [...]ಕನ ಹಿರಿಯ ಮಗಳ ಜೊತೆಗೆ ಅದೇ [...] ಮೇಲೆ ಉಳಿದ ಗೆಳತಿಯರೊಡನೆ [...] ಮಾಡುತ್ತಿದ್ದಳಂತೆ. ನನ್ನ ದೈನ್ಯದ ಪ್ರ[...]ವನ್ನು ಅವರೂ ಕಂಡರಂತೆ! ನಾನು [...] ಮೇಲಿನನಾರುಬಗೆಯ ವಿನೋದಮಯ[...] ಗಂಡಸರ ಪ್ರಸಂಗೋಚಿತ ದೈನ್ಯ ಚಿತ್ರ[...] ಚೆಪ್ಪಿಸಿದರಂತೆ. ಲೂಸಿ ಅವರ [...] ಸಂಭ್ರಮದಲ್ಲಿ ಮುಖ್ಯ ಪಾತ್ರವಹಿಸಿ ತಾನು[...]ಯಾದಳಂತೆ. ಅವರೆಲ್ಲರಂತೆ [...] ನನ್ನನ್ನು ಅಪರಿಚಿತನೆಂದು ಸ್ವೀಕರಿಸಿ[...]ವಾರೆ ಹಳಿದು ಸಂಕಟದಿಂದ [...] ತನ್ನ ಅದ್ಭುತ ಪ್ರಯತ್ನವೆಂದು [...] ಕೊಂಡಳು. ಇದು ನಮ್ಮ ಘಟಸ್ಫೋಟ[...] ಕಾರಣವು. ಈಗ ನಾನು ವಿಧುರ."

"ದೇ, ನೀವು ನಿಜವಾಗಿ ದುರ್ದೈವಿ[...] ನಾನು ಲೂಸಿಯ ನಡತೆಯನ್ನು ಮೆಚ್ಚಲ[...]

ಇಬ್ಬರೂ ಕೆಲ ಹೊತ್ತು ಸುಮ್ಮನಾದೆ[...]

"ಆಯಿತು. ಈಗ ಎಲ್ಲಿ ಹೊರಟಿರಿ?"

"ಗೋವೆಗೆ ನಡೆದಿರುವೆ. ಅಲ್ಲಿ ನನ್ನ ಅ[...] ಗೆಳತಿಯು ಒಬ್ಬಳು ಇರುವಳಂತೆ. ಒ[...]ವಳಂತೆ. ನೋಡಲು ಹೊರಟಿರುವೆ."

"ನಿಮ್ಮ ಅಕ್ಕನ ಪರೀಕ್ಷೆಯಲ್ಲಿ [...] ಹೊಂದಿದ್ದರೆ ಮದುವೆಯಾಗಿಬಿಡಿ."

"ಇದೇ ಸರಿ."

ಲೋಂಡಾದಲ್ಲಿ ಇಳಿದು ಅವನು ಬೇರೆ ಗಾಡಿಯನ್ನು ಏರಿದನು.

೩.

ನಾನು ಗದಗಿಗೆ ಹೊರಟುದುದು ಧಾ[...]ದಲ್ಲಿಯ ಸುಮನಾ ಮತ್ತು ಆಕೆಯ ಗಂ[...] ಹೇಗೆ ತಿಳಿದಿತ್ತೊ! ಆಶ್ಚರ್ಯ! ಗಾಡಿ ಸ್ಟೇಶನದಲ್ಲಿ ನಿಂತ ಕೂಡಲೆ ಅವರು ನ[...] ಹುಡುಕಿಕೊಂಡು ಬಂದರು.

"ತಾತಾ, ನಿಮ್ಮನ್ನು ನೋಡಲು ಬಂ[...]ವೆವು," ಸುಮನಾ ನುಡಿದಳು. ನಾನು[...]ಯಿಂದ ಇಳಿದೆ. ಸುಮನಾ ನಮಸ್ಕರಿ[...]

"ಇದು ನಿಮ್ಮ ಆಶೀರ್ವಾದದ ಫಲ," ತನ್ನ ಮಗುವನ್ನು ತೋರಿಸಿದಳು.

ನನ್ನ ಒಪ್ಪಿಗೆಯು ಮೊದಲೇ ಅ[...] ನನ್ನನ್ನು ನೋಡಿ ನಕ್ಕಿತು. ಎತ್ತಿಕೊ[...] ಮುದ್ದಿಟ್ಟೆ. "ನಿಮಗೆ ಈ ಗಾಡಿಯಲ್ಲಿ ನಾ[...]ನೆಂದು ಹೇಗೆ ತಿಳಿಯಿತು?" ಎಂದು [...]

"ಗದಗಿನಲ್ಲಿ ನಮ್ಮಣ್ಣನಿರುವನು. [...]ನಿನ್ನೆ ಪತ್ರ ಬರೆದಿರುವನು. ಸ[...] ನೋಡಿಕೊಂಡು ಹೋಗಬೇಕೆಂದು [...] ಎಂದು ಗಂಡನು ನುಡಿದನು.

(೧೬ ನೆಯ ಪುಟಕ್ಕೆ)

ವಿಚಿತ್ರವಿಶ್ವ

...ವರ್ಷದ ವರ ೮೧ ವರ್ಷದ ವಧು!

ಜರ್ಮನಿಯಲ್ಲಿ ವಿವಾಹ

ಕೀಲ (ಜರ್ಮನಿ)ದಲ್ಲಿ ೨೪ ವರ್ಷದ ವರ ೮೧ ವರ್ಷ ವಯಸ್ಸಿನ ವಧುವನ್ನು ಲಗ್ನ ಮಂಟಪಕ್ಕೆ ಕರೆದುಕೊಂಡು ಹೋಗುವಾಗ ಜನಸಮ್ಮರ್ದವು ಒಳ್ಳೆ ಆಶ್ಚರ್ಯದಿಂದ ಅವರನ್ನು ನಿರೀಕ್ಷಿಸುತ್ತಿದ್ದರು. ಈ ಲಗ್ನಕ್ಕಾಗಿ ಅಧಿಕಾರಿಗಳ ಅಪ್ಪಣೆ ಪಡೆಯಬೇಕಾದರೆ ಅವನಿಗೆ ಸಾಕು ಬೇಕಾಗಿ ಹೋಯಿತು. ವಧುವಿನ ೬೨ ವರುಷ ವಯಸ್ಸಿನ ಹಿರಿಯ ಮಗನು ಕೂಡ ಈ ಲಗ್ನವನ್ನು ವಿರೋಧಿಸಿದನು.

ಮೃತ್ಯು ಮುಖದಲ್ಲಿ ಕಾಮಬಾಣ

ಜಾರ್ಜಿನ್ ಲಾರೆಂಟ್ಸೆನ್ ಮತ್ತು ಅನ್ನಾ ...ಂಡ್ ಎಂಬಿಬ್ಬರು ಮರಣದಂಡನೆಗೊಳಗಾದ ಕೈದಿಗಳು. ಡೆನ್ಮಾರ್ಕ ದೇಶದ ...ಸು ಸೆರೆಮನೆಯಲ್ಲಿ ಇಪ್ಪರಲ್ಲೆ ಮದುವೆಯಾಗಲಿದ್ದಾರೆ. ಜರ್ಮನ್ ಆಕ್ರಮಣ ಕಾಲದಲ್ಲಿ ರಾಷ್ಟ್ರದ್ರೋಹ ಮಾಡಿ ಜರ್ಮನರ ಗುಪ್ತಚರರಾಗಿದ್ದುದಕ್ಕೆ ಅವರಿಬ್ಬರೂ ಮೃತ್ಯುದಂಡನೆಗಳಿಗಾಗಿದ್ದಾರೆ. ಸೆರೆಮನೆಯ ಬೇರೆ ಬೇರೆ ಕೋಣೆಗಳಲ್ಲಿದ್ದ ಅವರಲ್ಲಿ ಪತ್ರಗಳ ಮೂಲಕ ಪ್ರಣಯಾರಂಭವಾಯಿತು. ಅಲ್ಲಿಂದ ನ್ಯಾಯಮಂತ್ರಿಗೆ ಅರ್ಜಿ ಹಾಕಿ ಮದುವೆಗೆ ಅಪ್ಪಣೆ ಕೇಳಿದರು. ಅವನು ಸಮ್ಮತಿಸಿದ.

ಅವರ ವಿವಾಹೋತ್ತರ ಪ್ರಣಯವಿಹಾರ ...ರಿ ಅರ್ಧ ತಾಸಿನಲ್ಲಿ ಮುಗಿದು ಹೋಗುತ್ತದೆ. ಸೆರೆಮನೆಯ ಅಭ್ಯಾಗತರ ಕೋಣೆಯಲ್ಲಿ ಸೇರುವದು. ಪರಸ್ಪರ ಹಸ್ತಾಂದೋಲನ ಮಾಡುವದು, ಕಾಫಿಪಾನ ಮಾಡುವದು - ಇವು ... ವಿಹಾರದ ಅಂಗಗಳು. ಆ ಮೇಲೆ ತಿರುಗಿ ಅವರು ತಂತಮ್ಮ ಕತ್ತಲುಕೋಣೆಗೆ ಮರಳುವರು.

ಗಲ್ಲಿಗೇರಿಸುವವರೆಗೆ ಒಂದೇ ಕೋಣೆಯಲ್ಲಿ ವಾಸಿಸಲು ಕೊಡಬೇಕೆಂಬ ಅವರ ಅರ್ಜಿಗೆ ಮಾತ್ರ ಮನ್ನಣೆ ದೊರೆಯಲಿಲ್ಲ.

ನಾಯಿಗಳಲ್ಲಿಯೂ ವರ್ಣಭೇದ

ಅಮೇರಿಕೆಯ ವಾಶಿಂಗ್‌ಟನ್ನಿನ ಒಂದು ...ಯಿಗಳ ಕಬ್ರಿಸ್ತಾನದಲ್ಲಿ ಬಿಳಿಯರಲ್ಲದವರ ನಾಯಿಗಳ ಹೆಣಗಳನ್ನು ಹುಗಿಯಲು ಅಪ್ಪಣೆ ...ಲನೆಂದು ಶ್ರೀಮತಿ ಎಲೀನರ್ ರೂಜವೆಲ್ಟ್ ಒಂದು ವರದಿಯಲ್ಲಿ ಬರೆದಿದ್ದಾರೆ.

ಕಾಗೆ-ಕಾಟ

ಝಂಜಿಬಾರ (ಆಫ್ರಿಕ) ದಲ್ಲಿ ಕಾಗೆಗಳ ...ಗಂ ಹೆಚ್ಚಿದೆ. ಅದನ್ನು ನಿವಾರಿಸಲು ...ರು ತತ್ತಿ ತಂದವರಿಗೆ ತತ್ತಿಯೊಂದಕ್ಕೆ ...ಂಟ್, ಕಾಗೆಗಳನ್ನೇ ಹಿಡಿತಂದವರಿಗೆ ... ೫೦ ಸೆಂಟ್ ಬಹುಮಾನ ಸಾರಿದರು. ...ಸುತುಗ ಒಂದು ಬುಟ್ಟಿ ಕಾಗೆ ತತ್ತಿ ... ತಂದ. ಅಧಿಕಾರಿಗಳಿಗೆ ಅಂದು ಅದರ ...ಚಾರ ತೆಗೆದುಕೊಳ್ಳಲು ಯಾಕೋ ...ಯವಾಗಲಿಲ್ಲ. ಮರುದಿನ ತತ್ತಿಗಳೊ ...ಮರಿಗಳು ಹೊರಬಿದ್ದವು. ಹುಡುಗನೆಂದ: "...ವು ಕಾಗೆ ಮರಿಗಳು, ... ತಲಾ ೫೦ ಸೆಂಟ್ ...ಲು ನಾನು ಬಾಧ್ಯ." ಅಧಿಕಾರಿಗಳು ...ದರು. ಈಗ ರೆಕ್ಕೆ ಬಲಿತ ಕಾಗೆಗಳಿಗೆ ... ೫೦ ಸೆಂಟ್ ಎಂದು ತಿದ್ದುಪಡಿ ಮಾಡ...ದೆ!

ಗೊರಕೆ

...ಯಲ್ಲಿ ಗೊರೆಯುವವರ ಗೊರಕೆಯ ಶಬ್ದ... ...ಜ್ಞಾನಿಗಳು ಅಳೆದಿದ್ದಾರೆ. ಸಾಮಾನ್ಯ...ಕೆ ಗಂಗಪ್ಪನು ತಾಸಿಗೆ ೨೦ ಮೈಲು ...ವ ಮೋಟಾರಿನಷ್ಟು ಸಪ್ಪಳ ಮಾಡು...ರೆ ನಿಷ್ಣಾತ ಗೊರಕೆ ಪಂಡಿತನು ಹಳಿಲಾರಿ...ಂದು ಗುಡ್ಡ ಏರುವಾಗ ಮಾಡುವಷ್ಟು ... ...ತ್ತಾನೆ. ಈಗ ಎಂಜಿನ್ನುಗಳ ...ತ್ತವೆ. ... ಅವುಗಳಿಗೆ ಸ್ಟೈಲ ... ಕೆಲವು ಪ್ರಾಂತಗಳಲ್ಲಿ ... ...ತ್ರವನ್ನು ಸರಾಸರಿ ೩೦೦ ಪೌಂಡಿಗಿಂತ ...ಕಲು ಕೊಡುವದಿಲ್ಲ. ಪೂರ್ವ ಪಂಜಾಬ... ಮಕ್ಕಳಲ್ಲಿಯೂ ವರ್ಷಕ್ಕೆ ಪ್ರತಿ ವನದ...

ಇಂಡೋನೇಶಿಯದ ಉಧ್ವಸ್ತ ಪರಿಸ್ಥಿತಿ

ಇಂಡೋನೇಶಿಯದಲ್ಲಿ ಪ್ರಜಾರಾಜ್ಯದ ವಿರುದ್ಧ ಡಚ್ಚರು ತೆಗೆದುಕೊಂಡ "ಪೋಲೀಸು ಕ್ರಮು" ಮತ್ತು ಆ ಸಂಬಂಧವಾಗಿ ಭದ್ರತಾಮಂಡಲ ಚರ್ಚೆ ನಡೆಸಲು ಸಭೆ ಸೇರಿದ್ದು ಆಗಲೇ ವಿದಿತವಾಗಿದೆ. ಸಭೆ ಒಮ್ಮತದಿಂದ ಡಚ್ಚರೂ ಪ್ರಜಾರಾಜ್ಯದವರೂ ಯುದ್ಧ ನಿಲ್ಲಿಸಬೇಕೆಂದು ಆಜ್ಞೆಯಿತ್ತುದು ಅನಂತರ ತಿಳಿದುಬಂದಿದೆ. ಆದರೆ ಆ ಆಜ್ಞೆಯ ಮೇರೆಗೆ ಡಚ್ಚರು ನಡೆದುಕೊಳ್ಳದಿದ್ದುದರಿಂದ ಚೀನದ ಪ್ರತಿನಿಧಿಯು ತಾ. ೨೮ ರಲ್ಲಿ ಒಂದು ಗೊತ್ತುವಳಿಯನ್ನು ಮಂಡಿಸಿ, ಡಚ್ಚರು ಇಂಡೋನೇಶಿಯದಲ್ಲಿ ರಾಜಕೀಯ ಕೈದಿಗಳನ್ನು ಕೂಡಲೆ ಬಿಡುಗಡೆ ಮಾಡಿ ೨೪ ತಾಸುಗಳೊಳಗೆ ವರದಿ ಮಾಡಬೇಕೆಂದು ಪ್ರತಿಪಾದಿಸಿದನು.

ಯುದ್ಧವನ್ನು ಈಗಿಂದೀಗ ನಿಲ್ಲಿಸುವಂತೆ ಭದ್ರತಾಮಂಡಲವು ಬಲವಾಗಿ ಆಜ್ಞೆ ವಿಧಿಸಬೇಕೆಂಬ ಬಗ್ಗೆ ರಶಿಯ ಮತ್ತು ಯುಕ್ರೇನಿನ ಪ್ರತಿನಿಧಿಗಳು ತಂದ ಗೊತ್ತುವಳಿಯನ್ನು ಭದ್ರತಾಮಂಡಲ ನಿರಾಕರಿಸಿತೆಂದು ಸುದ್ದಿ. ಇದರ ಅರ್ಥವಾಗುವುದು ಕಷ್ಟವಲ್ಲ. ಭದ್ರತಾಮಂಡಲ ಇಂದಿನವರೆಗೆ ಎಲ್ಲೂ ತನ್ನ ಆಜ್ಞೆಯನ್ನು ಉಲ್ಲಂಘಿಸಿದಲ್ಲಿ ಅದನ್ನು ಅನುಸರಿಸಲು ತಕ್ಕ ಕ್ರಮವನ್ನು ಕೈಕೊಳ್ಳಲು ಎಂದೂ ಶಕ್ತವಾಗಿಲ್ಲ, ಅಲ್ಲದೆ ಇಲ್ಲಿಯ ವರೆಗೆ ಅದು ಅನುಸರಿಸುತ್ತ ಬಂದ ಶಿಥಿಲ ಧೋರಣದ ಮೂಲಕ ಡಚ್ಚರಿಗೆ ಅನುಕೂಲ ಮಾಡಿಕೊಡುತ್ತ ಬಂದುದೂ ಸ್ಪಷ್ಟವಾಗಿದೆ. ಆದರೆ ಏಶಿಯದ ರಾಷ್ಟ್ರಗಳ ಮನಸ್ಸಿಗೆ ಇದು ಸರಿದೋರಿಲ್ಲ. ಅದರಲ್ಲೂ ಭಾರತ ಇದರಿಂದ ಬಹಳ ಅತೃಪ್ತವಾಗಿದೆ.

ತಾ ೨೭ ರ ಸಭೆಯಲ್ಲಿ ಹಾಲಂಡಿನ ಪ್ರತಿನಿಧಿಗಳಾದ ವಾನ್ ರಾಯಿನ್ನರು ಕೆಳಗಿನ ಅಂಶಗಳನ್ನು ಸಭಿಕರ ಮುಂದಿಟ್ಟರು:

(೧) ಡಚ್ ಸರಕಾರವು ಭದ್ರತಾ ಮಂಡಲದ ಶುಕ್ರವಾರದ ಗೊತ್ತುವಳಿಯನ್ನು ಗಮನಕ್ಕೆ ತಂದು ಕೊಟ್ಟಿರುವರು.

(೨) ಈ ತಂಟೆ ಭದ್ರತಾಮಂಡಲದ ಅಧಿಕಾರ ಕ್ಷೇತ್ರದ ಹೊರಗಿನದೆಂದು ನಮ್ಮ ಅಭಿಪ್ರಾಯವಿದ್ದರೂ ಗೊತ್ತುವಳಿಯನ್ನು ಸೂಕ್ಷ್ಮವಾಗಿ ವಿಚಾರಿಸಿ ಕೊನೆಯ ನಿರ್ಣಯ ಕೈಕೊಳ್ಳಲು ಇಂಡೋನೇಶಿಯದಿಂದ ವಿವರಗಳನ್ನು ಕೇಳಲಾಗಿದೆ.

(೩) ಈಗ ಕೈಕೊಂಡಿರುವ ಕ್ರಮ ಯುದ್ಧವಲ್ಲ. ಜಾವಾದಲ್ಲಿಯ ಕ್ರಮ ಮುಗಿಯುತ್ತ ಬಂದಿದೆ.

(೪) ಅಖಿಲ ಇಂಡೋನೇಶಿಯ ಸರಕಾರವನ್ನು ಸ್ಥಾಪಿಸಲಾಗಿರುವುದು. ಈ ಮಧ್ಯೆ ಬಟೇವಿಯದಲ್ಲಿ ೧೪೦ ರಿಪಬ್ಲಿಕನ್ನರನ್ನು ಮುಕ್ತ ಮಾಡಲಾಗಿದೆ.

(೫) ಡಿಸೆಂಬರ ೧೨ ರ ನಂತರದ ಪರಿಸ್ಥಿತಿಯನ್ನು ಅವಲೋಕಿಸಲು ಸದಿಚ್ಛಾ ಸಮಿತಿಯವರಿಗೆ ಅವಕಾಶ ಕೊಡಬೇಕು.

ಹಿಂದೀ ಪ್ರತಿನಿಧಿಯ ಗರ್ಜನೆ

ಅನಂತರ ಹಿಂದೀ ಪ್ರತಿನಿಧಿಗಳಾದ ಶ್ರೀ ಧೀರುಭಾಯಿ ದೇಸಾಯಿಯವರು ಡಚ್ಚರು ಶುಕ್ರವಾರದ ಗೊತ್ತುವಳಿಯನ್ನು ಸ್ವೀಕರಿಸಿದ್ದು ಮಾತಿನಿಂದಲ್ಲದೆ ಕೃತಿಯಿಂದಲ್ಲ, ಅವರ ಸರಕಾರದ ಉತ್ತರ ಎಂದು ಬರುವುದೆಂಬುದನ್ನು ಕೂಡ ಅವರು ತಿಳಿಸಿಲ್ಲ, ಜಾವಾದಲ್ಲಿಯ ಅವರ ಕ್ರಮ ಮುಗಿಯುವ ವರೆಗೆ ನಾವು ಕಾದಿ ಬೇಕೆಂಬ ಅವರ ಮಾತು ಸಮಂಜಸವೆನ್ನಲು ಸಾಧ್ಯವಿಲ್ಲ. ಡಾ ಸೋಯ್ಕಾರ್ನೋ ಮತ್ತು ಇತರ ರಾಜಕೀಯ ಕೈದಿಗಳನ್ನು ಕೂಡಲೆ ಮುಕ್ತ ಮಾಡಬೇಕು. ಅಂಥ ಮಾನ್ಯ ವ್ಯಕ್ತಿಗಳನ್ನು ಅಪಮಾನಾಸ್ಪದರೀತಿಯಲ್ಲಿ ನಡೆಸಿಕೊಳ್ಳುತ್ತಿರುವುದು ಖಂಡನೀಯ; ಹೋಗ್ ಜಕಾರ್ತದಲ್ಲಿರುವ ಹಿಂದೀ ಪ್ರತಿನಿಧಿಯನ್ನು ಹೊರಗೆ ಹಾಕಿದ್ದು ಅಕ್ಷಮ್ಯ ಎಂದು ಡಚ್ಚರ ದುರ್ವಿನೀತ ವೃತ್ತಿಯನ್ನು ಪ್ರತಿಭಟಿಸಿದರು. ಹಿಂದುಸ್ತಾನವು ಏಶಿಯದ ದಾಸರಾಷ್ಟ್ರಗಳ ದಾಸ್ಯವಿಮೋಚನೆಗಾಗಿ ಸೊಂಟಕಟ್ಟಿ ನಿಂತಿರುವುದನ್ನು ಇದು ಚೆನ್ನಾಗಿ ನಿದರ್ಶಿಸುತ್ತದೆ. ಆದರೆ ಸಭೆಯ ಸದಸ್ಯರಲ್ಲಿಯ ಬಹುಸಂಖ್ಯ ಬಿಳಿಯರ ಮೇಲೆ ಸಮರ್ಥನೆ ಅಷ್ಟೇನೂ ಪರಿಣಮ ಮಾಡಿದಂತೆ ತೋರಲಿಲ್ಲ. ಅದರಿಂದಲೇ ಅವರು ಯುದ್ಧ ನಿಲ್ಲಿಸುವಂತೆ ಆಜ್ಞಾಪಿಸಲು ರಶಿಯ ಯುಕ್ರೇನುಗಳು ತಂದ ಗೊತ್ತುವಳಿಯನ್ನು ಸ್ವೀಕರಿಸದೆ ಸಭೆಯನ್ನು ಮುಂಬರಿಯಗೊಟ್ಟರು. ಇನ್ನು ನಾಳಿನ ಸಭೆಯ ಹೊತ್ತಿಗೆ ಅವರ ತಲೆ ಹೇಗೆ ಹರಿಯುವುದೋ ನೋಡಬೇಕಾಗಿದೆ.



ಸೆರೆಯಲ್ಲಿರುವ ಪ್ರಜಾರಾಜ್ಯದ ಅಧ್ಯಕ್ಷ ಡಾ ಸೋಯ್ಕಾರ್ನೋ

ಪ್ರಜಾರಾಜ್ಯದ ವಿಜಯೋಂಕ

ಇಂಡೋನೇಶಿಯನ್ನರು ಸುಮಾತ್ರದಲ್ಲಿ ಪ್ರತಿದಾಳಿ ಮಾಡಿ ಮೂರು ನಗರಗಳನ್ನು ಪುನಃ ಆಕ್ರಮಿಸಿರುವರೆಂದು ತಿಳಿಯುತ್ತದೆ. ದೃಢನಿಶ್ಚಯದಿಂದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳ ಹೊರಟ ಅವರು ಸಾಮಾನ್ಯ ಅಡ್ಡಿ ಅಡಚಣೆಗಳಿಗೆ ಸೊಪ್ಪುಹಾಕುವವರಲ್ಲ. ಅವರ ಕೂಟಯುದ್ಧದ ದಲಗಳ ಸಾಹಸ ದುರ್ದಮ್ಯವಾದುದು. ಈಗ ಅವು ಜಾವಾದ ಉತ್ತರ ತೀರದಲ್ಲಿ ದ್ವಿಗುಣಿತ ಉತ್ಸಾಹದಿಂದ ಹರಿಹಾಯ್ದು ದ್ಯಾತಿಬಾರಂಗವೆಂಬ ರೇಲ್ವೇ ಪಟ್ಟಣವನ್ನು ದಾಳಿಗೀಡುಮಾಡಿವೆ. ಅಲ್ಲಿಗೆ ಮತ್ತೆ ಬಂದ ಡಚ್ ಸೈನಿಕರ ಕೈ ಒಮ್ಮೆ ಮೇಲಾದರೂ ಕಡೆಯ ಗೆಲುವಿಗಾಗಿ ಕೂಟಯೋಧರು ಸನ್ನದ್ಧರಾಗಿ ಸಾಗುತ್ತಿದ್ದಾರೆ. ಡಚ್ಚರ ಆಸ್ತಿ ಪಾಸ್ತಿಗಳಿರುವ ಸ್ಥಳಗಳ ಮೇಲೆ "ಹೊಡೆ, ಓಡು" ಎಂಬ ಮಾದರಿಯ ದಾಳಿಮಾಡಲು ಪೂರ್ವ ಜಾವಾದಲ್ಲಿರುವ ಪ್ರಜಾರಾಜ್ಯದ ಸೇನಾಪತಿ ಸುಂಕೋನೋ ಅಪ್ಪಣೆ ಕೊಟ್ಟಿದ್ದಾನೆ. ಅಲ್ಲದೆ ಅಧ್ಯಕ್ಷ ಸೋಯ್ಕಾರ್ನೋ ಮುಂತಾದವರನ್ನು ಡಚ್ಚರು ಸೆರೆಮನೆಯಲ್ಲಿಟ್ಟಿದ್ದರೂ ಪ್ರಜಾರಾಜ್ಯದ ರಾಜಧಾನಿಯನ್ನು ಸುಮಾತ್ರದಲ್ಲಿ ಸ್ಥಾಪಿಸಿಕೊಂಡು ರಾಜ್ಯಭಾರ ಮಾಡಲಾಗುವದೆಂದು ಪ್ರಜಾರಾಜ್ಯದ ಆಕಾಶವಾಣಿ ಸಾರಿದೆ.

ಸಹಾನುಭೂತಿ

ಡಚ್ ವಿರೋಧಿ ಘೋಷಣೆಗಳೊಡನೆ ಸಾಗಿದ್ದ ಸುಮಾರು ೫೦೦ ಕ್ಕಿಂತಲೂ ಹೆಚ್ಚಿದ್ದ ವಿದ್ಯಾರ್ಥಿಗಳ ಒಂದು ಪಡೆಯ ಮೇಲೆ ಮುಂಬಯಿಯ ಚರ್ಚಗೇಟ್ ನಿಲ್ದಾಣದ ಹತ್ತಿರ ಪೋಲೀಸರು ಸ್ವಲ್ಪ ಲಾಠಿ ಪ್ರಹಾರ ಮಾಡಿದರು. ಅದರಿಂದ ೯ ಜನರಿಗೆ ಗಾಯ, ೧೨ ಜನರಿಗೆ ಬಂಧನ ಸಂಭವಿಸಿತು. ಈ ಮತಪ್ರದರ್ಶನಕ್ಕೆ ಮುಂಬಯಿ ಬಂದರಿಗೆ ಡಚ್ ಹಡಗು ಬಂದದ್ದೇ ಕಾರಣ. ವಿದ್ಯಾರ್ಥಿಗಳು ಮೊದಲು ಅದರೆದುರು ಮತಪ್ರದರ್ಶನ ಮಾಡಿದರು. ಹಡಗನ್ನೇರಲು ಅನಂತರ ಅವರು ಪ್ರಯತ್ನಿಸಿದಾಗ ಪೋಲೀಸರು ಅವರನ್ನು ತಡೆದರು. ಆಗ ಆ ಮೆರವಣಿಗೆ ಮೇಲೆ ಹೇಳಿದ ನಿಲ್ದಾಣದಲ್ಲಿ ಮುಗಿಸಬೇಕಾಗಿದ್ದರೂ ಮುಂದೆ ಸಾಗಿ ಕೆಲವರು ಕಲ್ಲೆಸೆದ ಪ್ರಯುಕ್ತ ಪೋಲೀಸರು ಲಾಠಿ ಪ್ರಹಾರಕ್ಕೆ ಕೈಹಾಕಬೇಕಾಯಿತು. ಆದರೆ ಇದರಿಂದ ಹಿಂದುಸ್ತಾನದ ವಿದ್ಯಾರ್ಥಿಗಳ ಅಖಂಡ ಸಹಾನುಭೂತಿ ಇಂಡೋನೇಶಿಯನ್ನರಿಗಿದೆ ಎಂಬುದು ಸ್ಪಷ್ಟವಾದಂತಾಯಿತು.

ಹಾರ್ನಬಿ ರಸ್ತೆಯಲ್ಲಿರುವ ರಾಯಭಾರಿ ಕಚೇರಿಯ ಮುಂದಿದ್ದ ಡಚ್ ರಾಜ ಚಿಹ್ನವನ್ನು ವಿದ್ಯಾರ್ಥಿಗಳು ಕಿತ್ತುಕೊಂಡು ಹೋಗಿದ್ದು ಅದನ್ನೀಗ ಪೋಲೀಸರು ಪಡೆದುದಾಗಿಯೂ ಮುಂಬಯಿ ಸರಕಾರದ ಪ್ರತಿನಿಧಿಯು ಅದನ್ನು ಅಧಿಕೃತವಾಗಿ ಡಚ್ ರಾಯಭಾರಿಗೆ ಮುಟ್ಟಿಸಲಿರುವನೆಂದೂ ತಿಳಿಯುತ್ತದೆ.

ಇಂಡೋನೇಶಿಯನ್ನರಲ್ಲಿ, ಡಚ್ ವರದಿಯ ಪ್ರಕಾರ, ಈ ವರೆಗೆ ೨೪೦ ಜನರು ಡಚ್ಚರ ದಾಳಿಯಿಂದ ಕ್ಷತರಾಗಿದ್ದಾರೆಂದೂ ಅದರ ಸುಮಾತ್ರದಲ್ಲಿ ೧೧೬ ಜನರು ಸೆರೆಸಿಕ್ಕಿರುವರೆಂದೂ ಗೊತ್ತಾಗುತ್ತದೆ. ಅವರನ್ನು ಅನಾಗರಿಕ ರೀತಿಯಿಂದ ನಡೆಸಿಕೊಂಡದ್ದಕ್ಕೆ ಭಾರತ ಸರಕಾರ ತನ್ನ ಪ್ರತಿನಿಧಿಯಮೂಲಕ ಭದ್ರತಾ ಮಂಡಳಕ್ಕೆ ಪ್ರತಿಭಟನೆಯನ್ನು ತಿಳಿಸುವದೆಂದು ತಿಳಿದಿದೆ. ಶ್ವೇತರ ಸಾಮ್ರಾಜ್ಯಶಾಹಿಗೆ ಏಶಿಯದ ರಾಷ್ಟ್ರಗಳ ಸಮ್ಮತಿದೊರೆಯದು. ಡಚ್ಚರ ಪಕ್ಷವಹಿಸಿ ಪ್ರತ್ಯಕ್ಷಾಪ್ರತ್ಯಕ್ಷರೀತಿಯಿಂದ ಭದ್ರತಾ ಮಂಡಲದ ಬಿಳಿಯರು ಇಂಡೋನೇಶಿಯದ ಅಹಿತವಾಗುವಂತೆ ನಡೆದುಕೊಂಡರೆ ಏಶಿಯನ್ನರ ಅಪ್ರೀತಿಗೆ ಅವರು ಪಾತ್ರರಾಗಲೇಬೇಕಾಗುವುದು ಖಂಡಿತ.

ಇಂಡೋಚೀನಕ್ಕೆ ಫ್ರೆಂಚ ಕೈಗೊಂಬೆ

ವೀಯಟ್ನಾಮಿನ ತಾತ್ಕಾಲಿಕ ಕೇಂದ್ರ ಸರಕಾರದ ಮುಖ್ಯಮಂತ್ರಿ ನ್ಗುಯೆನ್ ವಾನ್ ಕ್ಷುವನನು ಒಂದು ಹೇಳಿಕೆಯಲ್ಲಿ, ಪ್ಯಾರಿಸ್ಸಿನಿಂದ ಇಂಡೋ ಚೀನದ ಹಿಂದಿನ ಚಕ್ರವರ್ತಿ ಬಾವದಾಯಿ ಬಂದೊಡನೆ ತನ್ನ ಸರಕಾರ ರಾಜೀನಾಮೆ ಕೊಡುವುದೆಂದು ಹೇಳಿದ್ದಾನೆ.

ಈಜಿಪ್ತದಲ್ಲಿ ಕೊಲೆ

ಈಜಿಪ್ತದ ಮುಖ್ಯಮಂತ್ರಿಗಳಾದ ನೋಕ್ರಾಶಿಪಾಶಾರು ಕಳೆದ ತಾ ೨೭ ರಲ್ಲಿ ಕೊಲೆ ಮಾಡಲ್ಪಟ್ಟರು. ಅವರ ಸ್ಥಳಕ್ಕೆ ಇಬ್ರಾಹಿಂ ಹದಿ ಪಾಶಾರನ್ನು ನಿಯಮಿಸಲಾಯಿತು. ಅವರು ಹಳೆಯ ಮಂತ್ರಿಮಂಡಲವನ್ನು ಬದಲಿಸದೆ ಹಾಗೆಯೇ ಇಡಲು ನಿರ್ಧರಿಸಿದ್ದಾರೆಂದು ತಿಳಿಯುತ್ತದೆ.

ನ್ಯಾನ್‌ಕಿಂಗ್ ಕದನ

ಆಗಲೇ ನ್ಯಾನ್‌ಕಿಂಗ್ ಪತನವಾಯಿತೋ ಏನೋ ಎಂಬ ... ಪರಿಸ್ಥಿತಿಯುಂಟಾದದ್ದು ಸ್ಪಷ್ಟವಿದೆ. ಹೀಗಿದ್ದರೂ ಚಿಯಾಂಗರ ಸೈನ್ಯ ಭಗೀರಥ ಪ್ರಯತ್ನದಿಂದ ಈ ವರೆಗೆ ಜೀವದಾಸೆ ಬಿಟ್ಟು ಕಾದಿ ಅದನ್ನು ಉಳಿಸಿಕೊಂಡಿದೆ. ಚಿಯಾಂಗರು ಅವರ ಬೆಂಬಲಕ್ಕಾಗಿ ತಮ್ಮ ಎಂಟನೆಯ ದಲವನ್ನು ೧೨೦ ಮೈಲು ಉತ್ತರದಲ್ಲಿರುವ ಪೆಂಗ್‌ಪೂವಿನಿಂದ ಕರೆಸಿದ್ದಾಗಿ ತಿಳಿಯುತ್ತದೆ. ಯಾಂಗ್‌ಟ್ಸೇ ನದಿಯ ದಂಡೆಯಲ್ಲಿ ಅದನ್ನು ಮತ್ತೊಂದು ಸಂರಕ್ಷಣಾ ಪಂಕ್ತಿಯನ್ನು ರಚಿಸಲು ಬಳಸಿಕೊಳ್ಳಲಾಗಿದೆ. ಪೆಂಗ್‌ಪೂವಿಗೆ ಚಿಯಾಂಗರ ಆರನೆಯ ದಲ ಹೋಗಿದೆ. ಹೀಗಿದ್ದರೂ ತ್ಸೇಯೋಯಂಗ್ ಮತ್ತು ಸುಹ್‌ಸೀನ್ ಪಟ್ಟಣಗಳನ್ನು ಕಮ್ಯುನಿಸ್ಟರು ಹಿಡಿದಿದ್ದಾರೆಂದು ಸರಕಾರೀ ವರದಿಯಿದೆ. ಟೀಂಟ್ಸೀನಿನ ಬಾವರಾಸ ತಂಗ್‌ಕೂವಿನಿಂದ ಸರಕಾರೀ ಠಾಣೆಗಳೆಲ್ಲವನ್ನೂ ಖಾಲಿಮಾಡಲಾಗಿದೆಯೆಂದೂ ಕಮ್ಯುನಿಸ್ಟರು ಅದರ ಮೇಲೆ ಘೋರದಾಳಿಗೆ ಸಜ್ಜಾಗಿರುವರೆಂದೂ ತಿಳಿಯುತ್ತದೆ. ಆದರೆ ಚಿಯಾಂಗರ ಹೊಸ ಸರಕಾರವೇನೋ ಕಡೆಯತನಕ ಕಾದುವ ನಿರ್ಧಾರ ಮಾಡಿದೆಯೆಂದು ಅವರು ಸಾರುತ್ತಾರೆ.

ಯೆಹೂದಿಗಳ ದಂಡಯಾತ್ರೆ

ಇಸ್ರೇಲಿನ ಸೈನಿಕರು ಈಜಿಪ್ತದ ಮೇಲೆ ದಂಡಯಾತ್ರೆ ಕೈಕೊಂಡಿರುವರೆಂದೂ ಅವರು ಆಗಲೇ ಅದರೊಳಗೆ ನುಗ್ಗಿರುವರೆಂದೂ ಕೈರೋದಲ್ಲಿರುವ ಬ್ರಿ. ರಾಯಭಾರಿಯ ಕಚೇರಿಯಿಂದ ತಂತಿ ಬಂದಿರುವುದಾಗಿ ತಿಳಿಯುತ್ತದೆ.

ಬೆಂಗಳೂರು ಮೈಸೂರುಗಳಲ್ಲಿ ಪಂ. ಜವಾಹರರು

ಚೆಲುವಾಂಬಾ ಅರಮನೆಯ ಅರ್ಪಣೆ

ಭಾಷಾನುಗುಣ ಪ್ರಾಂತೀಕರಣ ಈಗ ಬೇಡ

ಭಾರತದ ಮುಖ್ಯಮಂತ್ರಿಗಳಾದ ಪಂ. ಜವಾಹರಲಾಲ್ ನೆಹರು ಅವರು ಬೆಂಗಳೂರಿಗೆ ಹೈದರಾಬಾದಿನಿಂದ ವಿಶೇಷ ವಿಮಾನದಲ್ಲಿ ತಾ. ೨೮ ರಂದು ಮಧ್ಯಾಹ್ನ ೩ ಗಂಟೆಗೆ ವಿಮಾನ ಮೂಲಕ ಆಗಮಿಸಿದರು. ಪಂಡಿತರು ಅಲ್ಲಿ ನೆರೆದ ಪ್ರಚಂಡ ಜನಸಮೂಹಕ್ಕೆ ವಿಮಾನದಿಂದ ಇಳಿ ಯುತ್ತಲೇ ಕೈಮುಗಿದು ವಂದಿಸಿದರು. ಅವರನ್ನು ಮೈಸೂರು ಕಾಂಗ್ರೆಸ್ ಅಧ್ಯಕ್ಷರೂ ಮೈಸೂರು ದಿವಾನರೂ ಮೈಸೂರಿನ ಮುಖ್ಯ ಮಂತ್ರಿಗಳೂ ಭಾರತದ ಪಾರ್ಲಮೆಂಟಿನವರಾದ ಶ್ರೀ ದಿವಾಕರರೂ ಸಂಪ್ರದಾಯದಂತೆ ಸ್ವಾಗತಿಸಿದರು.

ಪಂ. ಜವಾಹರಲಾಲರ ಜೊತೆಗೆ, ಶ್ರೀಮತಿ ಮ್ಯಾಡಾಲೀನ್ ಸಾರಾಭಾಯಿ, ದೆಹಲಿಯಂ ರಾಯಭಾರಿಯ ಪುತ್ರಿ, ಜೋಗಿಂದರ್ ಬಿ. ಸಿಂ, ಹೈದರಾಬಾದ ಮಿಲಿಟರಿ ಗವರ್ನರರ ಪತ್ನಿ ಶ್ರೀಮತಿ ಚೌಧರಿಯವರು, ಮುಖ್ಯ ಪ್ರಧಾನರ ಕಾರ್ಯದರ್ಶಿ ಶ್ರೀ ಎಂ. ಓ. ಮಥಾಯ್‌ರವರೂ, ಭಾರತ ಸರಕಾರದ ಮುಖ್ಯ ವಾರ್ತಾಧಿಕಾರಿ ಶ್ರೀ ಎ. ಎಸ್. ಅಯ್ಯಂಗಾರರೂ ಇವರೇ ಮೊದಲಾದವರು ಇದ್ದರು.

ದಿವಾನರು ಪಂ. ನೆಹರು ಅವರಿಗೆ ಎಲ್ಲ ಮಂತ್ರಿಗಳ ಪರಿಚಯವನ್ನು ಮಾಡಿಕೊಟ್ಟರು. ಇವರು ಸಾಗಿಹೋಗುವ ಬೀದಿಗಳೆಲ್ಲ ಹಸಿರು ಬಳ್ಳಿಗಳಿಂದಲೂ ತಳಿರು ತೋರಣ ಗಳಿಂದಲೂ ಸಿಂಗರಿಸಲ್ಪಟ್ಟಿದ್ದವು.

ಆರ್. ಐ. ಎ. ಎಫ್. ದಳದವರು ಗೌರವ ರಕ್ಷೆ ಸಲ್ಲಿಸಿದರು.

ವಿಮಾನ ಪಡೆಯುವರನ್ನುದ್ದೇಶಿಸಿ ಪಂ. ಜವಾಹರಲಾಲರು, ರಾಷ್ಟ್ರ ನಿರ್ಮಾಣದ ಭಾರವು ಯುವಜನರನ್ನೇ ಸೇರಿದೆ, ನೀವು ತ್ಯಾಗ ಬುದ್ಧಿಯಿಂದ ನಿಮ್ಮ ಕರ್ತವ್ಯ ಪಾಲನೆ ಮಾಡ ಬೇಕು ಎಂದು ಮೊದಲಾಗಿ ಹಿತೋಕ್ತಿಗಳನ್ನು ಹೇಳಿದರು.

ತೆರೆದ ಕಾರಿನಲ್ಲಿ ಮಾನ್ಯ ಪಂಡಿತರು ಪುರ ಪ್ರವೇಶ ಮಾಡಿದರು. ಕಾರಿನಲ್ಲಿ ದಿವಾನರೂ ಶ್ರೀ ದಿವಾಕರರೂ ಅವರೂ ಶ್ರೀ ದಿವಾಕರರೂ ಕುಳಿತಿದ್ದರು.

ಬೀದಿಯುದ್ದಕ್ಕೂ ಶಿಸ್ತಿನಿಂದ ಜನರು 'ನೆಹರೂಕಿ ಜಯ' ಎಂದು ಘೋಷಿಸುತ್ತಿದ್ದರು.

ವಿನೋದ

ಮೈಸೂರು ಮುಖ್ಯ ಮಂತ್ರಿಗಳು, ಜವಾಹರಲಾಲರನ್ನುದ್ದೇಶಿಸಿ, ಕಾರಿನಲ್ಲಿ ತಾವು ಬೈಠೇ ಕುಳಿತರೆ ಜನರೆಲ್ಲ ನಿಮ್ಮನ್ನು ಗುರುತಿಸಿ ಹರ್ಷದ ರಾಭಸಪಡೆವರು ಎನ್ನಲು, ಪಂ. ಜವಾಹರಲಾಲರು ನಗುತ್ತ, ನೀವು ಬಳಿಯಲ್ಲಿ ಕುಳಿತರೆ ಜನ ನನ್ನನ್ನು ಗುರುತಿಸಲಾರರೆಂದು ಅನ್ನುತ್ತಿದ್ದೀರಿ ಎನ್ನಲು ಅದನ್ನು ಕೇಳಿ ನೆರೆಗಿದ್ದವರೆಲ್ಲ ಬಿದ್ದುಬಿದ್ದು ನಕ್ಕರು. ಭಾರತದ ಮುಖ್ಯಪ್ರಧಾನರು ಮೈಸೂರ ಪ್ರಭುತ್ವದ ಅತಿಥಿಗಳಾಗಿ ಬೀಡಾರ ಮಾಡಿದರು.

ಹೋಟೆಲ್ ಊಟ, ಭರತ ನಾಟ್ಯ

ಮೈಸೂರ ದಿವಾನರಾದ ರಾಜಮಂತ್ರಪ್ರವೀಣ ಸರ್ ಎ. ರಾಮಸ್ವಾಮಿ ಮೊದಲಿಯಾರರು ಪಂ. ನೆಹರು ಅವರ ಗೌರವಾರ್ಥವಾಗಿ ತಾ. ೨೮ ರ ಸಂಜೆಗೆ ಅರಮನೆಯ ಅವರಣದಲ್ಲಿ ವನಭೋಜನ ಏರ್ಪಡಿಸಿದ್ದರು. ಸುಮಾರು ಒಂದು ಸಾವಿರ ಅಧಿಕಾರಿಗಳು ಮತ್ತು ಸಾರ್ವಜನಿಕ ಮುಖಂಡರು ಆಮಂತ್ರಿತರಾಗಿದ್ದರು. ಈ ಸಂದರ್ಭದಲ್ಲಿ ಶ್ರೀ ದಿವಾಕರರು ಆಗಮಿಸಲು ಅವರನ್ನು ದಿವಾನರೂ ಅವರ ಪತ್ನಿಯವರೂ ಸ್ವಾಗತಿಸಿದರು. ಭರತನಾಟ್ಯದಿಂದ ಅತಿಥಿಗಳನ್ನು ಸಂತೋಷಗೊಳಿಸಲಾಯಿತು.

ಹೋಟೆಲೂಟದ ಮೊದಲು ಪಂಡಿತ ನೆಹರು ಅವರು ಮೈಸೂರು ಕಾಂಗ್ರೆಸಿನ ಪ್ರಮುಖ ಕಾರ್ಯಕರ್ತರ ಸಭೆಯಲ್ಲಿ ಭಾರತದ ಭಾಷೆ, ಸಂಸ್ಕೃತಿ ಇತ್ಯಾದಿ ವಿಷಯಗಳ ಮೇಲೆ ಮಾತನಾಡಿದರು. ಈ ಸಭೆಯಲ್ಲಿ ಜವಾಹರಲಾಲರ ಜೊತೆಗೆ ಶ್ರೀ ದಿವಾಕರರೂ ಶ್ರೀಮತಿ ಮ್ಯಾಡಾಲೀನ್ ದೇವಿಯರೂ ಇದ್ದರು.

ಪಂ. ಜವಾಹರಲಾಲರಿಗೆ ತಾ. ೨೯ ರಂದು ಇಡೀ ದಿನವೆಲ್ಲ ಬಗೆಬಗೆಯ ಕಾರ್ಯಕ್ರಮಗಳಿಂದ ತುಂಬಿಹೋಗಿತ್ತು. ಮುಂಜಾನೆ ಬೆಂಗಳೂರು ನಗರ ಸಭೆಯವರು ಪಂ. ನೆಹರು ಅವರಿಗೆ ಮಾನಪತ್ರ ಅರ್ಪಿಸಿದರು. ಪಂಡಿತರ ಸುವರ್ಣಜ್ಯೋತಿ ಭಾಷಣಕೇಳಲು ರೇಸಕೋರ್ಸ್ ಕ್ಕೆ ಇಪ್ಪತ್ತೈದು ಸಾವಿರ ಲಕ್ಷಕ್ಕೂ ಮೇಲ್ಪಟ್ಟು ಜನ ನೆರೆದಿದ್ದರು. ಜವಾಹರಲಾಲರು ಸಭಾ ಸ್ಥಳಕ್ಕೆ ಬಂದಕೂಡಲೆ, "ಪಂ. ನೆಹರೂಕಿ ಜೈ" ಎಂದು ಪ್ರಚಂಡ ಜಯಘೋಷವಾಗಿ ಅವರನ್ನು ಜನತೆ ಸ್ವಾಗತಿಸಿತು. ಜವಾಹರಲಾಲರು ತಮ್ಮ ಭಾಷಣದಲ್ಲಿ, ಭಾಷಾನುಗುಣ ಪ್ರಾಂತ ರಚನೆ, ಜಾತೀಯತೆ, ಪ್ರಾಂತೀಯತೆ, ತಮ್ಮ ನಿಲುವು, ರಾಷ್ಟ್ರಭಾಷೆ, ಸಂಸ್ಥಾನಗಳ ಪ್ರಶ್ನೆ, ಆತಿಪ್ರಸರಣ ಇವೇ ಮೊದಲಾದ ವಿಷಯಗಳನ್ನು ಉಲ್ಲೇಖಿಸಿದರು.

೧೭ ವರ್ಷಾನಂತರ

"ನಾನು ಈ ಸಂಸ್ಥಾನಕ್ಕೆ ಬಂದದ್ದು ೧೭ ವರ್ಷಗಳನಂತರ. ಈ ಅವಧಿಯಲ್ಲಿ ಎಷ್ಟೋ ಸ್ಥಿತ್ಯಂತರಗಳಾಗಿ ಹೋಗಿವೆ. ನಾವಿಬ್ಬರೂ ಸ್ವಾತಂತ್ರ್ಯವನ್ನು ಬಹು ಪ್ರಯಾಸದಿಂದ ಸಂಪಾದಿಸಿದ್ದೇವೆ. ಅದಕ್ಕೂ ಹೆಚ್ಚಿನ ಪ್ರಯಾಸದಿಂದ ಬಂದ ಸ್ವಾತಂತ್ರ್ಯವನ್ನು ಕಾಯ್ದುಕೊಳ್ಳಬೇಕಾಗಿದೆಯಲ್ಲದೆ ರಾಷ್ಟ್ರದ ಅಭಿವೃದ್ಧಿಯನ್ನೂ ಮಾಡಬೇಕಾಗಿದೆ. ನಮ್ಮನಿಮ್ಮ ಗುರಿಯೂ ಒಂದೇ ಆಗಿದೆ. ಸದ್ಯಕ್ಕೆ ಪ್ರಾಂತೀಯತೆಯ ಭಾವನೆಯಾಗಲೀ ಭಾಷಾನುಗುಣ ಪ್ರಾಂತರಚನೆಯ ಆಂದೋಲನವಾಗಲಿ ಬೇಡ. ಅವುಗಳಿಗಿಂತ ಹೆಚ್ಚಿನ ಹಾಗೂ ಸೂಕ್ಷ್ಮ ಸಮಸ್ಯೆಗಳನ್ನು ನಾವೀಗ ಎದುರಿಸಿ ರಾಷ್ಟ್ರದ ತಳಹದಿಯನ್ನು ಭದ್ರಪಡಿಸಿಕೊಳ್ಳಬೇಕಾಗಿದೆ. ಭಾಷಾನುಗುಣ ಪ್ರಾಂತೀಕರಣದಿಂದ ರಾಷ್ಟ್ರದ ಆರ್ಥಿಕ ಭದ್ರತೆಗೆ ಪೆಟ್ಟುತಗಲುವ ಹೆದರಿಕೆಯಿದೆ. ಆದ್ದರಿಂದ ಈಗ ಈ ವಿಷಯದಲ್ಲಿ ತಾಳ್ಮೆಯಿಂದಿರಬೇಕು. ಭಾಷಾನುಗುಣ ಪ್ರಾಂತೀಕರಣದ ಪ್ರಶ್ನೆಯನ್ನು ಮನವರಿಕೆಮಾಡಿಕೊಳ್ಳಲು ಅ. ಭಾ. ಕಾಂಗ್ರೆಸು ಒಂದು ಬಲಾಢ್ಯ ಸಮಿತಿಯನ್ನು ನೇಮಿಸಿದ್ದು ಆದರಂತೆ ನಾವು ಈ ಪ್ರಶ್ನೆಯನ್ನು ಪುನಃ ಅಮೂಲಾಗ್ರ ಪರಿಶೀಲಿಸುವೆವು.

"ನಾನು ಇಲ್ಲಿ ಬಂದಿರುವದು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಲಿಕ್ಕಲ್ಲ. ವೈಜ್ಞಾನಿಕ ಸಂಸ್ಥೆಯನ್ನು ಉದ್ಘಾಟಿಸುವದು ಮತ್ತು ಇಂಡಿಯನ್ ವೈಜ್ಞಾನಿಕ ಸಂಸ್ಥೆ ಹಾಗೂ ಹಿಂದುಸ್ಥಾನ ವಿಮಾನ ಕಾರಖಾನೆಗಳಿಗೆ ಭೆಟ್ಟಿಕೊಡುವದು ಇವೇ ನನ್ನ ಬರವಿನ ಮುಖ್ಯ ಉದ್ದೇಶ. ಭಾರತದ ಐಕ್ಯವನ್ನು ಕಾಪಾಡಿರಿ ಎಂದಿಷ್ಟೆ ನಾನು ನಿಮಗೆ ಕೊನೆಯದಾಗಿ ಹೇಳಬಯಸುತ್ತೇನೆ" ಎಂದು ಮೊದಲಾಗಿ ಅವರು ಮಾತನಾಡಿದರು.

ಭಾರತದ ವೈಜ್ಞಾನಿಕ ಸಂಘವನ್ನು ಉದ್ಘಾಟಿಸುತ್ತ, ಇದೇ ಕೆಲಸಕ್ಕಾಗಿ ನಾನು ಈ ನಗರಕ್ಕೆ ಬಂದಿದ್ದರೂ ಅನೇಕ ಕಾರ್ಯಕ್ರಮಗಳ ಮುತ್ತಿಗೆ ತಮ್ಮ ಮೇಲೆ ಬಿದ್ದಿತೆಂದೂ ವಿಮಾನ ಪ್ರಯಾಣದ ಹರ್ಷವನ್ನು ನಮ್ಮ ಜೀವನದ ಮೇಲೂ ಹಿಂದುಸ್ಥಾನದ ಅಭಿವೃದ್ಧಿಯ ಮೇಲೂ ಹೆಚ್ಚಾಗುತ್ತ ಸಾಗಿದೆಯೆಂದೂ ವಾಯುಮಂಡಲಕ್ಕೆ ಸೀಮಾ ನಿರ್ಬಂಧವಿಲ್ಲದ್ದರಿಂದ ಅಲ್ಲಿ ಪ್ರಾಂತಿಕ ಗಡಿಗಳ ಹೊಡೆದಾಟ ಏಳಲಾರದೆಂದೂ ಹೇಳಿ, ಸಂಘವು ಯಶಸ್ವಿಯಾಗಿ ಬಾಳಲಿ ಎಂದು ಹರಸಿದರು.

ಅ. ಭಾ. ವಿಜ್ಞಾನ ಸಂಸ್ಥೆಯಲ್ಲಿ ವಿಜ್ಞಾನ ಪ್ರದರ್ಶನವನ್ನು ಉದ್ಘಾಟಿಸುತ್ತ, "ವಿಜ್ಞಾನದ ಸಂಶೋಧನೆಗೂ ದೇಶದ ಉತ್ಪಾದನೆಗೂ ನಿಕಟ ಸಂಬಂಧವಿದೆ. ಹಿಂದುಸ್ಥಾನದಲ್ಲಿ ಅನೇಕ ಪ್ರಖ್ಯಾತ ವಿಜ್ಞಾನಿಗಳಿದ್ದಾರೆ. ವಿದ್ಯಾರ್ಥಿಗಳ ರೂಪದಲ್ಲಿ ಅಪಾರವಾದ ಸಂಪತ್ತಿದೆ. ತಕ್ಕ ಸಂಘಟನೆ ಬೇಗ ನಡೆದರೆ ನಾಡಿನ ಏಳಿಗೆಗೆ ಅದೆಷ್ಟು ಕಾಲ?" ಎಂದು ಮೊದಲಾಗಿ ನುಡಿದರು.

ಇದೇ ದಿನ ಸಂಜೆಗೆ ವಿದ್ಯಾರ್ಥಿಗಳ ಪ್ರಚಂಡ ಸಭೆಯಲ್ಲಿ ಮಾತನಾಡುತ್ತ, "ನವರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ವಿದ್ಯಾರ್ಥಿಗಳ ಪಾತ್ರವು ಬಹು ದೊಡ್ಡದು ಮತ್ತು ಹೊಣೆಗಾರಿಕೆಯದು. ನಾಡಿನ ಏಳಿಗೆಗೆ ಶೀಲ್ಯಸಂಪನ್ನ ಜನರ ಪಡಿತ ಬೇಕು. ಅದ್ದರಿಂದ ವಿದ್ಯಾರ್ಥಿಗಳು ಬೌದ್ಧಿಕ, ದೈಹಿಕ, ಮಾನಸಿಕ ಶಕ್ತಿಗಳನ್ನು ಹೆಚ್ಚಿಸಿಕೊಂಡು ರಾಷ್ಟ್ರ ನಿರ್ಮಾಣಕ್ಕೆ ಸಜ್ಜಾಗಬೇಕು. ವಿದ್ಯಾರ್ಥಿಗಳು ಒಂದು ರಾಷ್ಟ್ರವನ್ನಷ್ಟೇ ಏಕೆ ಅವರು ಇಡೀ ಮಾನವ ಜನಾಂಗವನ್ನೇ ರೂಪಿಸ ಬಲ್ಲರು ಎಂದು ಮೊದಲಾಗಿ ಹೇಳಿ, ಸ್ವತಂತ್ರ ಭಾರತದ ನಿರ್ಮಾಣಕಾಲದಲ್ಲಿ ಎಲ್ಲರೂ ಭೇದ ಭಾವಗಳನ್ನು ಮರೆತು ಒಂದಾಗಿ ದುಡಿಯಬೇಕು ಎಂದು ಉಪದೇಶಿಸಿದರು.

ಈ ದಿನ ಕೊಡಗಿನ ಶ್ರೀ ಪೂಣಚ್ಚ ಇವರ ನೇತೃತ್ವದಲ್ಲಿ ೧೨ ಜನರ ಕೊಡಗಿನ ಶಿಷ್ಟ ಮಂಡಲವೊಂದು ಪಂ. ಜವಾಹರಲಾಲರನ್ನು ಕಂಡು ಕೊಡಗಿನ ಭವಿತವ್ಯತೆಯ ಬಗ್ಗೆಯೂ ಕೊಡಗು ಮೈಸೂರಲ್ಲಿ ಸೇರುವ ಬಗ್ಗೆಯೂ ತಮ್ಮ ಅಭಿಪ್ರಾಯಗಳನ್ನು ನಿವೇದಿಸಿದರು.

ಮೈಸೂರಲ್ಲಿ ಪಂಡಿತ ಜವಾಹರಲಾಲರು

ಮಂಗಳವಾರ ತಾ. ೨೮ ರ ಮುಂಜಾನೆ ೮-೧೫ ಕ್ಕೆ ಜವಾಹರಲಾಲರು ತಮ್ಮ ಪರಿವಾರದೊಂದಿಗೆ ಮೈಸೂರ ಮಂಡಕಹಳ್ಳಿ ನಿಲ್ದಾಣದಲ್ಲಿ ಬೆಂಗಳೂರಿಂದ ಬಂದಿಳಿದರು. ಮಹಾರಾಜರು ತಮ್ಮ ದಿವಾನರು ಮಂತ್ರಿಗಳು ಇವರೊಂದಿಗೆ ಭಾರತದ ಮುಖ್ಯ ಮಂತ್ರಿ ಜವಾಹರಲಾಲರನ್ನು ಸ್ವಾಗತಿಸಿದರು. ಮೈಸೂರು ಕಾಲ್ಬಲದವರು ಗೌರವರಕ್ಷೆ ಸಲ್ಲಿಸಿದರು. ಮಹಾರಾಜರೊಂದಿಗೆ ಜವಾಹರಲಾಲರು ಲಲಿ ಮಹಾಲ ಅರಮನೆಗೆ ತೆರಳಿದರು ಮತ್ತು ೮-೪೫ ಕ್ಕೆ ಅರಮನೆಗೆ ಭೆಟ್ಟಿ ಕೊಟ್ಟರು. ಅಲ್ಲಿಂದ ಮೈಸೂರು ವಿಶ್ವವಿದ್ಯಾಲಯದ ಗೌರವ ಪದವಿಯನ್ನು ಸ್ವೀಕರಿಸಲು ಕ್ರಾಫರ್ಡ್ ಭವನದ ಕಡೆಗೆ ಸಾಗಿದರು. ಬೀದಿಬೀದಿಗೂ ಹಳ್ಳಿಹಳ್ಳಿಗಳಿಂದ ಕಿತ್ತುಬಂದಿದ್ದ ಜನಸಮೂಹವು ಮುಖ್ಯಮಂತ್ರಿಗಳ ದರ್ಶನಾಪೇಕ್ಷೆಗಳಾಗಿ ನಿಂತಿದ್ದಿತು. ಪಂ. ನೆಹರು ಅವರಿಗೆ "ಡಾಕ್ಟರ ಆಫ್ ಲಾಯಿನ್ಸ" ಎಂಬ ಪದವಿಯನ್ನು ಮೈಸೂರ ವಿಶ್ವವಿದ್ಯಾಲಯದ ಕುಲಪತಿಗಳಾದ ಮಹಾರಾಜರು ಅರ್ಪಿಸಿದರು. ಪದವಿಯನ್ನು ಸ್ವೀಕರಿಸುತ್ತ, ಕೃತಜ್ಞತೆ ವ್ಯಕ್ತಪಡಿಸುತ್ತ, ಜವಾಹರಲಾಲರು ಸಮಯೋಚಿತ ಭಾಷಣ ಮಾಡಿದರು.

ನಂತರ ೧೧ ಗಂಟೆಗೆ ನೆಹರು ಅವರಿಗೆ ಮೈಸೂರು ನಗರಸಭೆಯು ಮಾನ ಪತ್ರ ಅರ್ಪಿಸಿತು ಮೊದಲು ಸಮಯೋಚಿತವಾಗಿ ಇಲ್ಲಿ ಜನತಾ ... ಯಲ್ಲಿ "ಜನರ ಪ್ರೀತಿಯು ಪಸ್ನ ಮೇ... ದಷ್ಟು ನನ್ನ ಜೊತೆಗಾರಿಕೆಯು ಬೆಳೆ... ಹೋಗುತ್ತದೆ. ಎಲ್ಲರ ವಿಶ್ವಾಸದಿಂದ ... ಇನ್ನೂ ಹೆಚ್ಚಿನ ದೇಶಸೇವೆ ಸಲ್ಲಿಸ... ಇನ್ನಷ್ಟು ಸಮರ್ಥನಾಗುವೆನೆಂದು ನಂ... ದ್ದೇನೆ" ಎಂದು ಮೊದಲಾಗಿ ನುಡಿದರು.

ಪಿಡ್ಡಾ ಕಾರ್ಯಕ್ರಮ

ಕಾರಾಪೂರದಲ್ಲಿ ಪಿಡ್ಡಾ ಕಾರ್ಯಕ್ರಮ ಜವಾಹರಲಾಲರು ೧೧-೪೫ ಕ್ಕೆ ತೆರಳಿದ ಅಲ್ಲಿ ೧೩ ಆನೆಗಳು ಪಿಡ್ಡಾದಲ್ಲಿ ಬಂದು ಬಿದ್ದ ವನ್ನು ಅವರು ನಿರೀಕ್ಷಿಸಿದರು. ಇ... ನಂತರ ಮೈಸೂರ ಮಹಾರಾಜರು ವೃಂದಾವನದಲ್ಲಿ ಸತ್ಕಾರ ಕೂಟ ಏರ್ಪಡಿಸಿದ್ದರು. ... ಎರಡು ದಿನ ಅರಮನೆಯಲ್ಲಿಯೂ ವೃಂದಾವನದಲ್ಲಿಯೂ ದೀಪೋತ್ಸವ ಏರ್ಪಟ್ಟಿತ್ತು.

ಈ ಎಲ್ಲ ಕಾರ್ಯಕ್ರಮಗಳ ಕಾಲಕ್ಕೆ ಮಾನ್ಯ ಮಂತ್ರಿ ಶ್ರೀ ದಿವಾಕರರೂ ಜವಾಹರ ಲಾಲರೊಂದಿಗೆ ಇದ್ದರು. ತಾ ೨೮ ರಂದು ಸಂಜೆಗೆ ಶ್ರೀ ದಿವಾಕರರು ವಿದ್ಯಾರ್ಥಿ ಕಾಂಗ್ರೆಸಿನಲ್ಲಿ ಭಾಷಣ ಮಾಡಿದರು.

ಚೆಲುವಾಂಬಾ ಅರಮನೆಯ ಅರ್ಪಣೆ

ಮೈಸೂರು ಸರಕಾರವು ತಾ. ... ಮುಂಜಾನೆ ಪಂ. ಜವಾಹರಲಾಲರಿಗೆ ಚೆಲುವಾಂಬಾ ಅರಮನೆಯನ್ನು ಒಪ್ಪಿಸಿದರು. ಇ... ಹಿಂದುಸ್ಥಾನ ಸರಕಾರವು ಆಹಾರ ಸಂಶೋಧನ ಪ್ರಯೋಗ ಶಾಲೆಯನ್ನು ಪ್ರಾರಂಭಿಸಲಿದೆ. ಮಹತ್ವದ ಕೇಂದ್ರಸಂಸ್ಥೆಗಳನ್ನು ಹಿಂದುಸ್ಥಾನದ ತುಂಬೆಲ್ಲ ಪಸರಿಸಬೇಕು ಎಂಬ ನಿರ್ಧಾರಕ್ಕೆ ಈ ಕಾಣಿಕೆಯು ಅನುಕೂಲವಾಗಿ ಒದಗಿಸಿದೆಯೆಂದೂ ಜನರ ತಿನಿಸಿನ ಚಿ... ಮಾರ್ಪಡಬೇಕಾಗಿದೆಯೆಂದೂ ನು... ಹಿಂದುಸ್ಥಾನ ಸರಕಾರದ ಪರವಾಗಿ ಈ ಅ... ಮನೆಯನ್ನು ಜವಾಹರಲಾಲರು ಸ್ವೀಕರಿಸಿ... ದಾಗಿ ತಾವು ಹೇಳಿದರು.

ಕೊನೆಗೆ ತಮ್ಮ ಈ ಪ್ರವಾಸವನ್ನು ಸಂತೋಷದಾಯಕವಾಗಿ ಮಾಡಿದ ಮೈಸೂರು ಸರಕಾರವನ್ನೂ ಜನತೆಯ... ಅಭಿನಂದಿಸಿ, ಮೈಸೂರಿನ ಪ್ರಾಚೀನ ದೇ... ಲಯಗಳನ್ನು ನೋಡಿಕೊಂಡು ...ಳಿಗ... ಮತ್ತೊಮ್ಮೆ ಬರ ಬೇಕೆಂದೂ ಹೇಳಿ ಮಂ... ೯ ಕ್ಕೆ ವಿಮಾನ ಮೂಲಕ ದಿಲ್ಲಿಗೆ ಪ್ರ... ಬೆಳೆಸಿದರು. ಪಂ. ನೆಹರು ಅವರನ್ನು ಬೀಳ್ಕೊಳ್ಳಲು ಮಹಾರಾಜರೂ ದಿವಾನರೂ ಮಂತ್ರಿಗಳೂ ಪುರಪ್ರಮುಖರೂ ಅಧಿಕಾರಿಗಳೂ ಆಗಮಿಸಿದ್ದರು.

ಹೈದರಾಬಾದಿನಲ್ಲಿ ಮುಖ್ಯಮಂತ್ರಿ ನೆಹರು

ಪ್ರಚಂಡ ಜನಪ್ರಿಯತೆಯ ಪ್ರದರ್ಶನ

ಕಾಂಗ್ರೆಸ್ಸಿಗರಿಗೆ ಉಪದೇಶ

ಹೈದರಾಬಾದಿನಲ್ಲಿ ಭಾರತದ ಮುಖ್ಯ ಮಂತ್ರಿ ಪಂ ಜವಾಹರಲಾಲ ನೆಹರೂ ಅವರು ಮುಗಿಸಿದ ಮೂರುದಿನಗಳ (ತಾ. ೨೪—೨೬) ಕಾರ್ಯಕ್ರಮವೆಲ್ಲ ಸಂಸ್ಥಾನದಲ್ಲಿ ಕೂಡ ಅವರಿಗಿರುವ ಅದ್ಭುತ ಜನಪ್ರಿಯತೆ, ಅಖಂಡ ಗೌರವವನ್ನು ಪ್ರದರ್ಶಿಸುವಂತಿತ್ತು. ಅವರು ಬೀದಿಯಲ್ಲಿ ಕಾಣಿಸಿಕೊಂಡ ಸಂದರ್ಭಗಳಲ್ಲೆಲ್ಲ ಅವರ ದರ್ಶನಾಪೇಕ್ಷಿಗಳಾಗಿ ನೆರೆದವರನ್ನು ಲಕ್ಷಕ್ಕಿಂತ ಕಡಮೆಯ ಸಂಖ್ಯಾಮಾನದಿಂದ ಅಳೆಯ ಬರುವಂತೆಯೇ ಇದ್ದಿಲ್ಲ.

ಅವರು ಹೈದರಾಬಾದಿನಲ್ಲಿ ಪೂರೈಸಿದ ಕಾರ್ಯಕ್ರಮಗಳಲ್ಲಿ ಸಾರ್ವಜನಿಕ ಭಾಷಣ (ತಾ. ೨೫) ನಿಜಾಮರ ಸಂದರ್ಶನ (ತಾ. ೨೫) ಸಂಸ್ಥಾನ ಕಾಂಗ್ರೆಸ್ ಮುಂದಾಳುಗಳ ಭೆಟ್ಟಿ (ತಾ ೨೫), ಉಸ್ಮಾನಿಯಾ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವೀ ಸ್ವೀಕಾರ, (ತಾ. ೨೬) ಇವುಗಳನ್ನು ಮುಖ್ಯವಾಗಿ ಉಲ್ಲೇಖಿಸಬಹುದು.

ಮುಖ್ಯ ಮಂತ್ರಿಗಳೊಡನೆ ಅವರ ಸೋದರಿ ವಿಜಯಲಕ್ಷ್ಮಿ ಪಂಡಿತರು, ಭಾರತದಲ್ಲಿ ಬೆಲ್ಜಿಯನ್ ರಾಯಭಾರಿಗಳ ಮಗಳಾದ ರಾಜಕುಮಾರಿ ಡೆ'ಲಿನ್ ಮತ್ತು ಭಾರತ ಸರಕಾರದ ಮುದ್ರಣನಿರ್ದೇಶಕರಾದ ಶ್ರೀ ಎ ಎಸ್. ಅಯ್ಯಂಗಾರ್ ಮೊದಲಾದವರಿದ್ದರು.

ಮುಖ್ಯ ಮಂತ್ರಿಗಳಿಗೆ ದೊರೆತಂತಹವು ಇರುವ ಅಪೂರ್ವ ಜನಪ್ರಿಯತೆಯನ್ನು ಕಂಡು ರಾಜಕುಮಾರಿ ಡೆ'ಲಿನ್ನರು ಆಶ್ಚರ್ಯೋದ್ಗಾರವನ್ನು ಪ್ರಕಟಗೊಳಿಸಿದಳೆಂದು ವದಂತಿಯಾಗಿದೆ.

ಬೋಲಾರಾಮದ ರೆಸಿಡೆನ್ಸಿ ಭವನದಲ್ಲಿ ಮುಖ್ಯ ಮಂತ್ರಿಗಳ ಬೀಡಾರವಿತ್ತು. ಸ್ವತಃ ನಿಜಾಮರು ಮತ್ತು ವರ್ಹಾಡದ ಯುವರಾಜರು ಅವರನ್ನು ಕಾಣಲು ಆ ಭವನಕ್ಕೆ ಬಂದುದು ಅಭೂತಪೂರ್ವವಾಗಿತ್ತು.

ಕಾಂಗ್ರೆಸ್ಸಿಗರಿಗೆ ಕಿವಿಮಾತು

ಇತಿಹಾಸಪ್ರಸಿದ್ಧ ಫತ್ತೇ ಮೈದಾನಿನಲ್ಲಿ ಏಳು ಲಕ್ಷವಿರಬಹುದೆಂದು ಊಹಿಸಲ್ಪಟ್ಟ ಜನಸಂದಣಿಯಲ್ಲಿ ಭಾಷಣ ಮಾಡುತ್ತ ಪಂ. ಜವಾಹರಲಾಲರು ಸಂಸ್ಥಾನದ ಇಬ್ಬಣವಾದ ಕಾಂಗ್ರೆಸ್ಸಿಗರಿಗೆ ಕೆಲ ಕಿವಿಮಾತುಗಳನ್ನು ಹೇಳಿದರು. ಸಂಸ್ಥಾನದಲ್ಲಿ ನಡುಗಾಲ ಸರಕಾರವನ್ನು ಸ್ಥಾಪಿಸುವದೂ ಮಿಲಿಟರಿ ಸರಕಾರವನ್ನು ಮುಕ್ತಾಯಗೊಳಿಸುವದೂ ಸಂಸ್ಥಾನದ ಜನತೆಯ ಕೈಯಲ್ಲಿ ಇದೆಯೆಂದು ಅವರು ಸ್ಪಷ್ಟಗೊಳಿಸಿದರು. ಸಂಸ್ಥಾನದ ಸಮಸ್ಯೆಗಳನ್ನು ಬಿಡಿಸಲು ಕಾಂಗ್ರೆಸ್ಸಿಗರು ಒಕ್ಕಟ್ಟಿನಿಂದಲೂ ಶಿಸ್ತಿನಿಂದಲೂ ಸ್ವಾರ್ಥತ್ಯಾಗದಿಂದಲೂ ದುಡಿಯಬೇಕಾದ ಕಾಲದಲ್ಲಿ ಅವರು ತಮ್ಮತಮ್ಮಲ್ಲಿ ಜಗಳಾಡುತ್ತಿರುವದನ್ನು ನೋಡಿ ತಮಗೆ ಅತಿ ವ್ಯಸನವಾಗಿದೆ. ಇದು ಅಧಃಪತನದ ದುಶ್ಚಿಹ್ನ. ಸಂಸ್ಥಾನದ ಮಿಲಿಟರಿ ಸರಕಾರ ಬಹಳ ದಿನ ಉಳಿಯು... ರದು ಅದನ್ನು ಅದಷ್ಟು ಬೇ... ಳಿಸಿ ನಡುಗಾಲ ಸರ... ಬೇಗ ಬೇಕೆಂದು ... ಭಾರತ ಸರ... ಒಗ್ಗಟ್ಟಾ... ವರು ನುಡಿದರು.

(೧೩ ನೆಯ ಪುಟಕ್ಕೆ)

ಭಾರತದಲ್ಲಿ ದನಕರುಗಳ ಸುಧಾರಣೆ

ಕೃತ್ರಿಮ ಗರ್ಭಾಧಾನ—ಚಿಕಿತ್ಸೆ—ತಳಿ ಅಭಿವೃದ್ಧಿ ಮೊದಲಾದ ಉಪಾಯಗಳ ಆವಶ್ಯಕತೆ—ಕೆಲವು ಸೂಚನೆಗಳು

ಕೆಲ ದಿನಗಳ ಹಿಂದೆ ಭಾರತದ ಘಟನಾ ಸಮಿತಿಯು ಶ್ರೀ ಠಾಕೂರ ದಾಸ ಭಾರ್ಗವರ ಸೂಚನೆಯ ಮೇರೆಗೆ ಘಟನೆಯ ನಿರ್ದೇಶಕ ತತ್ವಗಳ ಅಧ್ಯಾಯದಲ್ಲಿ ಪಶುಸಂಗೋಪನೆಯನ್ನೂ ಒಳಪಡಿಸಬೇಕೆಂದು ನಿರ್ಣಯಿಸಿತು. ಗೋರಕ್ಷಣೆ ಮಾಡಿರೆಂಬ ಕೂಗಿನ ಹಿಂದೆ ಸಾಮಾನ್ಯವಾಗಿ ಅರಿತಿರುವ ಅಂಥ [illegible], ಧಾರ್ಮಿಕ ಭಾವನೆಗಳ ಕಲಸು [illegible]ಯೋಗರದಿಂದ ನಿರ್ಲಿಪ್ತವಾದ ಸ್ಫುಟ [illegible]ಗಳಲ್ಲಿ ಈ ಕಲಮು ಬರೆಯಲ್ಪಟ್ಟಿರು[illegible] ಅಭಿನಂದನೀಯವೇ ಸರಿ. “ಸರ[illegible] [illegible] ಮುಖ್ಯವಾಗಿ, ದನಗಳ ಪೀಳಿಗೆ[illegible]ಯನ್ನು ರಕ್ಷಿಸಲು ಮತ್ತು ಸುಧಾರಿಸಲು ಅವ[illegible]ವಾದ ಕ್ರಮಗಳನ್ನು ತೆಗೆದುಕೊಂಡು [illegible]ಸುಗಳೇ ಮೊದಲಾದ ಉಪಯೋಗಿ ಜಾನುವಾರುಗಳ, ಅದರಲ್ಲಿಯೂ ಹಯನದ ಮತ್ತು [illegible]ಸಾಯದ ಜಾನುವಾರಗಳ ಮತ್ತು ಕರುಗಳ, [illegible]ಂಹಾರವನ್ನು ಪ್ರತಿಬಂಧಿಸಬೇಕು” ಎಂದು [illegible]ದರಲ್ಲಿ ನಿರ್ದೇಶಿಸಲಾಗಿದೆ.

ಲೆಕ್ಕ ಭರ್ತಿ ಪ್ರಾಪ್ತಿ ಶೂನ್ಯ

ನಮ್ಮ ದೇಶದಲ್ಲಿ ದನಕರುಗಳ ಸಂಖ್ಯೆ [illegible]ಳೆಲ್ಲ ದೇಶಗಳಿಗಿಂತ ಹೆಚ್ಚು. ಆದರೆ ಅವುಗಳ ಅಪ್ರಯೋಜಕತ್ವವೂ ಹಾಗೆಯೆ. [illegible]ದೀಗ ನಮ್ಮ ಸಮಸ್ಯೆ. ಭಾರತದ ವಿಭಜನೆಗೆ ಮೊದಲು ಜಗತ್ತಿನ ಸೇಕಡಾ ೩೯ ರಷ್ಟು ದನ ಕರುಗಳು —೨೧೩೭ ಲಕ್ಷ—ಹಿಂದುಸ್ತಾನದಲ್ಲಿದ್ದವು. ಅವುಗಳಲ್ಲಿ ಎಳೆಗರು ಮತ್ತು ಕೆಲಸಕ್ಕೆ ಬಾರದವುಗಳನ್ನು ಕಳೆದು ೧೪೩೯ ಲಕ್ಷ ಮಾತ್ರ ಏನಾದರೊಂದು ಕೆಲಸಕ್ಕೆ ಬರುವಂಥವು. ಆದರೆ ಇವುಗಳಲ್ಲಿಯೂ ನೂರಕ್ಕೆ ತೊಂಭತ್ತರಷ್ಟು ಪ್ರಾಣಿಗಳು ನಿಜವಾಗಿ ಲಾಭದಾಯಕವಾಗಿರಲಿಲ್ಲ. ಬೇಸಾಯದ ಕೆಲಸದಲ್ಲಾಗಲಿ ಹಯನ ಕೊಡುವದರಲ್ಲಾಗಲಿ ಅವು ತೀರ ನಿಕೃಷ್ಟವಾಗಿರುವದರಿಂದ ಅವುಗಳಿಂದಾಗುವ ಪ್ರಯೋಜನಕ್ಕೂ ಅವುಗಳಿಗಾಗುವ ವೆಚ್ಚಕ್ಕೂ ಅಲ್ಲಿಂದಲ್ಲಿಗೆ ಆಗುತಿದ್ದರೆ ದೊಡ್ಡದು. ಈ ದುರ್ಬಲ ಜಂತುಗಳಿಂದ ಕಬ್ಬಿಣದ ನೇಗಿಲುಗಳನ್ನು ಜಗ್ಗುವದಾಗದ್ದರಿಂದ ದಕ್ಷಿಣ ತಪ್ಪಲು ಭೂಮಿಯಲ್ಲಿ ಆ ನೇಗಿಲುಗಳ ಪ್ರಸಾರ [illegible]ಂದೆ ಬಿದ್ದಿದೆಯೆಂದು ಎಲ್ಲರಿಗೂ ಗೊತ್ತು. [illegible]ಲು ಕೊಡುವದರಲ್ಲಿಯೂ ಅವು ಎಲ್ಲ ದೇಶ[illegible]ವುಗಳಿಗಿಂತಹಿಂದೆ. ಇಂಗ್ಲಂಡಿನಲ್ಲಿ ಸಾಮಾನ್ಯವಾಗಿ ಒಂದು ಸೂಲಕ್ಕೆ (ಅಂದರೆ, ಹಿಂಡುವ ಅವಧಿಗೆ) ದನಗಳು ಸರಾಸರಿ ೬೦೦ ಗ್ಯಾಲನ್ ಹಾಲನ್ನುಕೊಡುತ್ತವೆ. ಆದರೆ ಇಲ್ಲಿ ೩೫ ವರ್ಷಕ್ಕಿಂತಲೂ ಹೆಚ್ಚು ಕಾಲ ಸರಕಾರಿ ಪ್ರಯೋಗ ಕ್ಷೇತ್ರಗಳಲ್ಲಿ ತಳಿಸುಧಾರಣೆಯ ಯತ್ನಗಳಾದ ಮೇಲೆಯೂ ಸುಧಾರಿಸಿದ ಅತ್ಯುತ್ತಮ ದನಗಳು ಕೂಡ ಆ ಮಟ್ಟವನ್ನು ಮುಟ್ಟಲಿಲ್ಲವೆಂದು ಶ್ರೀ ಪೆಪ್ಪರಾಲರು ಹೇಳಿದ್ದಾರೆ.

ವಿಭಜನೆಯಿಂದ ಹಾನಿ

[illegible] ವಿಭಜನೆಯಿಂದ ಒಕ್ಕೂಟ ಭಾರತದ [illegible] ಪರಿಸ್ಥಿತಿ ಇನ್ನಷ್ಟು ಕೆಟ್ಟಿತು. [illegible] ಸಿಂಧಿ, ಥರಪರಕರ, [illegible] ಜಾತಿಯ ದನಗಳು ಜಗತ್ತಿನ [illegible] [illegible] ಸೇರಿದವು. [illegible] [illegible] [illegible] [illegible] [illegible] ಅವರ, [illegible] ಮತ್ತು ದಕ್ಷಿಣ ಭಾರತದ [illegible] ದನಕರುಗಳ [illegible] [illegible] [illegible] [illegible] [illegible] ಸರಾಸರಿ ೩೦೦ [illegible] ಹೆಚ್ಚು [illegible] ಕೊಡುವದಿಲ್ಲ. ಪೂರ್ವ ಪಂಜಾಬ ಹೊರತು ಮತ್ತೆಲ್ಲಿಯೂ ವರ್ಷಕ್ಕೆ ಪ್ರತಿ ದನದ ಸರಾಸರಿ ಹಾಲು ೧೫೦೦ ಪೌಂಡಿಗಿಂತ ಹೆಚ್ಚಿಗಿಲ್ಲ. ಪೂ. ಪಂಜಾಬದಲ್ಲಿ ಮಾತ್ರ ಈ ಸರಾಸರಿ ೩೫೦೦ ಪೌಂಡ್ ಇದೆ ೬ ಲಕ್ಷ ಬೀಜದ ಹೋರಿಗಳಿದ್ದರೂ ಅವುಗಳಲ್ಲಿ ನೂರಕ್ಕೆ ೫ ಮಾತ್ರ ಯೋಗ್ಯ ಜಾತಿಯವಿರುವದರಿಂದ ನೂರಕ್ಕೆ ತೊಂಭತ್ತೈದು ಕರುಗಳು ಕೀಳು ಜಾತಿಯ ತಳಿಯಿಂದ ಜನಿಸಿ ದುರ್ಬಲವಾಗುತ್ತವೆ.

ಗೋವಧೆ ನಿಲ್ಲಿಸಿದರೆ ಸಾಲದು

ಹೀಗೆ ನಮ್ಮ ವಿಪುಲವಾದ ಪಶುಸಂಪತ್ತಿಯಲ್ಲಿ ಉಪಯೋಗಕ್ಕೆ ಬರುವ ಪ್ರಾಣಿಗಳ ಸಂಖ್ಯೆ ತೀರ ಕಡಿಮೆ. ಹೀಗಿರುವಾಗ ನಿರ್ದೇಶಾಧ್ಯಾಯದಲ್ಲಿ ಹೇಳಿರುವಂತೆ ಪಶುಸಂಗೋಪನೆಯನ್ನು ಸಾಧಿಸುವ ಬಗೆ ಯಾವದು? ಗೋವಧೆಯ ಪ್ರತಿಬಂಧ ಮಾತ್ರದಿಂದ ಈಗಿರುವ ಕಳೆ ಸುಧಾರಿಸದು. ಏಕೆಂದರೆ ಈಗ ವರ್ಷೇ ವರ್ಷ ಕಟುಕರ ಕೈಸೇರುವ ೪೦ ಲಕ್ಷ ದನಕರುಗಳು ಹೆಚ್ಚಾಗಿ ಅಪ್ರಯೋಜಕ ಜಂತುಗಳಾಗಿವೆ. ಅವನ್ನು ಉಳಿಸಿಕೊಂಡರೆ ಆಹಾರ ದಂಡ ಮಾತ್ರ, ಎಂದು ಶುದ್ಧ ಆರ್ಥಿಕ ದೃಷ್ಟಿಯಿಂದ ನೋಡುವವರು ಹೇಳುತ್ತಾರೆ. ಅಂದ ಮೇಲೆ ತರ್ಕಶುದ್ಧವಾದೊಂದು ಉಪಾಯವನ್ನು ನಾವು ಹುಡುಕಬೇಕು. ಅರ್ಥಾತ್ ಜೀವಂತ ಪ್ರಾಣಿಗಳು ಮೃತ ಪ್ರಾಣಿಗಳಿಗಿಂತ ಲಾಭದಾಯಕವಾಗುವಂತೆ ವ್ಯವಸ್ಥೆಮಾಡಬೇಕು.

ಈ ದೃಷ್ಟಿಯಲ್ಲಿ ಮುಂಬಯಿ ಸರಕಾರದವರು ಮಾಡಿದ ಪ್ರಾರಂಭ ಅನುಕರಣೀಯವಾಗಿದೆ. ನಗರಗಳ ಸಮೀಪದಲ್ಲಿ “ಗೋಕುಲ”ಗಳನ್ನು ಸ್ಥಾಪಿಸಿ ನಗರದೊಳಗಿನ ಕೊಟ್ಟಿಗೆಗಳನ್ನು ಮೆಲ್ಲಮೆಲ್ಲಗೆ ಅಲ್ಲಿಗೆ ವರ್ಗಾಯಿಸುವದಲ್ಲದೆ, ದನಗಳು ಬತ್ತಿದಾಗ ಅವುಗಳಿಗಾಗಿ ಕಡಿಮೆ ಹುಲ್ಲುಬನ್ನಿ ತೆಗೆದುಕೊಂಡು ಹುಲ್ಲುಗಾವಲುಗಳನ್ನೊದಗಿಸುವದೂ ನಗರಗಳಿಗಾಗಿ ಹಾಲು ಮಾರಾಟದ ಸಂಘಗಳನ್ನು ಸ್ಥಾಪಿಸುವದೂ ಉಪಯುಕ್ತ ಜಾತಿಯ ಪ್ರಾಣಿಗಳು ಕಟುಕನ ಕೈ ಸೇರದಂತೆ ಮಾಡಲು ಬಹಳ ಸಹಾಯ ಮಾಡಬಹುದು.

ಎರಡು ಉಪಾಯ

ಗೋರಕ್ಷಣೆಯ ದೀರ್ಘಾವಧಿ ಧೋರಣೆಗೆ ಎರಡು ಮುಖ್ಯ ಅಂಗಗಳಿವೆ. ದನಕರುಗಳ ಮೇವಿನ ಸಂಪತ್ತಿಯನ್ನು ಹೆಚ್ಚಿಸುವದೊಂದು; ಅವುಗಳ ತಳಿಯನ್ನು ಸುಧಾರಿಸಿ ಅಪ್ರಯೋಜಕ ಬೀಜದ ಹೋರಿಗಳ ಸ್ಥಾನದಲ್ಲಿ ಜಾತಿ ಹೋರಿಗಳನ್ನು ಸ್ಥಾಪಿಸುವದು ಮತ್ತೊಂದು.

ಗೋಗ್ರಾಸ ಅಥವಾ ದನಕರುಗಳ ಆಹಾರ ಸಂಪತ್ತಿ ಸಮೃದ್ಧವಾಗಬೇಕಾದರೆ, ರೈತನು ಅನುಷಂಗಿಕವಾಗಿ ಗೋಪಾಲನಾಗುವದು ಆದರ್ಶ ಉಪಾಯ. ಅವನು ಒಕ್ಕಲತನ ಮತ್ತು ಗೋರಕ್ಷಣೆಗಳನ್ನು ಅನ್ಯೋನ್ಯಾಶ್ರಯವಾಗಿ ಮಾಡಿಕೊಂಡು ಸಂಮಿಶ್ರ ಬೆಳೆಗಳನ್ನು ಬೆಳೆಸಬೇಕು. ಹಯನದ ಬೇಡಿಕೆ ಜನರ ಆರ್ಥಿಕ ಸ್ಥಿತಿಯನ್ನೇ ಅವಲಂಬಿಸಿದ್ದರೂ ಯೋಗ್ಯ ದರದಲ್ಲಿ ಅದು ದೊರೆಯುವಂತಾದರೆ ನಗರಗಳಲ್ಲಿ ಸಾಕಷ್ಟು ಬೇಡಿಕೆ ಬಂದೇಬರುವಲ್ಲಿ ಸಂಶಯವಿಲ್ಲ. ಇದಲ್ಲದೆ, ಹಳ್ಳಿಯಲ್ಲಿ ಅಡವಿಗಳ ಅಭಿವೃದ್ಧಿ; ಬರ್ಸೀಮ, ನೇಪಿಯರ ಮೊದಲಾದ ಬೇಗನೆ ಬೆಳೆಯುವ ಹುಲ್ಲುಗಳ ಕೃಷಿ; ಇಂಥ ಹುಲ್ಲುಗಾವಲುಗಳಿಗೆ ನಗರಗಳ ಚರಂಡಿ ನೀರನ್ನು ಬಳಸುವದು; ಬೇಸಿಗೆಯಲ್ಲಿ ಹುಲ್ಲಿನ [illegible] [illegible] ಗೋಗ್ರಾಸಾಭಿವೃದ್ಧಿಯ [illegible] ಉಪಾಯಗಳು.

ಕೃತ್ರಿಮ ಗರ್ಭಾಧಾನ

[illegible] ತಳಿಯನ್ನು ಸುಧಾರಿಸುವ ಸಮಸ್ಯೆ. [illegible] ಅನುಮಾನದಂತೆ ಈ ದೇಶ[illegible] [illegible] ಉತ್ತಮ ತರದ ಬೀಜದ ಹೋರಿಗಳು [illegible],೦೦೦ ಇವೆ. ಒಂದು ಹೋರಿ ವರ್ಷಕ್ಕೆ [illegible] ಹೆಚ್ಚು ದನಗಳನ್ನು ಕೂಡಲಾರ[illegible] [illegible] ನಮ್ಮ ೩೮೦೦ ಲಕ್ಷ ದನ ದನ-ಎಮ್ಮೆಗಳಲ್ಲಿ ಕೇವಲ ೧೦೮ ಲಕ್ಷ ದನಗಳಿಗೆ ಮಾತ್ರ ಯೋಗ್ಯ ಎತ್ತು ದೊರೆಯುವದು ಸಾಧ್ಯ. ಆದರೆ ಕೃತಕ ಗರ್ಭಾಧಾನದ ಪದ್ಧತಿಯಿಂದ ಒಂದು ಹೋರಿಯ ವೀರ್ಯ ವರ್ಷದಲ್ಲಿ ೧೦೦೦ ದನಗಳನ್ನು ಗರ್ಭಧರಿಸಲಿಕ್ಕೆ ಉಪಯೋಗಿಸಬಹುದೆಂದು ಅನೇಕ ನಗರದ ಪ್ರಯೋಗಗಳಿಂದ ಸಿದ್ಧವಾಗಿದೆ. ಇದರಿಂದ ಉತ್ತಮ ಜಾತಿಯ ಹೋರಿಗಳನ್ನು ಹೆಚ್ಚಿಸಬಹುದು. [illegible] ಹೋರಿಯ ಕೊಟ್ಟಿಗೆಗಳನ್ನು ಸ್ಥಾಪಿಸುವದು ವಿಹಿತವೆಂದು ತೋರುತ್ತದೆ. ರಶಿಯಾ ಮೊದಲಾದ ದೇಶಗಳಲ್ಲಿ ಈ ಪದ್ಧತಿ ಫಲಕಾರಿಯಾಗಿದೆ. ಇಷ್ಟು ಮಾತ್ರವಲ್ಲ ಈಗಿರುವದಕ್ಕಿಂತ ಎಷ್ಟೋ ಪಾಲು ಹೆಚ್ಚು ಬೀಜದ ಹೋರಿಗಳು ನಮಗೆ ಬೇಕಾಗುತ್ತವೆ. ಇದಕ್ಕಾಗಿ ಸರಕಾರದವರು ಅನೇಕ ಹಾಲು ಮತ್ತು ಹೋರಿ ಉತ್ಪಾದಕ ಕೇಂದ್ರಗಳನ್ನು ಸ್ಥಾಪಿಸಿ ಮಾರ್ಗದರ್ಶನ ಮಾಡಿಸಬಹುದು.

ತಳಿಯನ್ನು ಸುಧಾರಿಸುವ ವಿಷಯದಲ್ಲಿ ಕೆಲ ಸೂಚನೆಗಳನ್ನು ಮಾಡಬಹುದು. ಒಳ್ಳೆಯ ಜಾತಿಗಳು ಹಲವು ಪಾಕಿಸ್ತಾನದ ಪಾಲಿಗೆ ಹೋಗಿದ್ದರೂ ಭಾರತದಲ್ಲಿ ಇನ್ನೂ ಹಲವು ಉತ್ತಮ ಜಾತಿಗಳಿವೆ. ಉದಾಹರಣೆಗಾಗಿ ಪೂರ್ವ ಪಂಜಾಬದ ಹರಿಯಾನಾ ಮತ್ತು ಹಿಸ್ಸಾರ ದನಗಳೂ ರೋಹ್ಟಕ ಜಿಲ್ಲೆಯ ಮುರ್ರಾ ಎಮ್ಮೆಗಳೂ, ಯುಕ್ತ ಪ್ರಾಂತದಲ್ಲಿ ಕೇನವಾರಿಯಾ, ಕೇರಿಗಢ, ಮೇವಾತಿ, ಪೋನವಾರ ಮೊದಲಾದವುಗಳೂ ಉಪಯುಕ್ತ ಜಾತಿಗಳೆಂದು ಹೆಸರುವಾಸಿಯಾಗಿವೆ. ಆಂಧ್ರದ ಓಂಗೋಲ ಜಾತಿಯಂತೂ ಜಗತ್ತಿನ ಉತ್ತಮ ಜಾತಿಗಳಲ್ಲಿ ಸೇರಿದ್ದು. ಮುಂಬಯಿ ಕಾಠೇವಾಡಗಳಲ್ಲಿ ಜಫರ ಬಾದಿ ಮತ್ತು ಸುರ್ತಿ ಎಮ್ಮೆಗಳೂ ಗೀರ ದನಗಳೂ ಪ್ರಸಿದ್ಧವಾಗಿವೆಯಲ್ಲದೆ ಹೈದರಾಬಾದಿನ ದೇವನಿ ಜಾತಿಯೂ ಹಾಲಿಗೆ ಹೆಸರಾಗಿದೆ. ಇನ್ನು ಅಮೃತಮಹಾಲ, ಅಲಂಬಾಡಿ ಮೊದಲಾದ ಹಲವು ದುಡಿಯುವ ಜಾತಿಗಳೂ ಇವೆ.

ಸಂರಕ್ಷಿತ ಪ್ರದೇಶಗಳು

ಇಂಥ ಉತ್ತಮ ಜಾತಿಯ ದನಕರುಗಳನ್ನು ಅಭಿವೃದ್ಧಿಗೊಳಿಸಬೇಕಾದರೆ ಅವು ಸಾಮಾನ್ಯವಾಗಿ ವಿಪುಲವಾಗಿರುವ ಪ್ರದೇಶಗಳನ್ನು ಗುರ್ತಿಸಿ “ಸಂರಕ್ಷಿತ ಗೋ ಸಂಗೋಪನ ವಲಯ” ಗಳೆಂದು ಸಾರತಕ್ಕದ್ದು. ಉದಾಹರಣೆಗಾಗಿ ನೆಲ್ಲೂರು, ಗುಂಟೂರು ಜಿಲ್ಲೆಗಳನ್ನು “ಓಂಗೋಲ ಅಭಿವರ್ಧಕ ವಲಯ” ವೆಂದು ಸಾರಬಹುದು. ಇಷ್ಟಾದ ಮೇಲೆ ಆ ಪ್ರದೇಶದಲ್ಲಿ ಅಧಿಕಾರಿ ಪಶುವೈದ್ಯ ಅನುಮತಿ ಚಿಹ್ನವಿಲ್ಲದ ದನಕರುಗಳನ್ನು ಸಂಹರಿಸುವದು ಅಪರಾಧವೆಂದು ಪರಿಗಣಿಸಬೇಕಲ್ಲದೆ, ಪರೀಕ್ಷೆ ಮಾಡಿಸಿ ಸಂತಾನ ನಿರ್ಮಾಣಕ್ಕೆ ಯೋಗ್ಯವೆಂದು ನಿರ್ಧರಿಸಲ್ಪಟ್ಟ ಉತ್ತಮ ಹೋರಿಗಳನ್ನು ಬಿಟ್ಟು ಉಳಿದವುಗಳನ್ನೆಲ್ಲ “ಕಸಿ” ತರದು ಬಡಿಯುವದು ಮಾಡಿಬಿಡಬೇಕು. ಹೀಗೆ ಅಧಿಕಾರಿಗಳ ಅನುಮತಿಯ ಚಿಹ್ನದಿಂದ ಅಂಕಿತವಾಗಿರುವ “ಕಸಿ” ಮಾಡದ ದುರ್ಬಲ ಹೋರಿಗಳನ್ನು ಇಟ್ಟುಕೊಂಡರೆ ಅಪರಾಧವೆಂದು ಸಾರಬೇಕು. ಉತ್ತಮ ಬೀಜದ ಹೋರಿಗಳ ಕೊರತೆಯಿರುವದರಿಂದ ಮೊದಮೊದಲು ಯೋಗ್ಯತಾ ನಿರ್ಣಯವನ್ನು ಒಂದಿಷ್ಟು ಔದಾರ್ಯದಿಂದ ಮಾಡಬೇಕಾದರೂ ಅಯೋಗ್ಯ ಹೋರಿಗಳನ್ನು ಆದಷ್ಟು ಮಟ್ಟಿಗೆ ಸಂತತಿ ನಿರ್ಮಾಣದಿಂದ ದೂರೀಕರಿಸಬೇಕು. ಸಂಗಡಲೇ ಬೀಜದ ಹೋರಿ [illegible]. ಕೃತಕ ವೀರ್ಯಾಧಾನ ಕೇಂದ್ರ ಮೊದಲಾದವುಗಳನ್ನು ಸ್ಥಾಪಿಸಬೇಕು. ಕೃತಕ ವೀರ್ಯಾಧಾನವನ್ನು ಜನಪ್ರಿಯವಾಗಿ ಮಾಡಲು ಸರಕಾರದವರು ಅದಕ್ಕೆ ಉತ್ತೇಜನ ಕೊಡಬೇಕಾಗುವದು. ಈ ಕೇಂದ್ರಗಳಲ್ಲಿರುವ ಹೋರಿಗಳು ಅತ್ಯುತ್ತಮ [illegible] ತರಗತಿಯವಾಗಿರಬೇಕು [illegible] ದಿಂದ ಕೆಂಬು [illegible], [illegible] [illegible] ಗಳನ್ನು [illegible] ಮಾಡುವ [illegible] [illegible] ಅವುಗಳನ್ನು ಉಪಯೋಗಿಸುವ [illegible] ಸುಧಾರಣೆಯಾಗುವದೆಂದು [illegible] [illegible] ಪಾರ ಮತ್ತು ದಕ್ಷಿಣ ಭಾರತ[illegible] [illegible] ಗಗಳಿಂದ ಸಿದ್ಧವಾಗಿದೆ. [illegible] ಉತ್ತಮ ಜಾತಿಯ [illegible] ಸಾಕಿದವರಿಗೆ ಬಹುಮಾನ [illegible] ವನ್ನು ಕೊಡಬಹುದು. ಬೀಜದ ಹೋರಿಗಳಾಗಿ ಉಪಯೋಗಿಸಲು ಯೋಗ್ಯವಾದ [illegible]

[illegible]

ಪಿರಬೀಣೆ

[illegible]

ಕರುಗಳಲಿ [illegible] [illegible]

[illegible]

[illegible] ದೀಪೆಯನು
ಕೊಳ್ಳು, ದೂಡಲಿದೇಕೆ ಮುನಿಯೇ ಜೀವಿಯನು.
ನಲ್ಲ ಕೊರೆದಿಪನೆಸ್ಸೆ ಹೊರಹೆಂಗಳೆಯು ತಪ್ಪೆ!
ಬಾಳಲೇನಿದೆ ಜಗದಿ, ಹಾಳು ಜೀವನ [illegible]!
ಅಶ್ರುಯುತ ನೀಡಷ್ಟು ಹಿ ದೇವಿ, [illegible]
“ಅರಿಯೆ ನೀ ಬಾಲೆ, ಎನ್ನಯ ಒಡಲ ದುಗುಡವನು!
ಮನವಿನಿಯ ಚಂದ್ರಮುಖ ಕೂಡಲಾಗದೆ [illegible]
ಎಳುವೆನು, ಕೈಮಾಡಿ ಕರೆವೆನದೆನ್ನೋ ಬಾರ!
ಮುಗಿಲ ರೂಪನು ತಳೆದು ಜಗವೆಲ್ಲ [illegible]
ಹಗಲು ಇರುಳೆನ್ನದೆಯೆ ಯುಗುತಿ [illegible]
ಕಣ್ಣಾಗಲು ಅಸಿ ಕರೆವೆ ಕಣ್ಣೀರನ್ನು!
ಬೇಡ ಮಗಳೇ, ಎನ್ನ ನೀರಲಿಟ್ಟಿಸಬೇಡ.
ವಿರಹಿತಯು ನೊರೆ ಹೊಕ್ಕು ಕರಗಬಹುದೇ [illegible]
ಕರುಣ [illegible] ದಾರಿದೋರಿದುದಾಗಬಹುದು!”

—[illegible] ಕುಲಕರ್ಣಿ

[illegible]

ಭಾರತೀಯ ಸ್ತ್ರೀಯರ ಉಡಿಗೆತೊಡಿಗೆಯ ಬೆಡಗು ಬಿನ್ನಾಣ

[ಲೇಖಕರು:— ಶ್ರೀ ಹಳಪೇಟೆ ಚಿಂತಾಮಣಿ]

ಭಾರತವು ಅನೇಕ ವಿಷಯಗಳಲ್ಲಿ ಕಾಲ ಕಾಲಕ್ಕೆ ಪರಕೀಯರ ಪ್ರಭಾವಕ್ಕೆ ಒಳಗಾಗಿದ್ದರೂ ಉಡುಪಿನ ವಿಷಯದಲ್ಲಿ, ಅದರಲ್ಲಿಯೂ ಪ್ರಾಮುಖ್ಯವಾಗಿ ಸ್ತ್ರೀಯರ ಉಡುಪಿನ ವಿಷಯದಲ್ಲಿ ವೈಶಿಷ್ಟ್ಯವನ್ನು ಕಾಯ್ದುಕೊಂಡು ಬಂದಿದೆ. ವಿವಿಧ ಭಂಗಿಗಳಲ್ಲಿ ಬೆಡಗನ್ನು ಪ್ರದರ್ಶಿಸಬಲ್ಲ ಸೀರೆಯು, ಸಿರಿವಂತಿಕೆಯ ಶಿಖರ



ದಕ್ಷಿಣ ನರ್ತಕಿ

ಮುಟ್ಟಿದ ನಾಡಿನ ಮಹಿಳೆಯರಿಗೂ ಆಕರ್ಷಕವೆನ್ನಿಸಿದೆ ಇಂದು.

ಸೀರೆ ಎಂಬ ಒಂದೇ ಹೆಸರಿನಿಂದ ಅದು ಹೊರಗೆ ಪರಿಚಯ ಪಡೆದಿದ್ದರೂ ಬೇರೆ ಬೇರೆ ರೀತಿಯಲ್ಲಿ ಉಡುವ ಬೆಡಗಿನ ರೀತಿಗಳು ಅಲ್ಲಲ್ಲಿ ಪ್ರಚಲಿತವಿರುತ್ತವೆ. ಹಾಗೂ ಆ ಉಡುತೊಡುವ ರೀತಿಗಳೇ ಆಯಾ ಜನಾಂಗಗಳ ಇತಿಹಾಸವನ್ನು ಕೂಡ ಹೇಳಬಿಟ್ಟವುಗಳಾಗಿವೆ. ಉದಾಹರಣಾರ್ಥವಾಗಿ ಮಹಾರಾಷ್ಟ್ರದ ಸ್ತ್ರೀಯರ (ಸಕಚ್ಛಪರಿಧಾನ) ಕಚ್ಚೆ ಹಾಕಿ ಉಡುವ ಪದ್ಧತಿಯು ಅವರ ಜೀವನದ ರೀತಿಯನ್ನು ತೋರಿಸುವಲ್ಲಿ ಕೆಲ ಮಟ್ಟಿಗೆ ಸಹಾಯಕವಾಗುತ್ತದೆಂಬವನ್ನು ಕಾಣಬಹುದು. ಗುಡ್ಡಗಾಡು ಪ್ರದೇಶದಲ್ಲಿ ಯುದ್ಧಮಯ ಜೀವನ ಕಳೆವಾಗ ಹದಿನೆಂಟು ಮೊಳ ಸೀರೆಯು ತೊಡಕಿನ ಉಡುಪಾಗಬಹುದಿತ್ತು. ಆದರೆ ಕುದುರೆ ಹತ್ತುವಾಗಲು ಕೂಡ ಅನುಕೂಲವಾಗುವಂತೆ ಪುರುಷರ ಗಂಡುಗಚ್ಚೆಯ ಹಾಗೆ ಕಚ್ಚೆ ಹಾಕಿ ಉಡುವ ರೀತಿಯನ್ನು ಅಳವಡಿಸಿಕೊಂಡದ್ದು



ಕನ್ನಡ ಕುವರಿ

ಅವರ ಜೀವನ ಇತಿಹಾಸವನ್ನೆ ವ್ಯಕ್ತಮಾಡುತ್ತದೆ. ಅದೇ ಮುಂದೆ ರಾಜ್ಯದ ಸಮೃದ್ಧಿ ದೊರಿತಾಗಾಗಲಿ ದಾಸ್ಯದಿಂದಾಗಲಿ ಜೀವನ ಹೋರಾಟದಲ್ಲಿ ಶಾಂತತೆ ದೊರೆತಾಗ ನಾಡಿನ ಸಿರಿಯನ್ನು ಬಳವಂತ ನೆಲಕ್ಕೆಳೆದಾಡಹತ್ತಿತು.

ಕಚ್ಚೆ ಹಾಕಿ ಸೀರೆ ಉಡುವ ಮಹಿಳೆಯರಲ್ಲಿ ಮರಾಠರನ್ನು ಬಿಟ್ಟರೆ, ಕ್ಷತ್ರಿಯ ಅರಸರ ಅನುಕರಣೆಗೆಳಸಿದ (ಪೇಶ್ವಾಯಿಗಳ ಪ್ರಭಾವಕ್ಕೊಳಗಾದ) ಬ್ರಾಹ್ಮಣ ಮಹಿಳೆಯರು ಹಾಗೂ ಆಂಧ್ರ ನರ್ತಕಿಯರು ಸಕಚ್ಛ ಪರಿಧಾನಿಗಳು. ಹೆಚ್ಚಾಗಿ ದಕ್ಷಿಣ ಹಿಂದುಸ್ತಾನದ ಮಹಿಳೆಯು ಹಾಗೂ ಉತ್ತರ ಹಿಂದುಸ್ಥಾನದ ಹಿಂದುಗಳು ಸೀರೆಯನ್ನುಡುತ್ತಿದ್ದರೂ ಕಚ್ಚೆಹಾಕಿ ಉಡದಿರುವವರ ಸಂಖ್ಯೆಯೆ ಬಹಳವೆಂದು ಹೇಳಬಹುದು. ಸಕಚ್ಛ ಪರಿಧಾನಕ್ಕೆ ಹದಿನೆಂಟುಮೊಳಸೀರೆ ಬೇಕಾದರೆ ವಿಕಚ್ಛ ಪರಿಧಾನ ಅಂದರೆ ಹಾಗೇ ದುಂಡು ಉಡುವದಕ್ಕೆ ಎಷ್ಟು ದೊಡ್ಡವರಿಗೂ ಹತ್ತು ಇಲ್ಲವೆ ಹನ್ನೆರಡು ಮೊಳ ಸೀರೆ ಸಾಕಾಗುತ್ತದೆ. ಇತ್ತಿತ್ತಲಾಗಿ ದೇಶನಿಂಗದ ಪ್ರಭಾವವೋ, ಆರ್ಥಿಕ ಅಭಾವವೋ ವಿಕಚ್ಛ ಪರಿಧಾನವೇ ಹೆಚ್ಚು ಹೆಚ್ಚು ಪ್ರಚಾರ ಪಡೆಯುತ್ತಿದೆ. ಸಕಚ್ಛ ಪರಿಧಾನಮಾಡುವ ವರ್ಗಗಳಲ್ಲಿಯೂ ಮದುವೆಯಾಗುವ ವರೆಗೆ ವಿಕಚ್ಛಪರಿಧಾನವೇ ರೂಢಿ ಇರುತ್ತದೆ. ಇನ್ನು ಮುಂದೆ ಸಕಚ್ಛ ಪರಿಧಾನವು ಮದುವೆಯ ಕಾಲದ ಒಂದು ಸಂಪ್ರದಾಯವಾಗಿ ಉಳಿಯಬಹುದಾಗಿದೆ. ಸಮಯಾಚಾರವನ್ನು ತಿಳಿದಾಗ ಈ ವಿಕಚ್ಛ ಪರಿಧಾನವೇ ನಾಡಿನ ದೃಷ್ಟಿಯಲ್ಲಿ ಒಳ್ಳೆಯದೆಂದು ತೋರುತ್ತದೆ. ರಾಷ್ಟ್ರೀಯ ಉಡುಪನ್ನು ವಿಚಾರಕ್ಕೆ ತೆಗೆದುಕೊಂಡಾಗ ಕನ್ನಡ ಕುವರಿಯೇ ಉಡುವ ರೀತಿಯು ಸೀರೆಯು



ಪಂಜಾಬಿ ತರುಣಿ

ಭಾರತ ಮಹಿಳೆಯರ ರಾಷ್ಟ್ರೀಯ ಉಡುಪಾಗಲಿಕ್ಕೆ ತಕ್ಕದ್ದಾಗಿದೆ.

ಸೀರೆಯನ್ನು ದುಂಡು ಉಡುವಲ್ಲಿ ಕೂಡ ವಿವಿಧ ಬೆಡಗುಗಳಿರುತ್ತವೆ. ಪಶ್ಚಿಮ ಪ್ರಭಾವಕ್ಕೆ ಮೊದಲು ಬಲಿಯಾದ ಬಂಗಾಲದ ಮಹಿಳೆಯರು ಇನ್ನುಳಿದವರಿಗಿಂತ ವೈಶಿಷ್ಟ್ಯಪೂರ್ಣ ಬೆಡಗನ್ನು ಅನುಸರಿಸುತ್ತಾರೆ. ಪಾರ್ಶಿ ಮಹಿಳೆಯರು ಉಡುವ ರೀತಿ ಬಂಗಾಲಿಗಳಂತೆಯೇ ಇದ್ದರೂ ಮುದ್ರಿತ, ಚಿತ್ರಿತ, ಕಸೂತಿಗಳನ್ನೊಳಗೊಂಡು ಅವರ ಸೀರೆಯು ಇನ್ನೂ ಬೆಡಗುಳ್ಳದ್ದಾಗುತ್ತದೆ. ಗುಜರಾತಿ ಹೆಣ್ಮಕ್ಕಳ ಸೀರೆಯ ಎಡದ ಸೆರಗು ಚಿರಪರಿಚಿತವಾದದ್ದು. ಸೆರಗನ್ನು ಹೊದೆವಲ್ಲಿಯೂ ಎರಡು ತರ. ತಲೆಯ ಮೇಲೆ ಹೊರುವವರು, ಬರಿಯ ಹೆಗಲ ಮೇಲಿಳಿಸುವವರು, ಹೀಗೆ ಎರಡು ವಿಧ. ಹೆಚ್ಚು ಜನ ತಲೆಯನ್ನು ಜೈತಲೆಯ ಮುಂಭಾಗ ಬಿಟ್ಟು ಸೆರಗಿನಿಂದ ಮುಚ್ಚಿತ್ತಿದ್ದರೆ, ಕೆಲ ಜನ ತಮ್ಮ ಬಿಡುಮುಡಿಯನ್ನೊ, ಕಟ್ಟುಮುಡಿಯನ್ನೊ ಮಲ್ಲಿಗೆ, ಸಂಪಿಗೆಗಳಿಂದಲಂಕೃತಗೊಳಿಸಿ ಸೆರಗನ್ನು ಹೆಗಲ ಮೇಲೆ ಹಾಯಿಸುವರು. ಇತ್ತೀಚಾಗಿ ಸೆರಗು ಎರಡೂ ಹೆಗಲುಗಳನ್ನು ಬಳಸದೇ ಒಂದೇ ಹೆಗಲ ಮೇಲಿಂದ ಹಾಯ್ದು ಹಿಂದೆ ಮಾತ್ರ ಅಲೆದಾಡಹತ್ತಿದೆ. ಸಮುದ್ರ ದಂಡೆಗೆ ವಾಸ ಮಾಡಿಕೊಂಡಿರುವ ಯಾವ ಮಹಿಳೆಯೂ ತಲೆಯ ಮೇಲೆ ಸೆರಗನ್ನು ಹೊರುವ ರೂಢಿ ಇಲ್ಲ. ಕೇಶ ರಚನೆ ಮಾತ್ರ ವಿವಿಧತೆ ಪಡೆದಿಲ್ಲ. ಚಲಚ್ಚಿತ್ರ ಕ್ಷೇತ್ರ ಬಿಟ್ಟು ಬಯಲಿಗೆ ಬಂದಿಲ್ಲ. ತಲೆಯ ಮೇಲೆ ಸೆರಗು ಹೊರುವದು ಕನ್ನಡ ನಾಡಿನ ಹಳ್ಳಿಗಳಲ್ಲಿ ಒಂದು ರೂಢಧರ್ಮವಾಗಿದೆ. ವಿಶೇಷವಾಗಿ ಮಳೆ ಬಿಸಿಲುಗಳಲ್ಲಿ ಶ್ರಮದ ಕೆಲಸ



ವಂಗ ರೂಪಸಿ

ಮಾಡುವ ಒಕ್ಕಲಗಿತ್ತಿಯರು ಎಂದೂ [illegible] ಮೇಲಿನ ಸೆರಗು ತೆಗೆಯುವದಿಲ್ಲ. ಹಾಗೆ [illegible] ಕೆಲ ವಿಶಿಷ್ಟ ವರ್ಗವನ್ನು ಬಿಟ್ಟರೆ ಪಾರ್ಶಿ, ಗುಜರಾತಿ, [illegible] ಸಿಂಧಿ, [illegible], ಪಂಜಾಬಿ. [illegible] ಸ್ತ್ರೀಯರು [illegible]

[illegible] ಮದ್ರಾಸದ ಮಹಿಳೆಯರು ಅಂಚಿಗೆ ಸೀರೆಯನ್ನು ಹಚ್ಚಿದರೆ ಕರ್ನಾಟಕ, ಮಹಾರಾಷ್ಟ್ರಗಳ ಮಹಿಳೆಯರು ಸೀರೆಗೆ ಅಂಚನ್ನು ಹಚ್ಚುತ್ತಾರೆ. ಸೊಲು ದೇಶಿಮೆಗಳು ಮಹಮಾನಕ್ಕಿಂತ ಬಯಕೆ



ಕೊಡಗಿನ ಮಡದಿ

ಬೆಡಗುಗಳನ್ನೇ ಅನುಸರಿಸಹತ್ತಿವೆ. ಸಿಂಧದ ವಿಧವೆಯರ ಉಡುಪು ಬಣ್ಣ ಬಣ್ಣದ ಬೆಡಗಿನದಾಗಿದ್ದರೆ ಬಂಗಾಲದ ವಿಧವೆಯರು ಬರಿಯ ಬಿಳಿಯ ಉಡುಪನ್ನು ಸೆರಗಿಗೆ [illegible] ಗೊಂಡೆಲಗಳೊಂದಿಗೆ ಉಡುತ್ತಾರೆ.

ಸೀರೆಯನ್ನು ಬಿಟ್ಟರೆ ಉಳಿದ ಉಡ[illegible] ಗಳಲ್ಲಿ ಎರಡು ತರ. ಒಂದು [illegible] ತರ, ಇನ್ನೊಂದು ಪೈಜಮಾ. [illegible] ಮೇಲಿನ ಉಡುಪು ಅಂಗಿ ಇದ್ದವೇ [illegible] ಪಠಾಣ ಪೈಜಮವು ಹೆಚ್ಚು [illegible] [illegible] ಜಗಳಲ್ಲಿ ಸುರವಾರ (ಹತ್ತಿಚಡ್ಡಿ) [illegible] ರೂಢಿ ಹುಟ್ಟಿರುತ್ತದೆ. [illegible] ಪರಕರ ತೊಡುವವರು ಹಿಂಬದಿ [illegible] ಇದ್ದ ಕುಪ್ಪಸ ತೊಡುತ್ತಾರೆ. ಅದು [illegible] ಪಾಡ ದೇಶದಲ್ಲಿ ಹೆಚ್ಚು. ಪೈಜಮ [illegible] ಸುರವಾರು ತೊಡುವ ಮಹಿಳೆಯರು ಅಂಗಿ [illegible] ಮೇಲೆ 'ಓರಣಿ' ಮೇಲುವದನ್ನು ಎರ[illegible] ಹೆಗಲುಗಳ ಮೇಲೆ ಸೀರೆಯ ಸೆರಗಿ[illegible] [illegible] ಸೆರಗಿನಂತೆ ಮೇಲುವದು ಕೂಡ ಬಂದೆ [illegible]

[illegible] ಬೆಡಗುಗಳನ್ನು [illegible] ನಮ್ಮ ನಾಡಿನ ಸ್ತ್ರೀಯರ ಉಡುಪು 'ರಾಷ್ಟ್ರೀಯ ಉಡುಪು' — ಇವೆಲ್ಲವುಗಳ [illegible] ಅನುಕೂಲತೆಗಳು, ಸಾದಾತನ, ಉಪಯು[illegible] ತೆಗಳನ್ನೆಲ್ಲ ಆಯ್ದುಕೊಳ್ಳಬೇಕಾಗುತ್ತ[illegible] ಪ್ರೌಢ ಸ್ತ್ರೀಯರ ರಾಷ್ಟ್ರೀಯ ಉಡುಪು, [illegible] ರೀತಿಯಲ್ಲಿಯೂ ಕನ್ನಡ ಕುವರಿಯ ಸೀ[illegible] ಉಡುವದು ಅತ್ಯಂತ ಯೋಗ್ಯವಾಗಿದೆ. ಬಾಲೆ[illegible] ಯರಿಗಾಗಿ ಪಂಜಾಬೀ ಉಡುಪು ಹೆಚ್ಚು ಉ[illegible] ಯುಕ್ತವಾಗುವಂತಿದೆ. ಶಾಲೆ ಕಾಲೇಜು[illegible] ಬಾಲಿಕೆಯರಲ್ಲಿ ಈಗಾಗಲೇ ಅದು ಬಳಕೆಯ[illegible] ಬರಹತ್ತಿದೆ.

ಸಣಬಿನ ವಿಷಯದಲ್ಲಿ ಸ್ವಯಂಪೂರ್ಣತೆ

ಹಿಂದುಸ್ತಾನದ ವಿಭಜನೆಯಾದಂ[illegible] ಸಹಜವಾಗಿ ತೀರ ಗಂಡಾಂತರದ ಭ[illegible] ದಾದ ಭಾರತೀಯ ಉದ್ಯಮವೆಂದರೆ [illegible] ನದು. ಸಣಬಿನ ಗಿರಣಿಗಳೆಲ್ಲ ಭಾರ[illegible] ಅದರ ಬೆಳೆಯ ಅಧಿಕಾಂಶವೆಲ್ಲ ಪಾಕಿಸ್ತಾ[illegible] ಆಗಿ, ಉಭಯ ವಸಾಹತುಗಳಲ್ಲಿ ಈಗ[illegible] ಮನಃಕಷಾಯದ ಸ್ಥಿತಿಯಲ್ಲಿ ಪಾಕಿಸ್ತಾ[illegible] ಕಚ್ಚಾ ಸಣಬು ನಮಗೆ ದೊರೆಯದ[illegible] ಕತ್ತ್ರಿಯ ಅತಿನೊ[illegible] ಉದ್ಯಮಗಳಲ್ಲಿ ಒಂ[illegible] ಇದು ನಷ್ಟವಾಗುವ ಸಂಭವವಿತ್ತು. [illegible] ಭಯವನ್ನು ನೀಗಿಸಲು ಭಾರತ [illegible] ಪ್ರಾಂತೀಯ ಸರಕಾರಗಳು [illegible] ಪ್ರಯತ್ನಗಳು ಈಗಾಗಲೆ ಫಲ ಬಿಡತೊಡ[illegible] ಸಂತೋಷಕರ. ಯುಕ್ತ ಪ್ರಾಂತದ [illegible] ಗಳಿಗೆ ಬೇಕಾಗುವ ಸಣಬನ್ನು ಪ್ರಾಂ[illegible] ಬೆಳೆಯುವ ಪ್ರಯತ್ನದ ಫಲವಾಗಿ ಈ[illegible] ೧,೦೦,೦೦೦ ಮಣ ಸಣಬು ಬೆಳೆಯಿತು. [illegible] ೩೦,೧೦೦ ಎಕರೆ ಭೂಮಿಯನ್ನು ಸಣ[illegible] ಬೆಳೆಗೆ ಉಪಯೋಗಿಸಿ ಪ್ರಾಂತಕ್ಕೆ ಬೇಕಾ[illegible] ಎಲ್ಲ ೬,೦೦,೦೦೧ ಮಣ ಸಣಬನ್ನು ಪ್ರಾಂ[illegible] ದಲ್ಲೆ ಹುಟ್ಟಿಸಲು ಸಾಧ್ಯವಾದೀತೆಂದು [illegible] ಲಾಗಿದೆ.

ಅತ್ತ ಮುಂಬಯಿಯ ಅರ್ಥಶಾಸ್ತ್ರ [illegible] ಜಿಕ ಶಾಸ್ತ್ರಗಳ ಶಾಲೆಯ ನಿರ್ದೇಶಕ[illegible] ಪ್ರೊ. ಸಿ. ಎನ್. ವಕೀಲರ ಪರಿಶ್ರಮದ [illegible] ವಾಗಿ ಮುಂಬಯಿ ಪ್ರಾಂತದಲ್ಲಿ, ಮುಖ್ಯ[illegible] ಗುಜರಾತ ಕಾಠೇವಾಡಗಳಲ್ಲಿ ಕಾಡಿನಂತೆ [illegible] ಯುವ ಒಂದು ತರದ ಗಿಡದಿಂದ ಸಣ[illegible] ನಾರನ್ನು ತೆಗೆಯಲು ಸಾಧ್ಯವಿದೆಯೆಂದು [illegible] ವಾಗಿದೆ. ಇದು ಬರಿ ಚೀಲಗಳಿಗೆ [illegible] ವಲ್ಲದೆ, ಹಗ್ಗ ಹೊಸೆಯಲಿಕ್ಕೂ [illegible] ಮಾಡಲಿಕ್ಕೂ ಉಪಯುಕ್ತವಾಗುವ[illegible] ಪ್ರಕೃತದಲ್ಲಿ ಈ ಗಿಡಗಳು ಬಂಜರು ಭ[illegible] ಯಲ್ಲಿ ಯಾರೂ ಬಿತ್ತದೆ ಬೆಳೆಸದೆ ತಾ[illegible] ಬೆಳೆಯುತ್ತಿವೆ. ಕಾಟ ತಾಳಲಾರದೆ ಅ[illegible] ಸುಡುವದೂ ಉಂಟು. ಪ್ರೊ. ವಕೀ[illegible] ಕೈಯಿಂದ ತಯಾರು ಮಾಡಿಸಿದ ನಾರು [illegible] ಲಾದ ಕೆಲ್ಸು ವಸ್ತುಗಳನ್ನು ತಮ್ಮ ಶಾಲೆ[illegible] ಪ್ರದರ್ಶನಕ್ಕಿಟ್ಟಿದ್ದಾರೆ.

ಟರ್ಕಿಯಲ್ಲಿ ೮೯ ವರ್ಷದ ಒಬ್ಬ ಮನ[illegible] ಇಡಿ ಬೈಬಲ್ಲನ್ನು ೧೩೪ ಸಲ ಓದಿದ್ದಾರೆ. ಕೆಲಸಕ್ಕೆ ಅವನಿಗೆ ದಿನಕ್ಕೆ ೧೧೦ ತಾಸಿನಂತೆ [illegible] ವರ್ಷ ಹಿಡಿಯಿತು.

ತಪ್ಪು ದಾರಿ

ಕೇಂದ್ರ ಸರಕಾರವು ಉದ್ಯಮ ಮತ್ತು ಪೂರಯಿಕೆ ಖಾತೆಯ ಆಡಳಿತೆಯಲ್ಲಿ ಒಂದು ಗೃಹೋದ್ಯಮ ಸಮಿತಿಯನ್ನು ಸಂಘಟಿಸಿದೆ. ಮುಖ್ಯ ವಿಷಯಗಳ ಉದ್ದೇಶ ವಿವೇಚನೆ ಮಾಡುವಲ್ಲಿ, ದೊಡ್ಡ ಉದ್ಯಮಗಳೊಡನೆ ಸ್ಪರ್ಧೆ ನೀಗಿಕೆಗಳನ್ನು ಸಮಾಧಾನಗೊಳಿಸು ವುದೂ ಒಂದೆಂದು ಹೇಳಲಾಗಿದೆ. ಅ. ಭಾ. ಗ್ರಾಮೋದ್ಯಮ ಸಂಘದಿಂದ ಮತ್ತು ಅ. ಭಾ. ಚರಕ ಸಂಘದಿಂದ ಒಬ್ಬೊಬ್ಬ ಪ್ರತಿನಿಧಿಯನ್ನು ಆ ಸಮಿತಿಗೆ ಸರಕಾರದವರು ಆಮಂತ್ರಿಸಿದ್ದರು. ಈ ಎರಡು ಸಂಘಗಳು ಈ ಪ್ರಶ್ನೆಯನ್ನು ಚರ್ಚಿಸಿ, ಅದು ಕಾಂಗ್ರೆಸ್ಸಿನ ಆರ್ಥಿಕ ಯೋಜನಾಸಮಿತಿಯ ಪುರಸ್ಕಾರಗಳೊಡನೆ ಹೊಂದಿಕೆಯಾಗುವಂತೆ ಮಾರ್ಪಾಟು ಮಾಡಿದ ಹೊರತು ತಮ್ಮ ಪ್ರತಿನಿಧಿಗಳನ್ನು ಕಳಿಸಲು ಸಾಧ್ಯವಿಲ್ಲವೆಂದು ತಿಳಿದವು. ಕಾಂ. ಆರ್ಥಿಕ ಯೋಜನಾಸಮಿತಿಯ ವರದಿಯಲ್ಲಿ ದೊಡ್ಡ ಉದ್ಯಮಗಳನ್ನು ಗ್ರಾಮೋದ್ಯಮಗಳ ಆವಶ್ಯಕತೆಗೆ ಹೊಂದಿಸಬೇಕೆಂದು ಹೇಳಿದೆ; ಆದರೆ ಸರಕಾರದ ಇಂದಿನ ಸೂಚನೆ ಆರ್ಥಿಕ ಯೋಜನಾಸಮಿತಿ ಸ್ಥೂಲವಾಗಿ ನಿರ್ದೇಶಿಸಿದ ಧೋರಣಕ್ಕೆ ವಿರುದ್ಧವಾಗಿದೆ.

(೨). ಸಂಕ್ಷೇಪಿಸಿ ಹೇಳುವುದಾದರೆ, ಈಗ ಸಂಘಟಿತವಾದ ಗ್ರಾಮೋದ್ಯಮ ಸಮಿತಿಯು ಗಿರಣಿಯ ನೂಲುಗಳನ್ನು ಬಳಸಿಕೊಳ್ಳುವಂತೆ ಕೈಮಗ್ಗದ ಉದ್ಯಮವನ್ನು ಸಂಘಟಿಸಿ ರೂಪಿಸುವುದು ಎಂದು ಅರ್ಥವಾಗುತ್ತದೆ! 'ಗ್ರಾಮೋದ್ಯಮಗಳನ್ನು ದೊಡ್ಡ ಉದ್ಯಮಗಳಿಗೆ ಹೊಂದಿಸುವುದು' ಎಂಬುದರ ಅರ್ಥ ಇದೇ. ಹಾಗಲ್ಲದೆ, ನಾವು ಹೇಳಿದಂತಾಗಬೇಕಾದರೆ ಬಂಡಿಗಾಲಿಯ ಹಳಿಯನ್ನು ಮಾಡಲು ಹಳ್ಳಿಯ ಕಮ್ಮಾರನಿಗೆ ಕಬ್ಬಿಣ ಮತ್ತು ಉಕ್ಕು ಬೇಕಾದರೆ ಟಾಟಾರ ಕಬ್ಬಿಣ ಮತ್ತು ಉಕ್ಕಿನ ಕಂಪೆನಿಯು ಅವಶ್ಯಕ ಸಾಮಗ್ರಿಯನ್ನು ತಯಾರಿಸಿ ಕೊಡಬೇಕು. ಆದುದರಿಂದ ಗ್ರಾಮೋದ್ಯಮ ಸಮಿತಿಯ ಅಸ್ತಿತ್ವದ ಉದ್ದೇಶ ದೊಡ್ಡ ಉದ್ಯಮಗಳಿಗೆ ನೆರವೀಯುವದೇ ಆಗಿರುತ್ತದೆ, ಎಂಬುದು ಸ್ಪಷ್ಟವಾಗುತ್ತದೆ. ಇದು ಖಂಡಿತವಾಗಿಯೂ ತಪ್ಪು ದಾರಿ. ಗ್ರಾಮೋದ್ಯಮಗಳು ಗ್ರಾಮಸ್ಥರಿಗೆ ಉಪವೃತ್ತಿಗಳಾಗಬಲ್ಲವು ಒಕ್ಕಲುತನದ ಹೊರಗೆ ಅದು ಹಳ್ಳಿಗರ ಆರ್ಥಿಕ ಚಟುವಟಿಕೆಗೆ ಬೆನ್ನೆಲುಬೆನಿಸಿದೆ. ಹಾಗಿರುವಾಗ, ಗ್ರಾಮೋದ್ಯಮಗಳಿಗೆ ಪ್ರಥಮಸ್ಥಾನ ಕೊಡುವುದು ಆವಶ್ಯಕ; ಮತ್ತು ದೊಡ್ಡ ಉದ್ಯಮಗಳು ಗ್ರಾಮೋದ್ಯಮಗಳಿಗೆ ಆವಶ್ಯಕವಾದ ಸಾಮಗ್ರಿಗಳನ್ನು ಪೂರಯಿಸುವುದರ ಸಲುವಾಗಿಯೇ ಇರಬೇಕು. ಬೇರೆ ಯಾವ ದಾರಿ ಹಿಡಿದರೂ ಮಹೋದ್ಯಮಗಳ ಮೂಲಕ ಜನತಾ ಶೋಷಣದತ್ತ ಅದು ನಮ್ಮನ್ನು ಒಯ್ಯುವುದು.

೩. ಕಳೆದ ಡಿಸೆಂಬರಿನ ೩ ನೆಯ ವಾರದಲ್ಲಿ ಗೃಹೋದ್ಯಮ ಸಮಿತಿಯು ಕಟಕದಲ್ಲಿ ಸಭೆ ಸೇರಿತು. ಅದರ ನಿರ್ಣಯಗಳಲ್ಲಿ ಆಂತರಿಕ ಮತ್ತು ನಿರ್ಯಾತದ ಅವಶ್ಯಕತೆಗಳ ಪೂರಯಿಕೆಗಾಗಿ ಮನೆ ಕೈಗಾರಿಕೆಗಳ ಅಭಿವೃದ್ಧಿಗೆ ನೆರವೀಯುವುದೂ ಒಂದು. ಅಲ್ಲದೆ, ಅದು ಮನೆಕೆಗಾರಿಕೆಯ ಸಾಮಾನುಗಳಿಗಾಗಿ ಹೊರನಾಡ ಪ್ರತಿಯೊಬ್ಬ ಟ್ರೇಡ್ ಕಮಿಶನರನ ಕಚೇರಿಯಲ್ಲೂ ಒಂದೊಂದು ಪ್ರದರ್ಶನ ಇಡಬೇಕೆಂದು ಪುರಸ್ಕರಿಸಿತು. ಈ ನಿರ್ಣಯವು ಸರಕಾರದ ವಿಚಾರ ಮತ್ತು [illegible] ಅಭಿಪ್ರಾಯಕ್ಕೆ [illegible] ಈ ಅವಸ್ಥೆಯಲ್ಲಿ ನಿರ್ಯಾತದ ಪೇಟೆಯನ್ನು ಬೆಳೆಸುವುದು ಹಳ್ಳಿಗರ ಹಿತಸಂಬಂಧಗಳಿಗೆ ಅಹಿತವಾಗುತ್ತದೆ. ಅದೇ ವೇಳೆಯಲ್ಲಿ ದೊಡ್ಡ ಉದ್ಯಮಗಳು ಅದರ ಫಲವಾಗಿ ಕೂಡುವ ಡಾಲರುಗಳನ್ನು ಸಂಗ್ರಹಿಸುವರು. ಆಗಲೇ [illegible] ರೂಪದಲ್ಲಿ ಮೊತ್ತವಾದ ಬಡವರ [illegible] ಉದ್ಯಮಗಳಿಗಾಗಿ ಬಳಸಲಾಗುತ್ತಿದೆ. [illegible] ಗೃಹೋದ್ಯಮ ಸಮಿತಿಯ ಕಾರ್ಯಕ್ರಮ ಈ ಪ್ರವೃತ್ತಿಯನ್ನು ಮತ್ತಷ್ಟು ಹೆಚ್ಚಿಸುತ್ತದೆ.

೪. ಇದಲ್ಲದೆ, ದೂರದ ಪೇಟೆಯನ್ನು ಗೆಲ್ಲುವಷ್ಟು ಅರ್ಥನೀತಿ ಕೌಶಲ ಹಳ್ಳಿಗರಿಗಿಲ್ಲ ಆದ್ದರಿಂದ. ಇಲ್ಲಿಯವರೆಗೆ ಅವರ ಅಜ್ಞಾನವನ್ನು ದುರುಪಯೋಗ ಪಡಿಸಿಕೊಂಡ ಮಧ್ಯಸ್ಥರ ಬಲೆಯಲ್ಲಿ ಬಿದ್ದಿದ್ದಾರೆ. ಈಗಿರುವ ಪರಿಸ್ಥಿತಿಯಂತೆ, ಹೊರನಾಡುಗಳಿಗೆ ನಿರ್ಯಾತ ಮಾಡಲು ಸಾಮಾನುಗಳನ್ನು ತಯಾರಿಸದೆ ಗ್ರಾಮೋದ್ಯಮಗಳು ಒಳನಾಡ ಬಳಕೆಗಾಗಿ ಅವನ್ನು ತಯಾರಿಸುವುದೇ ಒಳ್ಳೆಯದು. ಹಾಗೆಂದರೆ ನಾವು ವಿಚಿತ್ರವೆನಿಸುವ ಯಾವ ವಸ್ತುವನ್ನೂ ತಯಾರಿಸುವುದೇ ಇಲ್ಲವೆಂದಲ್ಲ. ಆದರೆ ವಿಚಿತ್ರವಸ್ತು ವ್ಯಾಪಾರವು ಗ್ರಾಮೋದ್ಯಮಗಳ ಅತ್ಯಲ್ಪ ಅಂಶವಾಗಿರುತ್ತದೆ. ಹಳ್ಳಿಗರಿಗೆ ಬೇಕಾದ ವಸ್ತುಗಳೆಂದರೆ, ಲೋಹಪಾತ್ರೆಗಳು, ಬಟ್ಟೆ ಮತ್ತು ಗೃಹಕೃತ್ಯದ ಚಿಕ್ಕ ಪುಟ್ಟ ಸಾಮಗ್ರಿಗಳು. ಇವನ್ನು ಕೂಡ ಹೆಚ್ಚಾಗಿ ದೊಡ್ಡ ಕಾರಖಾನೆಗಳಿಂದಾಗಲಿ, ಪರದೇಶಗಳಿಂದಾಗಲಿ ತರಿಸಿಕೊಳ್ಳಬೇಕಾಗಿದೆ. ಈ ಎಲ್ಲ ಆವಶ್ಯಕ ವಸ್ತುಗಳನ್ನು. ಗ್ರಾಮೋದ್ಯಮ ಗೃಹೋದ್ಯಮಗಳ ಸಂಘಟನೆಯಿಂದ ಹಳ್ಳಿಗರ ಆವಶ್ಯಕತೆಗಳಿಗನುಗುಣವಾಗಿ ಪೂರಯಿಸುವಂತೆ ಮಾಡಬಹುದು.

೫. ಸಾಮ್ರಾಜ್ಯಶಾಹಿ ಅನುಸರಿಸಿದ ಧೋರಣದ ಪರಿಣಾಮವಾಗಿಯೇ ಬಹುಮಟ್ಟಿಗೆ ಇಂದು ಹಳ್ಳಿಯ ಕೈಗಾರಿಕೆಗಳು ಉಚ್ಚಾಟನೆ ಹೊಂದುವಂತಾಯಿತು. ಮತ್ತು ಈಗಿನ ಧೋರಣವಾದರೂ ಅವುಗಳ ಮೇಲಿನ ಅಧಿಕಾರವನ್ನೇ ಹಳ್ಳಿಗರಿಂದ ಕಿತ್ತುಕೊಳ್ಳುವಂತೆ ತೋರುತ್ತದೆ. ಇದು ಹಳ್ಳಿಗರ ಹಿತಸಂಬಂಧಗಳಿಗೆ ಶತ್ರುರೂಪದ್ದಾಗಿದೆ ನಾವು ದೂರದ ಪೇಟೆಗೆ ಕಳಿಸುವುದನ್ನು ನಿರುತ್ಸಾಹಗೊಳಿಸಿ, ಒಳಪೇಟೆ ಮತ್ತು ಒಳಬಳಕೆಗಾಗಿ ಸಾಮಾನುಗಳನ್ನು ಸಿದ್ಧಗೊಳಿಸುವುದಕ್ಕೆ ಪ್ರೋತ್ಸಾಹ ಕೊಡಬೇಕು. ಈ ಸಂಬಂಧದಲ್ಲಿ ಗೃಹೋದ್ಯಮ ಸಮಿತಿಯು ಸ್ವತಃ ಗ್ರಾಮೋದ್ಯಮಸಿದ್ಧವಾದ ವಸ್ತುಗಳನ್ನೇ ಬಳಸಲು ನಿರ್ಧರಿಸಬೇಕೆಂದು ನಾವು ಸೂಚಿಸಬಯಸುತ್ತೇವೆ. ಉದಾಹರಣೆಗಾಗಿ ಖಾದಿ, ಕೈಕಾಗದ ಮತ್ತು ಇತರ ಲೇಖನಾದಿ ಸಾಮಗ್ರಿಗಳನ್ನು ತೆಗೆದುಕೊಳ್ಳಬಹುದು. ಅದು ತನ್ನ ಕಾರ್ಯವನ್ನು ಹೀಗೆ ಪ್ರಾರಂಭಿಸಿ, ಮಿಕ್ಕ ಸರಕಾರೀ ಕಚೇರಿಗಳಿಗೂ ಹಳ್ಳಿಗರು ತಯಾರಿಸಿದ ಸಾಮಾನುಗಳ ಬಳಕೆಯನ್ನೇ ಪುರಸ್ಕರಿಸುವಂತೆ ಹೇಳಬಹುದು. ತಾವು ಮೊದಲು ಮಾಡಿ ತೋರಿಸಲಿ. ಅದರಿಂದ ಹಳ್ಳಿಗರ ಇತಿಮಿತಿಗಳನ್ನು ಕಂಡು ಅವರ ಉದ್ಯಮ ಕಾರ್ಯಕ್ರಮವನ್ನು ಗ್ರಾಮೋದ್ಯಮ ಸಮಿತಿ ಸಂಘಟಿಸುವುದೆಂದು ನಾವು ಆಶಿಸುತ್ತೇವೆ.

— ಜೆ. ಸಿ. ಕುಮಾರಪ್ಪ

ಮುಖ ಪುಟದ ಚಿತ್ರ

ಈ ಜನವರಿ "ಕರ್ಮವೀರ"ದ ಮುಖಪುಟ ದಲ್ಲಿ ಮುದ್ರಿಸಿದ ಚಿತ್ರ [illegible] ಮಾಲೆಯದು. ಇದನ್ನು ತೆಗೆದವರು [illegible] ಛಾಯಾಚಿತ್ರಪಟು ಶ್ರೀ [illegible] ಶುಕ್ಲರು. ಅವರು ಇದಕ್ಕೆ "[illegible]" (Vision) ಎಂದು ಹೆಸರಿಟ್ಟಿದ್ದಾರೆ. ಇದು ಜಗತ್ತಿನ ಈ ವರ್ಷದ ೫೦ ಅತ್ಯುತ್ತಮ



ಛಾಯಾಚಿತ್ರಪಟು
ಶ್ರೀ ಡಿ. ಎಸ್. ಶುಕ್ಲ

ಛಾಯಾ ಚಿತ್ರಗಳಲ್ಲೊಂದೆಂದು ಪಾಶ್ಚಿಮಾತ್ಯ ಚಿತ್ರ ಪರೀಕ್ಷಕರಿಂದ ಪರಿಗಣಿಸಲ್ಪಟ್ಟು ಜಗತ್ತಿನ ಅತ್ಯುತ್ತಮ ಚಿತ್ರಗಳನ್ನೊಳಗೊಂಡ "ವರ್ಷದ ಛಾಯಾ ಚಿತ್ರಗಳು" ಎಂಬ ಪುಸ್ತಕದಲ್ಲಿ ಮುದ್ರಣಕ್ಕಾಗಿ ಆರಿಸಲ್ಪಟ್ಟಿದೆ. ಅಲ್ಲದೆ "ಪ್ರವಾಸಿ ಪ್ರದರ್ಶನ"ದಲ್ಲಿ ಪ್ರದರ್ಶಿಸಲು ಸಹ ಆರಿಸಲ್ಪಟ್ಟಿದೆ. "ಲಂಡನ್ ಸೆಲೂನ್ ಆಫ್ ಫೋಟೋಗ್ರಾಫಿ"ಯಲ್ಲಿಯೂ ಇದರ ಪ್ರದರ್ಶನವಾಗಿತ್ತು.

ಭಾರತಕ್ಕೆ ಹೆಸರು ತಂದ ಈ ಚಿತ್ರದ ಸೋಗಸಿಕೆ ಅದು ಯಾರ ಪ್ರತಿಬಿಂಬವೋ ಅವರಲ್ಲಿರದೆ ಅದನ್ನು ಪ್ರತಿಬಿಂಬಿಸಿದ ಕಲ್ಪಾವಿದನ ನೈಪುಣ್ಯದಲ್ಲಿದೆ. ವೃತ್ತಪತ್ರದ ಕಾಗದದಲ್ಲಿ ಅದರ ಪರಿಪೂರ್ಣ ಪ್ರತಿಚ್ಛಾಯೆ ಮೂಡುವದು ಅಸಾಧ್ಯವಾದರೂ ಓದುಗರು ಅದರ ಅಲ್ಪಸ್ವಲ್ಪ ಪರಿಚಯವನ್ನಾದರೂ ಅಲ್ಲಿ ಪಡೆಯಬಹುದು. ವಜ್ರಾಭರಣಗಳ ಮತ್ತು ಜರತಾರಿ ಕೆಲಸದ ಪ್ರಕಾಶವನ್ನು ಛಾಯಾ ಚಿತ್ರದ ಪಟಲದ ಮೇಲೆ ಅಚ್ಚಳಿಯದಂತೆ ಮೂಡಿಸುವದು ಅತ್ಯಂತ ಕಠಿನವೆಂದು ಬಲ್ಲವರೇ ಬಲ್ಲರು. ನಮ್ಮ ಕೈಗೆ ಬಂದಿರುವ ಪ್ರತಿಯಲ್ಲಿ ಅವುಗಳ ಮಿಂಚು ಮೋಹಕವಾಗಿ ಮೂಡಿದೆ ಮತ್ತು ಓದುಗರ ಕೈಸೇರುವ ಮುದ್ರಣದಲ್ಲಿಯೂ ಅದರ ಚೆಲುವನ್ನು ಅಂಶ ಮಾತ್ರವಾದರೂ ಕಾಣಬಹುದೆಂದು ನಂಬಿಕೆ.

ಈ ವಾದವಿನ್ನು ನಿಲ್ಲಲಿ

ನಮ್ಮ ರಾಷ್ಟ್ರಭಾಷೆಯನ್ನು ಬಗೆಬಗೆಯ ಹೆಸರಿನಿಂದ ಕರೆಯಲಾಗುತ್ತದೆ. ಹಿಂದುಸ್ತಾನಿ, ಹಿಂದವಿ, ಹಿಂದಿ, ಖಡಿಬೋಲಿ, ರಾಷ್ಟ್ರಭಾಷಾ ಇತ್ಯಾದಿ. ಈ ಹೆಸರುಗಳ ಗೊಂದಲವನ್ನೂ ಗುದುಮುರಿಗೆಯನ್ನೂ ತಪ್ಪಿಸಿಕೊಳ್ಳಲು ಕೆಲವರು ಅದಕ್ಕೆ ರಾಷ್ಟ್ರಭಾಷೆಯೆಂದೂ ಸಾರ್ವತ್ರಿಕ ಭಾಷೆಯೆಂದೂ ಸರಕಾರೀ ಭಾಷೆಯೆಂದೂ ಇತ್ತೀಚೆಗೆ ಒಕ್ಕೂಟ ಭಾಷೆಯೆಂದೂ ಕರೆಯುತ್ತಾರೆ. ಇನ್ನು ಈ ಬಗೆಯ ವಾದವು ನಿಲ್ಲಬೇಕು. ಈ ವರೆಗೆ ಉಪಯೋಗಿಸಲಾಗುತ್ತಿರುವ ಹೆಸರುಗಳ ಉತ್ಪತ್ತಿಯ ಇತಿಹಾಸವನ್ನು ಕಂಡುಕೊಳ್ಳುತ್ತ ಕೂಡುವ ಅಗತ್ಯವಿಲ್ಲ. ಹಿಂದುಸ್ತಾನಿ ಎಂದು ಹೇಳುತ್ತ ಬಂದವರು ಯಾವ ಹೆಸರುಗಳ ಬಗ್ಗೆಯೂ ಮೋಹ ತಳೆದಿಲ್ಲ. ಭಾಷೆಯಲ್ಲಿದ್ದ ಸಾರವಲ್ಲದೆ ಹೆಸರು ಮಹತ್ವದ್ದಲ್ಲ.

ಮಹಾತ್ಮಾ ಗಾಂಧಿಯವರು ೧೯೧೮ ರಿಂದ ಮುಂದೆ ಹಿಂದಿ ಎಂಬ ಪದವನ್ನೇ ಬಳಸುತ್ತ ಬಂದರು ಹಾಗೂ ಕಾಲಕಾಲಕ್ಕೆ ಹಿಂದಿಯಲ್ಲಿ ಉರ್ದುವೂ ಸಮಾವಿಷ್ಟವಾಗಿರುವದೆಂದು ಸ್ಪಷ್ಟಪಡಿಸುತ್ತಲೂ ಬಂದರು. ಶ್ರೀ ಪುರುಷೋತ್ತಮದಾಸ ಟಂಡನ್ನರ ಸಲಹೆಯ ಮೇರೆಗೆ ಕಾಂಗ್ರೆಸು ೧೯೨೫ ರ ಗೊತ್ತುವಳಿಯಲ್ಲಿ ಹಿಂದುಸ್ತಾನಿ ಎಂಬ ಪದವನ್ನು ಖಚಿತವಾಗಿ ಸ್ವೀಕರಿಸಿಬಿಟ್ಟಿತು. ಹಿಂದುಸ್ತಾನಿಯು ಹಿಂದಿ ಮತ್ತು ಉರ್ದುವನ್ನು ಹತ್ತಿಕ್ಕಲು ಒಂದು ಸಾಧನವಾಯ್ತು. ಹಿಂದೀ ಸಾಹಿತ್ಯ ಸಮ್ಮೇಲನದ ನಂತರ ಹಿಂದಿಯ ವ್ಯಾಪ್ತಿಯನ್ನು ಸಂಕುಚಿತಗೊಳಿಸಲಾಯ್ತು. ಎಂದೇ ಗಾಂಧೀಜಿಯವರು ಹಿಂದುಸ್ತಾನಿ ಎಂಬ ಪದವನ್ನು ಸ್ವೀಕರಿಸಲೇಬೇಕಾಯ್ತು. ಹಿಂದಿಗಿಂತ ಹಿಂದುಸ್ತಾನಿಗೆ ಇಂದು ವ್ಯಾಪಕಾರ್ಥ ಬಂದಿದೆಯೋ ನಿಜ. ದುರ್ದೈವದಿಂದ ಹಿಂದು ರಾಷ್ಟ್ರೀಯ [illegible] ಜಾತೀಯ ಭಾವವೂ [illegible] ಕೊಂಡಿವೆ, ಮತ್ತು ಹಿಂದಿ ಎಂಬ [illegible] ಈ ಭಾವನೆಯು ಪ್ರತೀಕದಂತಿವೆ. ಇದರ ಪರಿಣಾಮವಾಗಿ ಹಿಂದುಗಳಲ್ಲದವರಿಗೆ, ಹಿಂದುಸ್ತಾನ ಎಂಬ ಮಾತಿನಲ್ಲಿ ಅವರ ರಾಜಕೀಯ ಹಾಗೂ ಸಾಂಸ್ಕೃತಿಕ ಜೀವನಕ್ಕೂ ಹಕ್ಕುಗಳಿಗೂ ಆಸ್ಪದವಿದೆಯೆಂಬುದಾಗೂ ಈ ಅನುವು ಹಿಂದಿಯಲ್ಲಿ ಇಲ್ಲವೆಂಬ ಭಾವನೆಯು ಹುಟ್ಟಿಹೋಗಿದೆ. ಈ ಬಗ್ಗೆ ಹಿಂದುಗಳಲ್ಲದವರಲ್ಲಿ ನಂಬುಗೆ ಹುಟ್ಟಿಸುವಂತಹ ಬೇರಾವ ಶಬ್ದವನ್ನೂ ಬಳಸಲು ಅಡ್ಡಿಯಿಲ್ಲ ಯಾವ ಶಬ್ದವಾದರೇನು? ಹಿಂದಿಯೊಡನೆ ಹೊಂದಿಕೊಂಡಿರುವ, ವ್ಯಾಪಕವಾದ ಮತ್ತು ಸರ್ವ ಸಮನ್ವಯ ಭಾವವನ್ನು ವ್ಯಕ್ತಪಡಿಸುವ ಬೇರಾವ ಶಬ್ದವಾದರೂ ಸರಿಯೇ. ಉತ್ತರ ಹಿಂದುಸ್ತಾನದ ಜನಸಾಮಾನ್ಯರು ಆಡುವ ಭಾಷೆ ಅದು ಇರಬೇಕಾದರೂ ಪೂರ್ವ, ಪಶ್ಚಿಮ, ದಕ್ಷಿಣ ಹಿಂದುಸ್ತಾನದವರಿಗೂ ಅದು ಸುಲಭವಾಗಿ ತಿಳಿವಂತಿರಬೇಕು.

ನಾನು ಹಿಂದುಸ್ತಾನಿ ಎಂಬ ಮಾತಿಗೆ ಕೊಡುವ ಅಭಿಪ್ರಾಯವನ್ನೇ ಹಿಂದಿ ಎಂಬ ಶಬ್ದಕ್ಕೆ ಕೊಡುವವರೂ ಭಾಷೆಯ ಸತ್ವಕ್ಕೆ ಮಹತ್ವ ಕೊಡುವವರೂ ಅನೇಕರಿದ್ದಾರೆ. ಆದರೆ ಹಿಂದಿ ಎಂಬ ಶಬ್ದದ ಮೇಲೆ ಅವರಿಗೊಂದು ಬಗೆಯ ಆದರವಿದೆ. ಇಂತಹರಿಗೆನನ್ನದೊಂದು ವಿಜ್ಞಾಪನೆಯುಂಟು ಹಿಂದಿಯನ್ನು ಸಂಸ್ಕೃತಮಯ ಮಾಡಿ ಹಿಂದುವಲ್ಲದ ಯಾವ ಭಾಷೆಯ ಶಬ್ದಗಳಿಗೂ ಆಸ್ಪದ ಕೊಡಕೂಡದೆಂಬ ಆಂದೋಲನವೆದ್ದಿದ್ದು ಈ ಆಂದೋಲನದಲ್ಲಿ ಅವರು ಭಾಗವಹಿಸಕೂಡದಾಗಿ ಬೇಡುತ್ತೇನೆ. ಈ ಬಗೆಯ ಆಂದೋಲನವು ನಮ್ಮನ್ನು ಎಲ್ಲಿಗೆ ಒಯ್ಯಬಹುದೆಂಬುದಕ್ಕೆ ಭಾರತದ ರಾಜ್ಯಘಟನೆಯ ಹಿಂದಿ ಪರಿವರ್ತನವು ಒಂದು ದೊಡ್ಡ ಸಾಕ್ಷಿಯಾಗಿದೆ.

ಹಿಂದಿ ಶಬ್ದವು ಕೇವಲ ಹಿಂದು ಸಂಸ್ಕೃತಿಯ ಪ್ರತಿರೂಪವಾಗಿ ಇರುವದಿಲ್ಲವಾಗಿದ್ದರೆ ಈ ಆಂದೋಲನದ ಧುರೀಣರು ಹಾಗೆ ಅಸಂದಿಗ್ಧ ಮಾತುಗಳಿಂದ ಅದನ್ನು ಸ್ಪಷ್ಟಪಡಿಸಲಿ. ಎಲ್ಲ ಬಗೆಯ ಸಾಂಸ್ಕೃತಿಕ, ಧಾರ್ಮಿಕ ಘಟಕಗಳಿಗೂ ತಕ್ಕಸ್ಥಾನವಿದೆಯೆಂದು ಸಾರಲಿ ಮತ್ತು ಜಾತ್ಯತೀತ ಪ್ರಜಾರಾಜ್ಯದ ತತ್ವವನ್ನು ಹೃತ್ಪೂರ್ವಕವಾಗಿ ಒಪ್ಪುತ್ತೇವೆಯೆಂದು ಆಶ್ವಾಸನ ಕೊಡಲಿ; ಯಾವ ಒಂದು ಜಾತಿ ಪಂಗಡದ ಅಥವಾ ಯಾವ ಒಂದು ಬಗೆಯ ಜೀವನ ಕ್ರಮದ ಬಗ್ಗೆಯೂ ಪಕ್ಷಪಾತವಿಲ್ಲವೆಂದೂ ಎಲ್ಲ ಜನರನ್ನೂ ಈ ಅಭಿಪ್ರಾಯಕ್ಕೆ ಅಳವಡಿಸಿ ಕ್ರಮೇಣ ಹಿಂದೀಧ್ವಜದಡಿಯಲ್ಲಿ ಅವರನ್ನೆಲ್ಲ ತರಲಾಗುವದೆಂದೂ ಭರವಸೆ ಹುಟ್ಟಿಸಲಿ. ಈ ಅವಧಿಯಲ್ಲಿ ಇವರು ತಾವೇ ಒಂದು ದಿನ ರಾಷ್ಟ್ರಭಾಷೆಯ ಅಗ್ರಾಸನ ಕೊಟ್ಟ ಹಿಂದುಸ್ತಾನಿ ಎಂಬ ಶಬ್ದವನ್ನೇ ಒಪ್ಪಿ ಬಳಸುವದು ಉತ್ತಮ.

ಲಿಪಿಯ ಸಮಸ್ಯೆಯು ನಮ್ಮನ್ನು ಇನ್ನು ಬಹಳ ದಿಗಿಲುಗೊಳಿಸುವ ಕಾರಣವಿಲ್ಲ. ಎಲ್ಲರ ಉಪಯೋಗಕ್ಕೆಂದು ಬರೆದಾಗ ಅಥವಾ ಮುದ್ರಿಸಿದಾಗ ದೇವನಾಗರಿ ಲಿಪಿಯನ್ನೇ ಬಳಸಬೇಕೆಂಬುದನ್ನು ಸಕಲರು ಒಪ್ಪಿದ್ದಾರೆ. ಕೆಲ ವರ್ಷಗಳ ವರೆಗೆ ಉರ್ದುವನ್ನು ಉಪಲಿಪಿಯಾಗಿ ಉಪಯೋಗಿಸುವದು ಅನಿವಾರ್ಯವೆಂದೇ ಹೇಳಬೇಕಾಗುವದು. ಉರ್ದು ಲಿಪಿಯನ್ನು ಬಳಸುವದರಿಂದ ರಾಷ್ಟ್ರೀಯ ಮುಸಲ್ಮಾನರಿಗೆ ಕಾಲಕ್ರಮದಲ್ಲಿ ತಮ್ಮ "ಉರ್ದು–ಇ ಮುಅಲ್ಲಾ"ವನ್ನು ತುಸು ತೇಲುಗೊಳಿಸಿ ಎಲ್ಲರಿಗೂ ತಿಳಿಯಲು ಸುಲಭವಾದ ಮತ್ತು ನಮ್ಮ ಕಲ್ಪನೆಯ ಹಿಂದುಸ್ತಾನಿಗೆ ಹತ್ತಿರವಿರುವ "ಉರ್ದು [illegible]"ಯಲ್ಲಿ ಮಾರ್ಪಡಿಸಲು ಅವಕಾಶವಾಗುವದು.

ಸರಕಾರೀ ಪ್ರಕಟನೆಗಳು ಘೋಷಣೆಗಳೇ ಮೊದಲಾದವನ್ನು ಕೇಂದ್ರ ಸರಕಾರವಷ್ಟೇ ಉರ್ದುಲಿಪಿಯಲ್ಲಿ ಪ್ರಸಿದ್ಧಿಸಬೇಕೆಂದಿರದೆ, ಸಂಯುಕ್ತಪ್ರಾಂತ, ಬಿಹಾರಗಳಂತಹ ಪ್ರಾಂತಿಕ ಸರಕಾರಗಳಿಗೂ ಈ ನಿಯಮವು ಅನ್ವಯಿಸುವದು ಯೋಗ್ಯವೆಂಬುದಾಗಿ ಕೆಲವರ ಅಭಿಪ್ರಾಯವಿದೆ. ಈ ಸರಕಾರಗಳು ಈ ಕರ್ತವ್ಯವನ್ನು ಪಾಲಿಸಿದರೆ ಇಲ್ಲವೆ ಈ ಬಗ್ಗೆ ತುಸು ಶಿಥಿಲವಾದರೆ ವೈಯಕ್ತಿಕವಾಗಿ ನನಗೇನು ಅಷ್ಟು ದೊಡ್ಡ ತಪ್ಪೆಂದು ತೋರುವದಿಲ್ಲ.

ಆದರೆ ಈ ಸರಕಾರಗಳು ತದ್ವಿರುದ್ಧ ಧೋರಣವನ್ನು ವಹಿಸಿದ್ದು ಅದನ್ನು ಆದೆಂತು ಮರೆಯುವದು? ಇದು ಕೇವಲ ಉರ್ದು ಲಿಪಿಯನ್ನೇ ಬಳಸುವವರನ್ನು ಈ ಮೂಲಕ ಕಡೆಗಣಿಸಿದಂತೆಯಾಗುವದೆಂಬುದನ್ನು ವಿಚಾರಿಸುವದು ಬೇಡವೆ? ಆದರೆ ಒಂದು ಮಾತನ್ನು ಸಕಲರೂ ಲಕ್ಷ್ಯದಲ್ಲಿಡುವಾ. ರಾಷ್ಟ್ರವನ್ನು ಜೋಡುಗೊಳಿಸಲೆಂದು ಕೈಕೊಂಡ ಉಪಾಯವೇ ಅದನ್ನು ತುಂಡರಿಸಿ ಎರಡು ಪರಸ್ಪರ ವಿರೋಧ ಬೆಳೆಯಿಸುವ ಬಣಗಳಾಗಿ ಪರಿಣಮಿಸದಿರಲಿ.

ಹಿಂದುಸ್ತಾನಿ ಪ್ರಚಾರ ಸಭೆಯವರಾದ ನಾವು ಸರ್ವಮಾನ್ಯ ಸಂಸ್ಕೃತಿಯನ್ನು ಪ್ರತಿನಿಧಿಸುವ ಹಿಂದುಸ್ತಾನಿ ಎಂಬ ಸಾರ್ವತ್ರಿಕ ಭಾಷೆಯ ಪ್ರಸಾರ ಧೋರಣೆಯನ್ನೇ ಅನುಸರಿಸುವೆವೆಂಬುದು ನಿರ್ವಿವಾದವಾಗಿದೆ. ಮತ್ತು ದೂರದೃಷ್ಟಿಯ ರಾಷ್ಟ್ರದ ಹಿತಚಿಂತಕರು [illegible] ಗಳನ್ನು ಕಳೆಯಬೇಕೆಂದು ಈ ಮೂಲಕ [illegible] ವಿಜ್ಞಾಪಿಸುತ್ತೇನೆ.

ಕಾಕಾ ಕಾಲೇಲಕರ

[illegible] — ಕಾಕಾಸಾಹೇಬರ ಭಿನ್ನಹದ ಮೇರೆಗೆ ಈ ವಿಷಯದ ಚರ್ಚೆಯನ್ನು ಇನ್ನು ಮೇಲೆ ಹರಿಜನದಲ್ಲಿ ನಿಲ್ಲಿಸಲಾಗಿದೆ.

ಕಿಶೋರಲಾಲ ಮಶ್ರುವಾಲಾ,

ಮುಂಬಯಿ   ೨೪-೧೨-೪೮

[illegible]

[illegible]

[illegible]

[illegible] ಮುಕ್ತಿ ಹೊಂದಿತ ಅವಸರ [illegible]

[illegible]

ದ್ದಳು. ಆಗ ಸಂಸ್ಥಾನಿಕರು ಸಂಶಯದೃಷ್ಟಿಯಿಂದ ಅವರನ್ನು ಕಾಣುತ್ತಿದ್ದರೆ ಈಗ ರಾಜಸ್ಥಾನದಿಂದ ಅವರನ್ನು ಗೌರವಿಸಿದರು.

ಎರಡೂ ಸಂಸ್ಥಾನಗಳಲ್ಲಿ ಪಂಡಿತ ನೆಹರು ಅವರು ಕೆಲವು ಡಾಕ್ಟರೇಟುಗಳನ್ನು ಪಡೆದ ರಾದರೂ ಮಂತ್ರಿಪದದಿಂದ 'ಮಾನ್ಯ'ರೆನಿಸಿದರೂ ಅವರನ್ನು ಭಾರತೀಯರ ಮನು ತೆಯು 'ಪಂಡಿತ'ರಾಗಿಯೆ ಉಳಿದಿದ್ದಾರೆ— ಆಡಿದ ಮಾತುಗಳು ಅವರು ಹೊತ್ತ ರಾಷ್ಟ್ರ ಭಾರದ, ಹೊಣೆಯು, ಮತ್ತು ಭಾರತದ ಭಂ ವ್ಯದ ಬಗ್ಗೆ ಅವರಿಗಿರುವ ನಿರತಿಶಯವಾದ ಕಳಕಳಿಯ ದ್ಯೋತಕವಾಗಿದ್ದವು. ಅದರಿಂದ ಅವರು ಕೆಲವೆಡೆ ನಿರ್ದಾಕ್ಷಿಣ್ಯತೆಯನ್ನು ಪ್ರದರ್ಶಿಸಿದರು. ಹೈದರಾಬಾದಿನ ಮಿಲಿಟರಿ ಆಡಳಿತೆಯನ್ನು ಕೊನೆಗೊಳಿಸಿ ಜನತಾ ಸರ ಕಾರವನ್ನು ಸ್ಥಾಪಿಸುವದೆಂದು ಎಂದು ಆತು ರರಾದ ಜನರಿಗೆ ಅವರಿತ್ತ ಉತ್ತರ ಸ್ಪಷ್ಟೋಕ್ತಿಯ ಒಂದು ನಿದರ್ಶನವೇ. ಅವಸರದಿಂದ ಏನಾದರೊಂದು ಮಾಡುವದಕ್ಕಿಂತ ವಿಲಂಬದ ಅಪವಾದ ತಮ್ಮ ಮೇಲೆ ಬಂದರೂ ಚಿಂತೆಯಿಲ್ಲ, ಎಂದವರು ನುಡಿದುದು ಸಮಂಜಸವೇ ಆಗಿದೆ. ಸಂಸ್ಥಾನದ ಪ್ರಮುಖ ರಾಜ [illegible] ಉಂಟಾಗಿರುವ ಒಡಕು, ಸಂಸ್ಥಾನದಲ್ಲಿ ಇನ್ನೂ ಶಾಂತಿ ಸುವ್ಯವಸ್ಥೆಗಳು ನೆಲಸದಿರುವದೇ ಮೊದಲಾದ ಅಂಶಗಳು 'ಸ್ವರಾಜ್ಯ' ದಲ್ಲಿ ಅನುಭವ ಲ್ಲದ ಜನತೆಯ ಕೈಯಲ್ಲಿ ಒಮ್ಮೆಲೆ ಅಧಿಕಾರಾರ್ಪಣ ಮಾಡುವದನ್ನು ಮುಸುಕಿನ ಮಾತಾಗಿ ಮಾಡಿಟ್ಟಿವೆ. ಅದುದರಿಂದಲೇ ಅವರು ಒಗ್ಗಟ್ಟು, ಜನಸೇವೆ, ಈಗ ಒದಗಿ ಬಂದಿರುವ ಆರ್ಥಿಕ ಸಮಸ್ಯೆಗಳ ನಿವಾರಣೆ [illegible] ಪುನರ್ [illegible] ಮೊದಲಾದ ಅವಸರದ ಕೆಲಸಗಳು ಕೈಗೂಡಿ ದಲ್ಲದೆ ಯಾವ ಜನತಾಸರಕಾರವೂ ಬದುಕಿ [illegible] ಸ್ಯೆಗಳ ನಿವಾರಣೆಗಾಗಿ ಟೊಂಕಕಟ್ಟಿ ದುಡಿ ಯುವದು ಹೈದರಾಬಾದಿನಜನತೆಗೆ, ಅದ್ಯಾ ಅದರ ನೇತೃಗಳಿಗೆ ಸೇರಿದ್ದು. ಸಂಬಂಧ ಪಟ್ಟವರೆಲ್ಲರೂ ಆ ದಿಶೆಯಲ್ಲಿ ಪ್ರಯತ್ನ ಗಳನ್ನು ವಿನಿಯೋಗಿಸಿದರೆ ಜನತೆಯ ಆಸೆ [illegible]

ಬೆಂಗಳೂರು ನ್ನೆಹರೂರುಗಳಲ್ಲಿ ಅವರಿಗೆ [illegible] ಹಲವು ಕಾರ್ಯಕ್ರಮಗಳು ಕಾದಿದ್ದರೂ ಅವರು ಮುಖ್ಯವಾಗಿ ಅಲ್ಲಿಗೆ ಭೆಟ್ಟಿಕೊಟ್ಟದ್ದು ಅಲ್ಲಿ ವೈಮಾನಿಕ ಸಂಘದ ಉದ್ಘಾಟನೆಗಾಗಿ [illegible] ತಿಳ್ಳುವು ಕಾರ್ಖಾನೆಗ [illegible] ಅವರು ಆಧುನಿಕ ವಿಜ್ಞಾನದ ಸೌಕರ್ಯಗಳನ್ನು ತಿರಸ್ಕರಿಸುವವರಲ್ಲ. ಭಾರತದ ವೈಜ್ಞಾನಿಕ ಪ್ರಗತಿಯ ಬಗ್ಗೆ [illegible] ಅವರು ವಿಶ್ರಾಂತಿ ಕಾಣಕ್ಕೆ [illegible] ಇಲ್ಲದ ಸಿಸ್ವಾಸ ಹೊಕ್ಕ [illegible] ಮನ್ನು ಕಿರಿಯುವ ಕಲವಾಗಿಯೆ. ಎಂದು ಇಲ್ಲಿ ನೆನೆದುಕೊಳ್ಳಬಹುದು. ಭಾರತೀಯ ವೈಜ್ಞಾನಿಕರು ನಮ್ಮ ಮುಖ್ಯ ಮಂತ್ರಿಗಳ ಈ ಕಳಕಳಿಯ ಲಾಭವನ್ನು ಪಡೆದ ದೇಶ ವನ್ನು ವೈಜ್ಞಾನಿಕ ಪ್ರಗತಿಯಲ್ಲಿ ಮುಂದೆ ಯ್ಯುವರೆಂದು ಹಾರೈಸಬಹುದು.

ಮುಖ್ಯ ಮಂತ್ರಿಗಳ ಸ್ಪಷ್ಟೋಕ್ತಿ ಮೆಚ್ಚತಕ್ಕದ್ದೇ ಆದರೂ ಭಾಷಾವಾರು ಪ್ರಾಂತರಚನೆಯ ವಿರುದ್ಧ ಅವರು ಬೆಂಗಳೂರಲ್ಲಿ ಆಡಿದ ಮಾತುಗಳು ಪ್ರಮಾದವೆಂದು ಹೇಳಲೇ ಬೇಕಾಗಿದೆ. ಕಾಂಗ್ರೆಸ್ಸು ಈ ಬಗ್ಗೆ ಪುನರ್ವಿಚಾರ ಮಾಡಲು ನೇಮಿಸಿದ ಸಮಿತಿಯ ಸದಸ್ಯರಾಗಿದ್ದು, ಅವರು ಈ ನಿಟ್ಟಿನಲ್ಲಿ ಮತ್ತೆ ಈ ಮಾತನ್ನು ಎತ್ತಿ ಆಡಿದ್ದರಿಂದ ಆ ಸಮಿತಿಯ ಬಗ್ಗೆ ಹುಟ್ಟಿದ್ದ ಅಲ್ಪಸ್ವಲ್ಪ ಆಸೆಯೂ ಹಾರಿಹೋದಂತಾಗಿದೆ. ಇದೊಂದು ಬರಿ ದೀರ್ಘ ಸೂತ್ರದ ಉಪಾಯವೆಂದು ತೆಗಳ್ವವರಿಗೆ ಹೊಸದೊಂದು ಪ್ರಮಾಣವನ್ನು ಮುಖ್ಯ ಮಂತ್ರಿಗಳು ಒದಗಿಸಿಕೊಟ್ಟದ್ದು ಸಮಂಜಸವಾಗಲಿಲ್ಲ.



ಜಯಪುರ ಅಧಿವೇಶನದ ಸಂದರ್ಶನಕ್ಕೆ ಬಂದಿದ್ದ ಅಮೇರಿಕನ್-ನಿಗ್ರೋ ಮುಖಂಡರಾದ ಬೇಯಾರ್ಡ್ ರಸ್ಟಿನರು ಭಾರತ ಸರಕಾರದ ಸುದ್ದಿ ಮತ್ತು ಬಾನುಲಿ ಖಾತೆಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರನ್ನು ಭೆಟ್ಟಿಯಾದರು. ಶ್ರೀ ದಿವಾಕರರ "ಸತ್ಯಾಗ್ರಹ" ಪುಸ್ತಕದ ಬಗ್ಗೆ ಅವರೀರ್ವರೂ ಚರ್ಚಿಸುತ್ತಿರುವಾಗ ತೆಗೆದ ಚಿತ್ರ.

ವಾರದ ಸಿಂಹಾವಲೋಕನ

ಹಿಂದುಸ್ತಾನೀ ಸೇವಾದಲ

ಹಿಂದುಸ್ತಾನೀ ಸೇವಾದಲದ ರಜತ ಮಹೋತ್ಸವವು ಕಳೆದ ತಿಂಗಳ ೨೮ ನೇ ತಾರೀಕು ಹಿಂದುಸ್ತಾನದಲ್ಲೆಲ್ಲ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಮಹಾತ್ಮಾ ಗಾಂಧಿಯವರ ಅಸಹಕಾರದ ಕರೆಗೆ ದೇಶದಲ್ಲಿಯ ಸಾವಿರಗಟ್ಟಲೆ ತರುಣರು ಓಗೊಟ್ಟು ದೇಶಕ್ಕಾಗಿ ಸ್ವಾರ್ಥತ್ಯಾಗಕ್ಕೆ ಸಿದ್ಧರಾದರು. ಆದರೆ ಈ ಕಾರ್ಯಕರ್ತರಲ್ಲಿ ಅನೇಕರಿಗೆ ಸ್ವಯಂಸೇವಕ ಶಿಕ್ಷಣವು ಇಲ್ಲದಿದ್ದುದರಿಂದ, ಶಿಸ್ತು ಸಂಘಟನೆಗಳನ್ನು ಕಾಯ್ದುಕೊಂಡು ಹೋಗುವದು ಕಠಿಣವೆನಿಸಹತ್ತಿತು. ನಾಗಪುರ ಧ್ವಜ ಸತ್ಯಾಗ್ರಹದ ಕಾಲಕ್ಕೆ ಇದರ ಕೊರತೆ ವಿಶೇಷ ಎನಿಸಿತು. ನಾಗಪುರ ಕಾರಾಗೃಹದಲ್ಲಿದ್ದಾಗ ಡಾ. ಹರ್ಡೀಕರರಿಗೆ ಸ್ವಯಂಸೇವಕ ಸಂಘಟನೆಯ ಆವಶ್ಯಕತೆಯೆನಿಸಿತು. ತತ್ಪರಿಣಾಮವಾಗಿಯೆ ರಾಷ್ಟ್ರಸೇವಾದಲವು ಮುಂದಿನ ವರುಷದ ಕಾಕಿನಾಡ ಕಾಂಗ್ರೆಸ್ಸಿನ ಕಾಲಕ್ಕೆ ಅಂದರೆ ಡಿಸೆಂಬರ ೨೮ (೧೯೨೩) ಕ್ಕೆ ಸ್ಥಾಪಿತವಾಯಿತು. ಪಂಡಿತ ಜವಾಹರಲಾಲರು ಇದಕ್ಕೆ ಮೂರ್ತಸ್ವರೂಪಕೊಟ್ಟರು. ಅಂದಿನಿಂದಇಂದಿನ ವರೆಗೆ ಸೇವಾದಲವು ರಾಷ್ಟ್ರಸೇವೆಯನ್ನು ವಿಧವಿಧವಾಗಿ ಮಾಡಿದ್ದುಂಟು. ಸೇವಾದಲ ಸ್ಥಾಪನೆಯ ಮರುವರುಷವೇ ಬೆಳಗಾವಿಯಲ್ಲಿ ಕಾಂಗ್ರೆಸ್ಸು ಕೂಡಿತು. ತರಬೇತಿ ಹೊಂದಿದ ಸ್ವಯಂಸೇವಕರು ಎಷ್ಟು ಅಚ್ಚುಕಟ್ಟುತನದಿಂದ ಕಾರ್ಯವನ್ನು ಮಾಡಬಲ್ಲರೆಂಬುದು ಬೆಳಗಾವಿ ಕಾಂಗ್ರೆಸ್ಸಿನ ಕಾಲಕ್ಕೇ ಕಂಡು ಬರದಿರಲಿಲ್ಲ. ಮುಂದೆ ಉಪ್ಪಿನ ಸತ್ಯಾಗ್ರಹ, ಕಾಯದೇಭಂಗ ಚಳವಳಿಗಳಂಥ ರಾಜಕೀಯ ಚಳವಳಿಗಳಲ್ಲಿ ಮತ್ತು ಬಿಹಾರ ಭೂಕಂಪದಂಥ ಸಾಮಾಜಿಕ ಕಾರ್ಯಗಳಲ್ಲಿ ಎಲ್ಲರ ಮೆಚ್ಚುಗೆಯಾಗುವಂಥ ಸಾಮಾಜಿಕ ಕಾರ್ಯಗಳಲ್ಲಿ ಎಲ್ಲರ ಮೆಚ್ಚುಗೆಯಾಗುವಂತೆ ಸೇವಾದಲದ ಕಾರ್ಯಕರ್ತರು ಭಾರತಾಂಬೆಯ ಸೇವೆ ಮಾಡಿದ್ದುಂಟು. ಸೇವಾದಲವೆಂದರೆ ಅಳರಸರು ಒಳ್ಳೆ ಹೆದರುತಿದ್ದರು. ಡಾ. ಹರ್ಡೀಕರರು ಬಾಗಲಕೋಟೆಯಲ್ಲಿ ವ್ಯಾಯಾಮ ವಿದ್ಯಾಪೀಠವನ್ನು ತೆರೆದು ಅಲ್ಲಲ್ಲಿ ಶಿಕ್ಷಣ ವರ್ಗಗಳನ್ನು ಏರ್ಪಡಿಸಿ ದೇಶದಲ್ಲಿಯ ತರುಣರಿಗೆ ಸೇವಾದಲದ ಶಿಕ್ಷಣ ಕೊಟ್ಟದ್ದುಂಟು. ಇಂದು ಸೇವಾದಲದ ಕಾರ್ಯಕರ್ತರು ಬೇರೆ ಬೇರೆ ಉದ್ಯೋಗಗಳನ್ನು ಮಾಡುತಿದ್ದರೂ ಸೇವಾದಲದಲ್ಲಿ ದೊರೆತ ಶಿಕ್ಷಣದ ಬಗ್ಗೆ ಅವರಿಗೆ ಒಳ್ಳೆ ಹೆಮ್ಮೆ ಗೌರವ ಎನಿಸುವದು. ಈ ರಜತ ಮಹೋತ್ಸವದ ಕಾಲಕ್ಕೆ ಶ್ರೀ ಬುರ್ಲಿ ಬಿಂದುಮಾಧವ ಮತ್ತು ಆರಗುಡರಿಯವರು ಹೊರಡಿಸಿದ ಸೇವಾದಲ ಸಂಚಿಕೆಯಲ್ಲಿ ಸೇವಾದಲ ಕಾರ್ಯಕರ್ತರು ವ್ಯಕ್ತಪಡಿಸಿದ ಅಭಿಪ್ರಾಯದಿಂದ ಈ ಮಾತಿನ ಸತ್ಯತೆ ಗೊತ್ತಾಗದಿರದು. ಹಿಂದೆ ಕಾಂಗ್ರೆಸ್ ವರಿಷ್ಠರು ಸೇವಾದಲದ ಬಗೆಗೆ ಯಾವದೇ ಅಭಿಪ್ರಾಯ ತಾಳಿದ್ದರೂ ಇಂದು ಅದು ಕಾಂಗ್ರೆಸ್ಸಿನ ಅಂಗವಾಗಿರುವುದು ತುಂಬ ಅಭಿನಂದನೀಯವಾದುದು. ಸೇವಾದಲ ಇತೋಪ್ಯಧಿಕವಾಗಿ ರಾಷ್ಟ್ರಸೇವೆಯನ್ನು ಮಾಡಲಿ.

ಹಿಂದೂ ಮಹಾಸಭೆ

ಮಹಾತ್ಮಾ ಗಾಂಧಿಯವರ ಕೊಲೆಯ ನಂತರ ರಾಜಕಾರಣದಿಂದ ನಿವೃತ್ತವಾಗಿದ್ದ ಹಿಂದೂ ಮಹಾಸಭೆಯು ಮತ್ತೆ ರಾಜಕೀಯ ರಂಗದಲ್ಲಿ ಇಳಿಯುವ ಗೊತ್ತುವಳಿಯು ದಿಲ್ಲಿಯಲ್ಲಿ ಕೂಡಿದ ಮಹಾಸಭೆಯ ಅಧಿವೇಶನದಲ್ಲಿ ಸ್ವೀಕೃತವಾದುದು ಅನೇಕರಿಗೆ ಖೇದಾಶ್ಚರ್ಯವನ್ನುಂಟುಮಾಡಿರಲು ಸಾಕು. ಅಖಂಡ ಹಿಂದುಸ್ತಾನ ಸ್ಥಾಪನೆಯೆ ಮಹಾಸಭೆಯ ಮುಖ್ಯ ಉದ್ದೇಶ, ನಾಡಿನ ಸಂಸ್ಕೃತಿ ಮತ್ತು ಪರಂಪರೆಗಳಿಗನುಗುಣವಾದ ನಿಜವಾದ ಪ್ರಜಾಪ್ರಭುತ್ವವನ್ನು ಹಿಂದುಸ್ತಾನದಲ್ಲಿ ಸ್ಥಾಪಿಸುವದು ತನ್ನ ಗುರಿಯಾಗಿದೆ ಎಂಬಾಶಯದ ಗೊತ್ತುವಳಿ ಈ ಸಭೆಯಲ್ಲಿ ಸ್ವೀಕೃತವಾಗಿದೆ. ಹಿಂದುಸ್ತಾನ ಸರಕಾರವೀಗ ಜಾತ್ಯತೀತ ರಾಷ್ಟ್ರವನ್ನು ಕಟ್ಟಲಣಿಯಾಗಿರುವಾಗ ಹಿಂದೂ ಮಹಾಸಭೆಯು ಇಂಥ ಜಾತೀಯ ಧೋರಣವನ್ನಿಟ್ಟುಕೊಂಡು ಕಾರ್ಯಮಾಡಹತ್ತುವದು ಒಂದು ಬಗೆಯಿಂದ ಸರಕಾರಕ್ಕೆ ಆಹ್ವಾನ ಕೊಟ್ಟಂತೆಯೇ ಎಂದು ಹೇಳಿದರೆ ತಪ್ಪಾಗದು. ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಬೆಂಗಳೂರಿನ ತಮ್ಮ ಇತ್ತೀಚಿನ ಭಾಷಣದಲ್ಲಿ ಹಿಂದೂ ಮಹಾಸಭೆ ಮತ್ತು ಆರ್ ಎಸ್ ಎಸ್ ಸಂಸ್ಥೆಗಳ ಜಾತೀಯ ಚಟುವಟಿಕೆ ಭಾವನೆಗಳ ಉಲ್ಲೇಖಿಸಿ ಯಾವದೇ ಸ್ವರೂಪದಲ್ಲಿಯೂ ಜಾತೀಯತೆಯನ್ನು ನಿರ್ಮೂಲಗೊಳಿಸಲು ಸರಕಾರವು ನಿರ್ಧರಿಸಿದೆ ಎಂದು ಘೋಷಿಸಿದರು. ಸರಕಾರದ ಧೋರಣವಿಂತು ನಿಃಸಂದಿಗ್ಧವಾಗಿರುವಾಗ ಹಿಂದೂ ಮಹಾಸಭೆಯು ಜಾತೀಯ ಸಂಘಟನೆ ಮಾಡಲು ಅದೆಂತು ಧಾರ್ಷ್ಟ್ಯಮಾಡುವದೋ ತಿಳಿಯದು? ಹಿಂದೂಮಹಾಸಭೆಯು ಈ ಧೋರಣವನ್ನು ಸೂಕ್ಷ್ಮರೀತಿಯಿಂದ ವಿಮರ್ಶಿಸಿದ್ದಾದರೆ ಆರ್ ಎಸ್ ಎಸ್ ದವರಿಗೆ ಅವರ ಬೆಂಬಲವಿದೆಯೋ ಎಂಬ ಸಂದೇಹವುಂಟಾಗುವುದು. ಹಾಗ್ಯಂಥ ಸಂಸ್ಥೆಗಳನ್ನು ಹತ್ತಿಕ್ಕಬೇಕೆಂಬ ಸರಕಾರದ ಪ್ರಯತ್ನದಲ್ಲಿ ರಾಷ್ಟ್ರೀಯ ವೃತ್ತಿಯ ಭಾರತೀಯರ ಬೆಂಬಲ ಸಿಕ್ಕೇಸಿಕ್ಕುವುದೆಂಬುದನ್ನು ಬೇರೆ ಹೇಳಬೇಕಿಲ್ಲ.

ಕಾಶ್ಮೀರ ಯುದ್ಧ ನಿಲ್ಲುವದು?

ಕಾಶ್ಮೀರ ರಂಗದಲ್ಲಿ ದಾಳಿಗಾರರ ಹಾವಳಿಯಿಂದು ಪ್ರಾರಂಭವಾದ ಯುದ್ಧವು ಬೇಗ ನಿಲ್ಲುವ ಸಂಭವವಿದೆಯೆಂಬುದು ಕೇಳಿ ಭಾರತೀಯರೆಲ್ಲರಿಗೆ ಸಂತೋಷವಾಗಿದೆ. ಈ ಯುದ್ಧದಿಂದ ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಕ್ಷೇಮ ಬೆಳೆದಾದು ಸರ್ವಶ್ರುತ. ಆದರೆ ಕಾಶ್ಮೀರ ಸಮಿತಿಯ ಪ್ರಯತ್ನದಿಂದ ಎರಡೂ ಸರಕಾರಗಳಲ್ಲಿ ಒಡಂಬಡಿಕೆಯಾಗಿದೆಯಂತೆ. ಭದ್ರತಾ ಮಂಡಳದ ಕಾಶ್ಮೀರ ಸಮಿತಿಯ ಡಾ ಲಿಜಾನರು ಕರಾಚಿಯಿಂದ ತೆರಳುವ ಮುನ್ನ ಕೊಟ್ಟ ಹೇಳಿಕೆಯಲ್ಲಿ ಕಾಶ್ಮೀರದಲ್ಲಿ ಒಡಂಬಡಿಕೆಯಾಗುವದು ಸಾಧ್ಯವಿದಯೆಂದು ಅಭಿಪ್ರಾಯಪಟ್ಟಿರುವರು. ಸಾರ್ವತ್ರಿಕ ಮತಗಣನೆಯನ್ನು ನಡೆಸಲು ಉಭಯ ಪಕ್ಷಗಳಿಗೆ ಸಮ್ಮತವಾಗುವ ಯೋಜನೆಯೊಂದು ಸಿದ್ಧವಾಗುತಿದೆಯೆಂದೂ ತಿಳಿಯುತ್ತದೆ. ಭದ್ರತಾ ಮಂಡಳದ ಸಲಹೆಯಿಂದ ಕಾಶ್ಮೀರ ಸರಕಾರವು ಸಾರ್ವತ್ರಿಕ ಮತಗಣನೆಯ ಆಡಳಿತಾಧಿಕಾರಿಯನ್ನು ನೇಮಿಸಿದಕೂಡಲೆ ಪಾಕಿಸ್ತಾನ ಸೈನಿಕರು ಕಾಶ್ಮೀರದಿಂದ ಹಿಂದೆ ಸರಿಯುವರು. ಆಡಳಿತೆಗಾರರಿಗೆ ಸಹಾಯ ಮಾಡಲು ಹಿಂದೀ ಸೈನ್ಯ ಮಾತ್ರ ಉಳಿಯುವದು. ಈಗ ಅಜಾದ ಕಾಶ್ಮೀರ ಸರಕಾರದ ಅಧೀನದಲ್ಲಿರುವ ಪ್ರದೇಶದಲ್ಲಿ ಸ್ಥಳೀಕ ಪ್ರತಿನಿಧಿಗಳ ಸಹಾಯದಿಂದ ಈ ಆಡಳಿತಗಾರನು ಆಡಳಿತವನ್ನು ನಡೆಸುವನು ಎಂದು ಮುಂತಾಗಿ ತಿಳಿಯುತ್ತದೆ. ಇದೆಲ್ಲ ಬೇಗನೆ ಕಾರ್ಯರೂಪದಲ್ಲಿ ಬಂದು ದಿನವೂ ಸೂರೆಯಾಗುತ್ತಿರುವ ಲಕ್ಷಗಟ್ಲೆ ರೂಪಾಯಿ ಮತ್ತು ಅನೇಕ ಜನರ ಪ್ರಾಣಹಾನಿ ನಿಲ್ಲುವದೆಂದು ನಂಬುತ್ತೇವೆ.

ಐತಿಹಾಸಿಕ ಕಾಗದಪತ್ರಗಳು

ಬ್ರಿಟಿಶರು ಹಿಂದುಸ್ತಾನವನ್ನು ಗೆಲ್ಲುತ್ತ ನಡೆದಂತೆ ಇಲ್ಲಿಯ ಅನೇಕ ಹಳೆಯ ಕಾಗದ ಪತ್ರಗಳನ್ನು ಇಂಗ್ಲಂಡಿಗೆ ಸಾಗಿಸಿದ್ದುಂಟು. ಹಿಂದುಸ್ತಾನದ ಹಿಂದಿನ ಇತಿಹಾಸವನ್ನು ತಿಳಿದುಕೊಳ್ಳಲಿಕ್ಕೆ ಇವೆಲ್ಲ ಸಹಾಯಕವೆಂಬುದನ್ನು ಬೇರೆ ಹೇಳಬೇಕಿಲ್ಲ. ಇದೀಗ ಹಿಂದುಸ್ತಾನವು ಸ್ವತಂತ್ರವಾದ್ದರಿಂದ ಇಂಗ್ಲೀಶ್ ಸರಕಾರವು ಆ ಹಳೆಯ ಕಾಗದ ಪತ್ರಗಳನ್ನು ಮರಳಿ ಕೊಡುವದು ಅವಶ್ಯವಾಗಿದೆ, ಕ್ರಮಪ್ರಾಪ್ತವಾಗಿದೆ. ದಿಲ್ಲಿಯಲ್ಲಿ ಕಳೆದವಾರ ಶಿಕ್ಷಣ ಮಂತ್ರಿಗಳಾದ ಮೌಲಾನಾ ಅಜಾದರ ಅಧ್ಯಕ್ಷತೆಯಲ್ಲಿ ಸೇರಿದ್ದ ಭಾರತದ ಐತಿಹಾಸಿಕ ಕಾಗದಪತ್ರಗಳ ಪರಿಷತ್ತಿನ ರಜತ ಮಹೋತ್ಸವದಲ್ಲಿ ಈ ಸಂಬಂಧದ ಒಂದು ಗೊತ್ತುವಳಿಯು ಸ್ವೀಕೃತವಾಗಿದೆ. ಹಿಂದೀ ಸೈನ್ಯದ ಹಿಂದಿನ ಇತಿಹಾಸಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ಬ್ರಿಟಿಶ ಸರಕಾರವು ಹೊರಳಿಕೊಡುವಂತೆ ಹಿಂದುಸ್ತಾನ ಸರಕಾರವು ಪ್ರಯತ್ನಮಾಡಬೇಕೆಂದು ಈ ಪರಿಷತ್ತಿನಲ್ಲಿ ಬಿನ್ನವಿಸಿಕೊಳ್ಳಲಾಗಿದೆ. ಭಾರತ ಮತ್ತು ವಿದೇಶಗಳಲ್ಲಿರುವ ಐತಿಹಾಸಿಕ ಚಿತ್ರ ಮತ್ತು ಚಲಚಿತ್ರಗಳನ್ನು ಅನುಕ್ರಮಾಂಕದಲ್ಲಿ ಜೋಡಿಸಲು ಭಾರತ ಸರಕಾರ ವ್ಯವಸ್ಥೆ ಮಾಡಬೇಕೆಂದೂ ಬಿನ್ನವಿಸಿಕೊಳ್ಳಲಾಗಿದೆ. ಹಿಂದುಸ್ತಾನ ಸರಕಾರದವರು ಇವೆರಡು ಮಹತ್ವದ ವಿಷಯಗಳತ್ತ ತೀವ್ರ ಗಮನಕೊಡಬೇಕೆಂದು ಬಿನ್ನವಿಸುತ್ತೇವೆ. ಬ್ರಿಟಿಶ ಸರಕಾರದವರೂ ಈ ಸಂಬಂಧದಲ್ಲಿ ಆವಶ್ಯಕ ಸಹಾಯವನ್ನು ಸಲ್ಲಿಸುವರೆಂದು ನಂಬುತ್ತೇವೆ.

ವ್ಯಾಪಾರಪ್ರಪಂಚ

ಮುಂಬಯಿ ಪೇಟೆ

ತಾ. [illegible]

ಚಿನ್ನ--ಬೆಳ್ಳಿ

ಶನಿವಾರ ಪೇಟೆಯಲ್ಲಿ ಮುಂದೆ ವ್ಯಾಪಾರಕ್ಕೆ ಸಂಪೂರ್ಣ ಪ್ರತಿಬಂಧ ಬಿದ್ದಿರುವದರಿಂದ ಇಲ್ಲದ ಉಪದ್ವ್ಯಾಪಕ್ಕೆಡೆಯಿಲ್ಲದಾಗಿದೆ. ತಯಾರಿ ಚಿನ್ನದಲ್ಲಿ ಕೆಲ ಆಣೆಗಳ ಏರಿಕೆಯಾಗಿದ್ದರೆ ಬೆಳ್ಳಿಯಲ್ಲಿ ಒಂದು ರೂಪಾಯಿಯವರೆಗೆ ಇಳಿಕೆಯಾಗಿದೆ. ಇಂದಿನ ಕೊನೆಯ ದರಗಳು ಇಂತಿದ್ದವು.

ತಯಾರಿ ಚಿನ್ನ	೧೧೩-೧೩-೦
ತಯಾರಿ ಬೆಳ್ಳಿ	೧೭೭-೪-೦

ಅರಳೆ

ಫೆಬ್ರುವರಿ	೬೨೦-೦-೦
ಮೇ	೬೧೪-೪-೦
ಜುಲೈ	೬೧೫-೪-೦
ಸಪ್ಟಂಬರ	೬೧೫-೮-೦

ಶಿವಮೊಗ್ಗೆ

ಜೇಶಾವರ ಅಡಿಕೆ ನಂ. ೧ ಮಣ ೧ಕ್ಕೆ	೩೨-೩೩
,, ,, ೨	೩೦-೩೧
,, ,, ೩	೨೮-೨೯
ಕೊರಸಾಲು	೨೨-೩೦
ರಾಜಾಅಲವು	೨೪-೩೦
ಸ್ಪ್ರೇವಂತಿ	೧೭.೧೮
ಸಾದಾಬೆಟ್ಟೆ	೧೩-೧೫

ಹೊರಗಿಂದ ಕಳ್ಳ ದಾರಿಯಿಂದ ಅಡಿಕೆ ದ. ಭಾರತದ ಬಂದರಗಳಲ್ಲಿ ಬರುತಿವೆಯೆಂಬ ಸುದ್ದಿಯಿಂದ ಬೆಲೆಗಳು ಕೆಳಮುಖವಾಗಿವೆ.

ಹುಬ್ಬಳ್ಳಿ :

ತಾ. ೩೦

ಜ. ಹತ್ತಿ ನಗಕ್ಕೆ		೪೭೫-೪೯೦
ಮುಂ. ಹತ್ತಿ		೪೪೦-೪೫೦
ಜ. ಅರಳೆ ,,		೨೮೫-೩೦೫
ಹತ್ತಿಕಾಳು	ರೂ. ಗೆ	೬ ಪೌಂಡ
ಕುಸುಬಿ (ಚೀಲಕ್ಕೆ)		೩೪-೩೬॥
ಅಗಸಿ	,,	೩೭-೮೪-೦-೪೦ ೧೫-೦
ಔಡಲ	,,	೩೯-೪೧
ಜ. ಹೆಸರು	,,	೫೧-೪೧
ಕರಿ ಎಳ್ಳು	,,	೫೩-೫೬
ಬಿಳಿ ಎಳ್ಳು	,,	೭೩-೭೮॥
ಕಡಲೆ	,,	೬೦-೬೬
ಜ. ತೊಗರಿ	,,	೩೩-೩೬॥
ಹುರಳಿ	,,	೯೨-೧೦೦
ಕೆಂ. ಅಲಸಂದಿ	,,	೫೩-೫೬
ಬಿ. ಅಲಸಂದಿ	,,	೬೦-೬೪
ಶೇಂಗಾ (ಹೇರು)		೪೪-೪೬

ತಿದ್ದುಪಡಿ

ಕಳೆದ ವಾರದ ಹರಿಜನದಲ್ಲಿ (ಕರ್ಮವೀರ ೨೭-೧೨-೪೮) ರಾಷ್ಟ್ರಭಾಷೆಯ ಸಂಬಂಧದಲ್ಲಿ ಡಾ. ರಾಜೇಂದ್ರ ಪ್ರಸಾದರು ಬರೆದ ಲೇಖದಲ್ಲಿ ಪ್ರಮಾದ ಮೂಲಕವಾಗಿ ಓದುಗರಿಗೆ ತಪ್ಪು ತಿಳುವಳಿಕೆಯಾಗುವ ಸಂಭವವಿದೆ. ಶ್ರೀ ಮಶ್ರುವಾಲಾರ ಪ್ರಶ್ನೆ ಮೂರನೆ ಪ್ಯಾರಾದಲ್ಲಿ "ಹೈಕೋರ್ಟುಗಳ" ಎಂಬಲ್ಲಿಂದ "ಗ್ರಹಿಸಬಹುದೊ?" ಎಂಬಲ್ಲಿಯ ವರೆಗೆ ಮಾತ್ರ ಇದೆಯೆಂದೂ ಉಳಿದುದೆಲ್ಲ ಡಾ. ರಾಜೇಂದ್ರರ ಉತ್ತರವೆಂದೂ ತಿಳುವಳಿಕೆಯಾಗಬಹುದು. ಆದರೆ ವಸ್ತುತಸ್ತು, ಆ ಮುಂದಿನ ಅನೇಕ ಪ್ಯಾರಾಗಳೂ, ಮಶ್ರುವಾಲಾರ ಪ್ರಶ್ನೆಯ ಭಾಗವೇ ಆಗಿದ್ದು ಅವರ ಪ್ರಶ್ನೆ "ಹೇಗೇ ಇದ್ದರೂ" ಎಂದು ಪ್ರಾರಂಭವಾಗುವ ಪ್ಯಾರಾದ ವರೆಗೂ ವ್ಯಾಪಿಸಿದೆ. ಮುಂದೆ "ಮೊದಲನೇ ಲೇಖದಲ್ಲಿ" ಎಂದು ಪ್ರಾರಂಭವಾಗುವ ಪ್ಯಾರಾದಿಂದ ರಾಜೇಂದ್ರರ ಉತ್ತರ ಪ್ರಾರಂಭವಾಗುತ್ತದೆ, ಎಂದು "ಹರಿಜನ" ಸಂಪಾದಕರು ತಿಳಿಸುತ್ತಾರೆ.

ಮಾನ್ಯ ದಿವಾಕರರಿಗೆ ಅಪೂರ್ವ ಸ್ವಾಗತ

ಹುಬ್ಬಳ್ಳಿ ರೇಲ್ವೆ ನಿಲ್ದಾಣದಲ್ಲಿ

ಪೂಮಾಲೆಗಳ ಸುರಿಮಳೆ

ತಾ. ೩೧ — ಭಾರತ ಸರಕಾರದ ಸುದ್ದಿ ಹಾಗೂ ಆಕಾಶವಾಣಿ ಖಾತೆಯ ಮಂತ್ರಿಗಳಾದ ಮಾನ್ಯ ಶ್ರೀ. ದಿವಾಕರ ರಂಗರಾಯರಿಗೆ ಹುಬ್ಬಳ್ಳಿಯ ನಾಗರಿಕರು ಮಧ್ಯಾಹ್ನ ರೇಲ್ವೆ ನಿಲ್ದಾಣದಲ್ಲಿ ಅಭೂತಪೂರ್ವ ಸ್ವಾಗತವನ್ನಿತ್ತರು. ಸುಮಾರು ೨೦೦ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಪ್ರತಿಷ್ಠಿತ ವ್ಯಕ್ತಿಗಳು ಮಾನ್ಯ ಮಂತ್ರಿಯವರಿಗೆ ಪೂಮಾಲೆಗಳನ್ನರ್ಪಿಸಿ ಸತ್ಕರಿಸಿದರು.

ಹುಬ್ಬಳ್ಳಿ ನಗರದ ಸಂಘ, ಸಂಸ್ಥೆಗಳ ಪ್ರತಿನಿಧಿಗಳು ಮತ್ತು ಪ್ರತಿಷ್ಠಿತ ನಾಗರಿಕರಲ್ಲದೆ, ಧಾರವಾಡ, ಬೆಳಗಾವ, ಕುಂದಗೋಳ, ಗದಗ, ನವಲಗುಂದ, ಗಜೇಂದ್ರಗಡ, ಶಿರಹಟ್ಟಿ, ಮುಳಗುಂದದಿಂದ ಅನೇಕರು ಮಾನ್ಯ ಮಂತ್ರಿಗಳ ಸ್ವಾಗತಕ್ಕೆ ಆಗಮಿಸಿದ್ದರು. ಹುಬ್ಬಳ್ಳಿಯ ವಿಶಾಲವಾದ ರೇಲ್ವೆ ನಿಲ್ದಾಣವು ಸ್ವಾಗತೋತ್ಸುಕ ಸ್ತ್ರೀಪುರುಷರಿಂದ ಕಿಕ್ಕಿರಿದು ತುಂಬಿದ್ದಿತು. ಧಾರವಾಡ ಜಿಲ್ಹಾ ಕಲೆಕ್ಟರ ಶ್ರೀ. ಬ. ಬೆಂಜಾಮಿನ್, ಡಿ. ಎಸ್. ಪಿ. ಶ್ರೀ ವಿ. ಬಿ. ಶಾನಭಾಗ, ಡಿ. ಟಿ. ಎಸ್. ಟಿ. ಶ್ರೀ ಸೇಟಣಾ ಮೊದಲಾದ ಅಧಿಕಾರಿಗಳೂ ಬಂದಿದ್ದರು.

ಶ್ರೀಮಾನ್ ದಿವಾಕರ ರಂಗರಾಯರ ಸ್ವಾಗತಕ್ಕೆ ಇಂದು ಹುಬ್ಬಳ್ಳಿ ಊರಿಗೆ ಊರೇ ಎದ್ದು ಬಂದಿರುವದೋ ಎನ್ನುವಷ್ಟು ನಿಲ್ದಾಣದಲ್ಲಿಯೂ ಹೊರಗೂ ಜನರು ಕೂಡಿದ್ದರು. ನಿಲ್ದಾಣವನ್ನು ಗರಿ, ಕರಿ, ಬಾಳೆ ಕಂಬ, ಮಾವಿನ ತಳಿರು, ಹೂವಿನ ಕುಂಡಗಳಿಂದ ಸೊಗಸಾಗಿ ಅಲಂಕರಿಸಿದ್ದರಿಂದ ಅದಕ್ಕೆ ಹಬ್ಬದ ಶೋಭೆಯುಂಟಾಗಿತ್ತು. ವ್ಯವಸ್ಥೆಗೆ ಪೋಲೀಸರಲ್ಲದೆ, ಕಾಂಗ್ರೆಸ ಸೇವಾದಲದ ಸ್ವಯಂಸೇವಕ ಸೇವಿಕೆಯರೂ ಬಂದಿದ್ದರು.

ಸ್ವಾಗತಕ್ಕೆ ಬರುವ ಜನರು ೧೧-೩೦ ಗಂಟೆಯಿಂದಲೇ ಬರಲು ಪ್ರಾರಂಭಿಸಿದರು. ಮುಂದೆ ಒಂದು ಗಂಟೆಯೊಳಗಾಗಿ ನಿಲ್ದಾಣವು ಕಾಲಿಡಲಿಕ್ಕೆ ಸ್ಥಳವಿಲ್ಲದಷ್ಟು ತುಂಬಿ ಹೋಯಿತು. ಮಂತ್ರಿವರ್ಯರಿಗೆ ತೊಂದರೆಯಾಗದಂತೆ ಪೂಮಾಲೆಗಳನ್ನರ್ಪಿಸುವದಕ್ಕೆ ಬಂದವರನ್ನೆಲ್ಲ ಸಾಲಾಗಿ ನಿಲ್ಲಿಸಲಾಗಿತ್ತು.

ಶ್ರೀಮಾನ್ ದಿವಾಕರರನ್ನು ಕರೆದುಕೊಂಡು ಬಂದ ಬೆಂಗಳೂರ ಮೇಲ ಗಾಡಿಯು ೧-೧೫ ಗಂಟೆಗೆ ಸರಿಯಾಗಿ ನಿಲ್ದಾಣದಲ್ಲಿ ಪ್ರವೇಶಿಸಿದ ಕೂಡಲೇ, ಜಯಘೋಷದಿಂದ ಅವರನ್ನು ಸ್ವಾಗತಿಸಲಾಯಿತು. ಮಂತ್ರಿವರ್ಯರು ಮುಗುಳುನಗೆಯಿಂದ ಹರ್ಷವನ್ನು ಸೂಚಿಸುತ್ತ ಗಾಡಿಯಿಂದ ಕೆಳಗಿಳಿದರು. ಧಾರವಾಡದ ಕಲೆಕ್ಟರ ಶ್ರೀ. ಬ. ಬೆಂಜಾಮಿನ್ನರು ಮೊದಲು ಮಂತ್ರಿವರ್ಯರಿಗೆ ನಮಸ್ಕರಿಸಿದರು. ಆ ನಂತರ ಹುಬ್ಬಳ್ಳಿಯ ನಗರಾಧ್ಯಕ್ಷ ರಾ. ಸಾ. ಬಿ. ಪಿ. ತಂಬದರು, ಆದರದಿಂದ ಪೂಮಾಲೆಯನ್ನು ಹಾಕಿ, "ನಾಗರಿಕರ ಪರವಾಗಿ ನಮ್ಮ ನಗರಕ್ಕೆ ತಮ್ಮನ್ನು ಸ್ವಾಗತಿಸುತ್ತೇನೆ" ಎಂದು ಹೇಳಿದರು. ಅನಂತರ ಕೆ. ಪಿ. ಸಿ. ಸಿ, ಕರ್ನಾಟಕ ವರ್ತಕ ಸಂಘದ ಅಧ್ಯಕ್ಷ ಶ್ರೀ ವೈ. ಮಹಾಬಳೇಶ್ವರಪ್ಪನವರು ಮೊದಲಾದವರು ಪೂಮಾಲೆಗಳನ್ನು ಹಾಕಿದರು. ಇಷ್ಟೊತ್ತಿಗೆ ದರ್ಶನಾಪೇಕ್ಷಿಗಳ ಕುತೂಹಲ ಹೆಚ್ಚಾಗಿನುಗ್ಗಿ ಬರಹತ್ತಿದರು. ಆದರೂ ಮಂತ್ರಿವರ್ಯರು ಅದರಲ್ಲಿಯೇ ಬಂದವರೆಲ್ಲರಿಂದ ಪೂಮಾಲೆಗಳನ್ನು ಸ್ವೀಕರಿಸಿ, ಕೊನೆಗೆ ನಿಲ್ದಾಣದ ಹೊರಗೆ ಮೋಟರ ಮೇಲೆ ನಿಂತು ಸಕಲರಿಗೂ ದರ್ಶನವಿತ್ತು, ಕೃತಜ್ಞತೆ ಸೂಚಿಸಿ, ಡಾಕ್ ಬಂಗಲೆಗೆ ತೆರಳಿದರು.

ಕರ್ನಾಟಕ ಚರಖಾಸಂಘ, ಕರ್ನಾಟಕ ಏಕೀಕರಣ ಮಹಾಸಮಿತಿ, ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ, ಕರ್ನಾಟಕ ಲಿಂಗಾಯತ ಎಜ್ಯುಕೇಶನ್ ಸೊಸಾಯಿಟಿ, ಕರ್ನಾಟಕ ರಾಷ್ಟ್ರೀಯ ಗಿರಣಿ ಮಜದೂರ ಸಂಘ, ದ. ಭಾ. ಹಿಂದೀ ಪ್ರಚಾರ ಸಭೆ, ಕರ್ನಾಟಕ ಶಾಖೆ, ಅಗ್ರಿಕಲ್ಚರಲ್ ಪ್ರೊಡ್ಯೂಸ ಮಾರ್ಕೆಟ ಕಮಿಟಿ ಹುಬ್ಬಳ್ಳಿ, ಹುಬ್ಬಳ್ಳಿ ಮೆಡಿಕಲ್ ಅಸೋಸಿಯೇಶನ್, ಕೋಆಪರೇಟಿವ್ ಆಸ್ಪತ್ರೆ, ಎಂ. ಎಸ್. ಎಂ. ರೇಲ್ವೆ ಯೂನಿಯನ್ ಶಿರಹಟ್ಟಿ ಮುನಸಿಪಾಲಟಿ, ಗದಗ ನಾಗರಿಕ ಹಿತಚಿಂತಕ ಸಂಘ, ಅಂಜುಮನ್ ಇ. ಇಸ್ಲಾಮ ಹುಬ್ಬಳ್ಳಿ, ಪಾರ್ಸಿ ಅಂಜುಮನ್ ಹುಬ್ಬಳ್ಳಿ, ಭಾರತಮಿಲ್, ಗಜೇಂದ್ರಗಡ ಜಹಾಗೀರದಾರರು, ಡೆಕ್ಕನ ಫರ್ಟಿಲಾಯಜರ್ಸ [illegible] ಶ್ರೀ [illegible] ನಾರಾಯಣರಾಯರು, ಗದಗ ತಾಲೂಕ ಕಾಂಗ್ರೆಸ ಕಮಿಟಿ, ಹುಬ್ಬಳ್ಳಿ ಭಗಿನಿ ಮಂಡಳ, ಹುಬ್ಬಳ್ಳಿ ಮಹಿಳೆಯರ ಸಹಕಾರಿ ಸಂಘ, ಡಿ. ಡಿ. ಎಸ್. ಡಿ. ಮೋಟರ್ಸ್, ಕ್ಯಾನರಾ ಬ್ಯಾಂಕ, ಕರ್ನಾಟಕ ಬ್ಯಾಂಕ ಮೊದಲಾದ ಸಂಘ ಸಂಸ್ಥೆಗಳು ಮತ್ತು ಮಹನೀಯರು ಪೂಮಾಲೆ ಅರ್ಪಿಸಿದವರಲ್ಲಿ ಪ್ರಮುಖರಿರುವರು.

ಮಾರ್ಗದಲ್ಲಿಯೂ ಸಂಭ್ರಮದ ಸ್ವಾಗತ

ಹಿಂದುಸ್ಥಾನ ಸರಕಾರದಲ್ಲಿ ಕರ್ನಾಟಕದ ಪ್ರಥಮ ಮಂತ್ರಿಗಳಾದ ಶ್ರೀ ದಿವಾಕರರು ಕನ್ನಡ ನಾಡಿಗೆ ಪ್ರಥಮ ಸಂದರ್ಶನವೀಯುತ್ತಿದ್ದದರಿಂದ ಮಾರ್ಗದ ಎಲ್ಲ ನಿಲ್ದಾಣಗಳ ಊರವರು ಸಹ ಉತ್ಸಾಹದಿಂದ ಬಂದು, ಸಂಭ್ರಮದ ಸ್ವಾಗತವನ್ನಿತ್ತರು. ಈ ಸ್ವಾಗತವು ಇಂದು ಬೆಳಗಾಗುತ್ತಲೇ, ಅಂದರೆ ದಾವಣಗೇರಿ ನಿಲ್ದಾಣದಿಂದ ಆರಂಭವಾಯಿತು. ದಾವಣಗೇರಿ ಮುನಸಿಪಲ್ ಅಧ್ಯಕ್ಷ ಶ್ರೀ ಕೆ. ಟಿ. ಜಂಬಣ್ಣ, ಶ್ರೀ ಚಿಗಟೇರಿ ಮುರಿಗೆಪ್ಪನವರು ಮೊದಲಾದವರು ಬಂದು ಮಂತ್ರಿವರ್ಯರಿಗೆ ಪೂಮಾಲೆಗಳನ್ನರ್ಪಿಸಿದರು. ಆಮೇಲೆ ಹರಿಹರದಲ್ಲಿಯೂ ಸ್ವಾಗತವಾಯಿತು. ಚಳಗೇರಿಯಲ್ಲಿ ಚಿಕ್ಕ ಸಭೆಯೇ ಜರುಗಿತು. ಅಲ್ಲಿ ಶಿಬಿರಕ್ಕೆ ಬಂದಿದ್ದ ರಾಣೆಬೆನ್ನೂರ ತಾ. ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರು ಹಾಗೂ ಚಳಗೇರಿಯ ನಾಗರಿಕರು ನಿಲ್ದಾಣಕ್ಕೆ ಬಂದು ಸನ್ಮಾನ ಮಾಡಿದರು. ರಾಣೆಬೆನ್ನೂರಲ್ಲಿ ನಗರಾಧ್ಯಕ್ಷ ಶ್ರೀ ಅಣಗಾರರು, ಕರ್ನಾಟಕ ಸಂಘ ಹಾಗೂ ಕಾಂಗ್ರೆಸ ಸೇವಾದಲ ಪ್ರತಿನಿಧಿಗಳು ಪೂಮಾಲೆಗಳನ್ನರ್ಪಿಸಿದರು ಬ್ಯಾಡಗಿಯಲ್ಲಿ ಶ್ರೀಗಳಾದ ಸಿದ್ಧಪ್ಪನವರು ಹುಂಬಿ, ಮುರಿಗೆಪ್ಪ ಶೆಟ್ಟರು. ಚೌಧರಿ ಬಂಧುಗಳು, ಬಿ. ಎಸ್. ಪಾಟೀಲ, ಜಿ. ಎಲ್. ಶೆಟ್ಟರು, ಮೊದಲಾದವರು ಮಂತ್ರಿಗಳನ್ನು ಸತ್ಕರಿಸಿ, ತಮ್ಮ ಕೆಲವು ಬೇಡಿಕೆಗಳನ್ನು ನಿವೇದಿಸಿಕೊಂಡರು ಹಾವೇರಿಯಲ್ಲಿ ಶ್ರೀಮಾನ್ ಹೊಸಮನಿ ಸಿದ್ಧಪ್ಪನವರ ನೇತೃತ್ವದಲ್ಲಿ ನಾಗರಿಕರ ತಂಡವೇ ನಿಲ್ದಾಣಕ್ಕೆ ಬಂದಿತ್ತು. ಶ್ರೀ ಎಚ್. ಸಿ. ಕುಲಕರ್ಣಿ, ವಕೀಲ, ಅಗಡಿ ದೇಸಾಯರು ಮೊದಲಾದವರೆಲ್ಲ ಪೂಮಾಲೆಗಳನ್ನರ್ಪಿಸಿದ ನಂತರ, ಶ್ರೀ. ಸಿದ್ಧಪ್ಪನವರು ತಮ್ಮ ಸಹಜವಾದ ಹಾಸ್ಯಪೂರಿತ ಶೈಲಿಯಲ್ಲಿ ಚಿಕ್ಕ ಭಾಷಣ ಮಾಡಿ ಶ್ರೀ ದಿವಾಕರರನ್ನು ಅಭಿನಂದಿಸಿದರು. ಕರಜಗಿಯಲ್ಲಿ ಗ್ರೂಪ ಕಾಂಗ್ರೆಸ ಕಮಿಟಿ, ಗ್ರಾಮಪಂಚಾಯತಿ, ಚರಖಾ ಸಂಘ, ರೈತ ಸಂಘ, ಸೇವಾ ಸಂಘ, ಶಿಕ್ಷಕರ ಸಹಕಾರಿ ಸಂಘ ಮೊದಲಾದ ಸಂಘಗಳ ಪ್ರತಿನಿಧಿಗಳು ಶ್ರೀ ವಿರಕ್ತಮಠದ ಸ್ವಾಮಿಗಳು ಮಂತ್ರಿವರ್ಯರನ್ನು ಪೂಮಾಲೆಗಳಿಂದ ಸತ್ಕರಿಸಿದರು. ಅಲ್ಲದೆ ನಾಗರಿಕರ ಪರವಾಗಿ ಮನವಿಯೊಂದನ್ನರ್ಪಿಸಲಾಯಿತು ಸವಣೂರಲ್ಲಿ ಪ್ರಜಾಹಿತ ಸಂಘ, ರೈತ ಸಂಘದವರು ಸತ್ಕರಿಸಿದ್ದಲ್ಲದೆ, ಶ್ರೀ ಸತ್ಯಬೋಧ ತೀರ್ಥ ಸ್ವಾಮಿಗಳವರ ಪ್ರಸಾದವನ್ನು ಮಂತ್ರಿಗಳಿಗೆ ಕೊಡಲಾಯಿತು. ಗುಡಗೇರಿಯಲ್ಲಿ ಅಲ್ಲಿಯ ಮುನಸಿಪಲ್ ಅಧ್ಯಕ್ಷರು, ಲಕ್ಷ್ಮೇಶ್ವರದ ಶ್ರೀ ಶೆಟ್ಟಿಯವರು ಮೊದಲಾದವರು ಮಾಲೆ ಹಾಕಿ ಮಂತ್ರಿಗಳನ್ನು ಸನ್ಮಾನಿಸಿದರು. ಸಂಶಿಯಲ್ಲಿಯೂ ಸತ್ಕಾರ ಜರುಗಿತು. ಕುಂದಗೋಳದಲ್ಲಿ ಶ್ರೀಗಳಾದ ನಾನಾ ಸಾಹೇಬ ನಾಡಗೀರ, ಬಾಪಾಸಾಹೇಬ ದೇಶಪಾಂಡೆ, ಜೋಶಿ ಮೊದಲಾದವರು ಬಂದು ಮಾಲೆಹಾಕಿ ಶ್ರೀ ದಿವಾಕರರಿಗೆ ಮಂತ್ರಿಪದ ದೊರೆತದ್ದಕ್ಕೆ ತಮಗಾದ ಸಂತೋಷವನ್ನು ವ್ಯಕ್ತ ಮಾಡಿದರು.

[illegible]

[illegible]

[illegible]

[illegible] ದರ ಅಧಿಕಾರವನ್ನು [illegible] ಆಲಿಸ್ಸಿ [illegible]

ಈ ಭೆಟ್ಟಿಗೆ ಪ್ರತಿಯಾಗಿ [illegible] ಭವನಕ್ಕೆ [illegible] ಮಂತ್ರಿಗಳಿಗೆ [illegible] ರಾಜರೂ ಅಲ್ಲಿ ಅವರನ್ನು ಕಂಡು [illegible] ಹೋದರು.

ಮಧ್ಯಾಹ್ನದಲ್ಲಿ [illegible] ಕಾಂಗ್ರೆಸ್ಸಿಗರನ್ನು [illegible] ರಿಂದ ಗೌರವ ರಕ್ಷೆಯನ್ನು [illegible] ಸಂಸ್ಥಾನಿ ಕಾಂಗ್ರೆಸ್ಸಿನ [illegible] ಪ್ರತಿನಿಧಿಗಳು ಅವರನ್ನು [illegible] ಗಳನ್ನು ಮಂಡಿಸಿದರು. ಅವರಿಗೆ [illegible] ದೇಶಪರ ಮಾತುಗಳನ್ನು ನೆಹರು [illegible] ಅವರು ಮತ್ತು [illegible] ಸಂಸ್ಥಾನ [illegible] ಮೆನನ್ನರು [illegible] ಫಲವಾಗಿ ಉಭಯ ಪಕ್ಷಗಳಲ್ಲಿ [illegible] ಗುವ ಲಕ್ಷಣವುಂಟು.

ಇತ್ತೆಹಾದುಲ್ ಮುಸ್ಲಿಮೀನ [illegible] ಅಧ್ಯಕ್ಷರಾದ ಅಬ್ದುಲ ಹಸನ ಸಯ್ಯದ ಅಲಿಯವರ ನೇತೃತ್ವದಲ್ಲಿ ಮುಖ್ಯ ಮಂತ್ರಿಗಳನ್ನು ಕಂಡು ಮುಸ್ಲಿಂ ಪ್ರತಿಷ್ಠಿತರ ಶಿಷ್ಟ ಮಂಡಳವೊಂದು ಮಿಲಿಟರಿ ಕ್ರಮ ಪ್ರಾರಂಭವಾದಂದಿನಿಂದ ಮುಸ್ಲಿಮರಿಗಾದ ಹಾನಿ-ತೊಂದರೆಗಳನ್ನು ನಿವೇದಿಸಿದರು. ಪಂ. ನೆಹರು ಅವರು ಶಾಂತಚಿತ್ತದಿಂದ ಕೇಳಿ ಎಲ್ಲ ಪ್ರಶ್ನೆಗಳನ್ನು ಪ್ರಜಾಸತ್ತಾತ್ಮಕವಾಗಿ ಬಿಡಿಸುವದಾಗಿ ತಿಳಿಸಿದರು.

ಡಿ. ಲಿಟ್ ಪದವಿ ಸ್ವೀಕಾರ

ತಾ. ೨೬ ಕ್ಕೆ ಉಸ್ಮಾನಿಯಾ ವಿಶ್ವವಿದ್ಯಾಲಯವವರು ಅರ್ಪಿಸಿದ ಡಾಕ್ಟರ ಆಫ್ ಲಿಟರೇಚರ್ (ಸಾಹಿತ್ಯತೀರ್ಥ ಎಂದಂತೆ) ಪದವಿಯನ್ನು ಪಂ. ನೆಹರೂ ಅವರು ಸ್ವೀಕರಿಸಿದರು ಆ ಸಂದರ್ಭದಲ್ಲಿ ಅವರು ಹಿಂದುಸ್ತಾನಿಯಲ್ಲಿ ಮತ್ತು ಮುಂದೆ ಇಂಗ್ಲೀಷಿನಲ್ಲಿ ಕೊಟ್ಟ ಭಾಷಣದಲ್ಲಿ ರಾಷ್ಟ್ರಭಾಷೆಯ ಪ್ರಶ್ನೆಯನ್ನೆತ್ತಿಕೊಂಡು ಅದು ಸಾವಧಾನವಾಗಿ ತಾನಾಗಿ ಬೆಳೆಯಬೇಕಾದ ಭಾಷೆಯೆಂದೂ ಶುದ್ಧ ಉರ್ದು ಅಥವಾ ಶುದ್ಧ ಹಿಂದಿಯೆಂಬುದು ಕೇವಲ ಹುಚ್ಚೆಂದೂ ಹೇಳಿದರು ರಾಷ್ಟ್ರಭಾಷೆ ವಿಶಾಲ ಬುದ್ಧಿಯಿಂದ ಅನೇಕ ಪರಕೀಯ ಶಬ್ದಗಳನ್ನರಗಿಸಿಕೊಂಡು ಬೆಳೆಯಬೇಕಲ್ಲದೆ ಸಂಕುಚಿತ ಬುದ್ಧಿಯನ್ನು ತೋರಿದರೆ ಅದು ಮಾರಕವಾಗುವದೆಂದು ಅಭಿಪ್ರಾಯಪಟ್ಟರು.

ವಿಶ್ವವಿದ್ಯಾಲಯದ ಕುಲಪತಿಗಳು, ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಈ ವರೆಗೆ ಉರ್ದುವಿನಲ್ಲಿ ಶಿಕ್ಷಣ ಕೊಡುತ್ತಿದ್ದು ಮುಂದಿನ ವರ್ಷದಿಂದ ಉರ್ದು, ಹಿಂದಿ ಎರಡೂ ಲಿಪಿಗಳಲ್ಲಿ ಹಿಂದುಸ್ತಾನಿಯಲ್ಲೇ ಶಿಕ್ಷಣ ಕೊಡಲಾಗುವದೆಂದೂ ವರಂಗಲ್, ಕಲಬುರಗಿ ಮತ್ತು ಉಸ್ಮಾನಾಬಾದ ಕಾಲೇಜುಗಳಲ್ಲಿ ತಾನು ಅನುಕ್ರಮವಾಗಿ ತೆಲುಗು, ಕನ್ನಡ ಮತ್ತು ಮರಾಠಿಯಲ್ಲಿ ಶಿಕ್ಷಣಕ್ಕೆ ಅಸ್ಪದ ಕೊಡಲಾಗುವದೆಂದೂ ಸಾರಿದರು.

ವೇಳೆಯಿಲ್ಲದಿದ್ದರೂ ಬೇರೆ [illegible] ಪಂ. ನೆಹರೂ ಅವರು [illegible] ಯಾದ ತಹೀರ [illegible] ಯವರನ್ನು ಕಂಡು ಅವರನ್ನು [illegible] ದರು.

ಪಂ. ನೆಹರು ಅವರು ತಾ. [illegible] [illegible] ದರು.

ಕಾರ್ಯಕರ್ತರ ಪೋಷಣ ವ್ಯವಸ್ಥೆ

[ಲೇಖಕರು ಶ್ರೀ ಕಿ. ಘ. ಮಶ್ರೂವಾಲಾ]

“ಇನ್ನು ಅಧಿಕಾರ ಪದವಿಗಳಲ್ಲಿ ಸ್ವತಂತ್ರವಾಗಿ ... ಹಳ್ಳಿಯಲ್ಲಿಯೂ ... ಕಾರ್ಯಕರ್ತರ ... ಸರ್ವಥಾ ಅವಶ್ಯ ... ಕೇವಲ ... ಅನುಭವಿಸಿದ ... ಅವರಿಗೆ ತಮ್ಮ ಕುಟುಂಬಗಳನ್ನು ಪೋಷಿಸುವದು ಕೂಡ ಅಸಾಧ್ಯವಾಗಿದೆ. ಪರಿಸ್ಥಿತಿಯ ಒತ್ತಾಯದಿಂದ ಎಷ್ಟೋ ಕಳಕಳಿಯ ಕಾರ್ಯಕರ್ತರು ಬೇರೆ ಲಾಭದಾಯಕ ಪತ್ರಿಗಳನ್ನು ಅವಲಂಬಿಸುವ ಪ್ರಸಂಗ ಬಂದುದುಂಟು. ಸಿಕ್ಕ ಕಾರ್ಯಕ್ಕಾಗಿ ಅವರು ಪ್ರವಾಸಗಳ, ... ವರ್ತನೆಯಿಂದ ಚ್ಯುತರಾಗಬೇಕಾಯಿತು. ವಿವಿಧ ಸಮಿತಿಗಳಿಗೂ ಅಧಿಕಾರ ಸ್ಥಾನಗಳಿಗೂ ಸೇರಿದ ಭತ್ಯೆಗಳೇ ಮೊದಲಾದ ಲಾಭಗಳಿಗಾಗಿ ಆ ಸ್ಥಾನಗಳನ್ನು ಸಂಪಾದಿಸುವ ಲೋಭ ಹೆಚ್ಚಿದೆ. ಸೇವಾ ತತ್ಪರತೆ ಸ್ವಾಭಾವಿಕವಾಗಿ ಕಡಿಮೆಯಾಗಿದೆ. ಯಾವುದಾದರೊಂದು ಸಂಸ್ಥೆ ಅವರನ್ನು ಈ ಉಪಜೀವನದ ಚಿಂತೆಯಿಂದ ಮುಕ್ತಗೊಳಿಸುವಂತಿದ್ದರೆ ಜನಸೇವೆಯ ಕಾರ್ಯದಲ್ಲಿ ಉಚ್ಚತರ ಮಟ್ಟವನ್ನು ಕಾಯ್ದುಕೊಳ್ಳಬಲ್ಲ ಅನೇಕ ಕಾರ್ಯಕರ್ತರಿರುವರು. ಬೇಗನೆ ಅಂಥದೊಂದು ಯೋಜನೆಯನ್ನು ಯೋಜಿಸದಿದ್ದರೆ, ಪ್ರಾಮಾಣಿಕರೂ ಸಮರ್ಥರೂ ಆದ ಕಾರ್ಯಕರ್ತರು ಈಗಿರುವದಕ್ಕಿಂತಲೂ ದುರ್ಲಭರಾಗುವರು ಪರಿಣಾಮವಾಗಿ ಜನರು ಕಾಂಗ್ರೆಸ್ಸಿನಲ್ಲಿ ಶ್ರದ್ಧೆಯನ್ನು ಕಳೆದುಕೊಳ್ಳುವರು. ಆದುದರಿಂದ ಈ ವಿಷಯಕ್ಕೆ ಕೂಡಲೆ ಮನಸು ಕೊಡುವದು ಅವಶ್ಯವಾಗಿದೆ.”

ಮೇಲಿನದು ಒಂದು ಪತ್ರದ ಸಾರಾಂಶ. ಈ ಬಗೆಯ ಅಭಿಪ್ರಾಯವುಳ್ಳವರ ಸಂಖ್ಯೆ ವಿಪುಲವಾಗಿದೆ. ಅದರಲ್ಲಿ ತಥ್ಯವಿದೆ. ನಮಗೆ ಲಕ್ಷಾಂತರ ಇಡಿಹೊತ್ತಿನ ಕೆಲಸಗಾರರು ಬೇಕಾಗಿದ್ದಾರೆ. ಶ್ರೀ ರವಿಶಂಕರ ವ್ಯಾಸ, ಅಪ್ಪಾ ಪಟವರ್ಧನ, ತಿಮ್ಮಪ್ಪ ನಾಯಕರೇ ಮೊದಲಾದವರಂಥವರು ದೊಡ್ಡ ಪ್ರಮಾಣದಲ್ಲಿ ದೊರೆಕರು. ಅವರು ದೇಶಕಾರ್ಯಕ್ಕಾಗಿ ಸಂನ್ಯಾಸಿಗಳೇ ಆಗಿಬಿಟ್ಟಿದ್ದಾರೆ. ಆದರೆ ಎಷ್ಟೋ ಜನರಿಗೆ ತಮ್ಮ ಕಾರ್ಯದಲ್ಲಿ ಗಟ್ಟಿಯಾಗಿ ನಿಲ್ಲಬೇಕಾದರೆ ಒಂದಲ್ಲ ಒಂದು ಬಗೆಯ ಐಹಿಕ ಪ್ರಯೋಜನಬೇಕಾಗುತ್ತದೆ. ಆದರೆ ಇದೀಗ ಪ್ರಶ್ನೆ: ಅವರನ್ನು ಹೇಗೆ, ಯಾರು, ಹೊರೆಯಬೇಕು?

ಈ ದೇಶದಲ್ಲಿ ಆಜೀವ ಕಾರ್ಯಕರ್ತರ ಅನೇಕ ಅಖಿಲ ಭಾರತ, ಪ್ರಾಂತಿಕ ಅಥವಾ ಸ್ಥಾನಿಕ ಸಂಸ್ಥೆಗಳಿವೆ. ಅವುಗಳಲ್ಲಿ ಕೆಲವು ಮಹಾ ಕಾರ್ಯಕರ್ತರನ್ನು ಇಟ್ಟುಕೊಂಡಿವೆ, ಉಳಿದವು ಚಿಕ್ಕಪುಟ್ಟ ಕಾರ್ಯಕರ್ತರನ್ನು. ಭಾರತ ಸೇವಕ ಸಮಾಜ, ಜನಸೇವಕ ಸಮಾಜ, ಅ. ಭಾ. ಚರಖಾ ಸಂಘ, ಅ. ಭಾ. ಗ್ರಾಮೋದ್ಯೋಗ ಸಂಘ, ಹಿಂದುಸ್ತಾನಿ ತಾಲಿಮಿ ಸಂಘ, ಕಸ್ತೂರಬಾ ನಿಧಿ ಇವೆಲ್ಲವೂ ಕಾರ್ಯಕರ್ತರನ್ನು ಹೊರೆಯುತ್ತಿವೆ. ಗಾಂಧೀ ಸೇವಾ ಸಂಘವೂ ಅನೇಕ ವರ್ಷಗಳ ವರೆಗೆ ಹಾಗೆಯೇ ಮಾಡುತಿತ್ತು. ಗಾಂಧೀ ಸ್ಮಾರಕ ನಿಧಿಯೂ ಸರ್ವಸೇವಾ ಸಂಘವೂ ಹಾಗೇ ಮಾಡುವವೆಂದು ನಿರೀಕ್ಷಿಸಬಹುದು. ಆದರೆ ಇನ್ನೈವತ್ತು ಇಂಥ ಸಂಘಗಳಿದ್ದರೂ ದೇಶಕ್ಕೆ ಬೇಕಾದ ಲಕ್ಷಾಂತರ ಕಾರ್ಯಕರ್ತರಲ್ಲಿ ಕೆಲವರನ್ನು ಮಾತ್ರ ಅವು ಪೋಷಿಸಬಹುದು. ಅದೂ ಬಹಳ ಕಷ್ಟದಿಂದ.

ಇಂಥ ಆಜೀವ ಕಾರ್ಯಕರ್ತರ ಸಂಸ್ಥೆಗಳಿಗೂ ತಮ್ಮ ಇತಿಮಿತಿ ಇದ್ದೇ ಇದೆ. ಅವುಗಳಲ್ಲಿ ಮುಖ್ಯವಾದುದೆಂದರೆ ಹಣದ ಅವಶ್ಯಕತೆ. ಧನಸಹಾಯವನ್ನೂ ಚಂದಾ ಹಣವನ್ನೂ ಸಂಗ್ರಹಿಸುವದೇ ಸಂಸ್ಥೆಯ ಕಿರಿ ಅತ್ಯುತ್ತಮ ಕಾರ್ಯಕರ್ತರ ಏಕಮಾತ್ರ ಚಟುವಟಿಕೆಯಾಗುವದು. ಅನಂತರ ಅವನು ಪ್ರತ್ಯಕ್ಷ ಕಾರ್ಯಕರ್ತನಾಗಿ ಉಳಿಯದೆ ಕೇವಲ “ಸಂಘಟಕ”- ಅಂದರೆ ಧನಸಂಗ್ರಾಹಕ- ನಾಗಿಬಿಡುವನು.

ಅಲ್ಲದೆ, ಭಾರೀ ನಿಧಿಗಳು ಬೇಕಾದರೆ ಭಾರೀ ದಾನಿಗಳನ್ನೇ ಹಿಡಿಯಬೇಕಾಗುತ್ತದೆ. ಹೆಚ್ಚಾಗಿ ಅಂಥ ಸಂಸ್ಥೆಗಳು ಇಬ್ಬರುಮೂವರು ಶ್ರೀಮಂತರ ಕೈಗೂಸುಗಳಾಗಿ ಬಿಡುವದುಂಟು. ಶ್ರೀಮಂತರಲ್ಲಿ ಧರ್ಮಬುದ್ಧಿಯೂ ಜನಸೇವಾ ಭಾವನವೂ ಇಲ್ಲವೆಂದಲ್ಲ. ಅವರು ಎಷ್ಟೋ ವೇಳೆ ಔದಾರ್ಯದಿಂದ ಮಾತ್ರವಲ್ಲ, ಶ್ರದ್ಧೆ ಪ್ರೇಮಗಳಿಂದಲೂ ದಾನ ಮಾಡುವದುಂಟು. ಆದರೆ ಸಾವಿರಗಟ್ಲೆ ದರಿದ್ರರ ನಡುವೆ ಒಬ್ಬ ಮಹಾ ಶ್ರೀಮಂತನಿರುವದೇ ವಿಷಮ ಸಮಾಜ ರಚನೆಯ ಹೆಗ್ಗುರುತೆಂಬದನ್ನು ನಾವು ಮರೆಯಕೂಡದು. ದಾನಿಯಾದವನು ಎಷ್ಟೇ ಸದ್ಗುಣಿಯಿರಲಿ, ಧರ್ಮಬುದ್ಧಿಯುವನಿರಲಿ, ವಿಶಾಲ ಹೃದಯಿಯಿರಲಿ, ಅವನ ಸಂಪಾದನೆಯಲ್ಲಿ ಲೇಶವಾದರೂ ಅನ್ಯಾಯ, ಶೋಷಣೆ, ಮರೆಮೋಸಗಳ ದಾಪಲೇಪವಿಲ್ಲದಿರದು. ಸ್ವತಃ ತಾನೇ ಅಂಥ ದುರ್ವೃತ್ತಿಗಳನ್ನು ಎಸಗದಿದ್ದರೂ ತನ್ನ ಪಾಲುಗಾರರೋ ಸಹಾಯಕರೋ ನೌಕರರೋ ಅಂಥವುಗಳಲ್ಲಿ ತೊಡಗಿರುವದನ್ನು ಅವನು ಸಹಿಸುವನು. ಅಥವಾ ಇಂಥ ಉಪಾಯಗಳಿಂದಸಂಪಾದಿಸಿದ ಹಣಕ್ಕೆ ಅವನು ಉತ್ತರಾಧಿಕಾರಿಯಾಗಿ ಬಂದಿರಬಹುದು. ಶುದ್ಧ ಸತ್ಯಸಂಧತೆ, ಕಾಯಕಷ್ಟ ಮತ್ತು ಮಿತವ್ಯಯದಿಂದ ನಿರತಿಶಯ ಧನಸಂಗ್ರಹವನ್ನು ಶೀಘ್ರವಾಗಿ ಮಾಡುವದು ತೀರ ಅಸಾಧ್ಯ. ಅವನ ನಿರರ್ಗಳ ಔದಾರ್ಯವೂ ಆಶ್ರಯವೂ ಸಂಸ್ಥೆಯ ಕಾರ್ಯಕರ್ತರಲ್ಲಿ ಅತ್ಯುತ್ತಮರಾದವರ ಮೇಲೆ ಕೂಡ ವರ್ಚಸ್ಸು ಬೀರದಿರದು. ನಿರ್ಭಯವಿಮರ್ಶಕನೆಂದು ಪ್ರಸಿದ್ಧನಾದ ಕಾರ್ಯಕರ್ತನುಕೂಡತನಗರಿಯದೆಯೆ ಇಂಥ ವಿಶಿಷ್ಟ ದಾನಿಯೊಬ್ಬನನ್ನು ನಿಯಮಕ್ಕೆ ‘ಅಪವಾದ’ನೆಂದು ಪರಿಗಣಿಸುವನು. ಆ ದಾನಶೂರನಲ್ಲಿ ಉದಾತ್ತ ಧರ್ಮಬುದ್ಧಿಗಿಂತ ಧೂರ್ತತೆ ಹೆಚ್ಚಾಗಿದ್ದರೆ, ಅವನಿತ್ತ ದಾನವೂ ಅವನ ಪಾಲಿಗೆ ಬಡ್ಡಿಗೆ ಹಾಕಿದ ಮೂಲಧನದಂತೆಯೆ ಆಗುವದು. ತನ್ನ ಅಂಗಡಿ ಇಲ್ಲವೆ ವ್ಯಾಪಾರ ಸಂಸ್ಥೆಯಲ್ಲಿರುವವರ ಮೇಲೆ ಹೇಗೆ ತನ್ನ ಅಧಿಕಾರ ನಡೆಸುವನೋ ಹಾಗೆಯೆ ಅವನು ಸಾರ್ವಜನಿಕ ಸಂಸ್ಥೆಯ ಕೆಲಸಗಾರರ ಮೇಲೆ ಅಧಿಕಾರ ನಡೆಸುವನು. ಕಾರ್ಯಕರ್ತರ ಸಂಸ್ಥೆಗಳಲ್ಲಿಯೂ ಅದರ ಸದಸ್ಯರಲ್ಲಿಯೂ ನೈತಿಕ ಉತ್ಸಾಹ ಇಳಿದು ಹೋಗಲು ಶ್ರೀಮಂತರ ಮೇಲಿನ ಅವಲಂಬನವೂ ಒಂದು ಕಾರಣ.

ಇತ್ತ ಸದ್ಯದ ವಿಚಾರಧಾರೆಯಂತೆ, ವರ್ಷವರ್ಷಕ್ಕೆ ಶ್ರೀಮಂತರ ಮೇಲೆ ಶಾಸನದ ನಿಯತಿ ಹೆಚ್ಚುತ್ತ ಹೋಗುತಿದೆ. ಈ ಕ್ರಮದ ಗತಿ ತೀವ್ರವಿರಬಹುದು, ಮಂದವಿರಬಹುದು; ಆದರೂ ಸದ್ಯದ ವಿಚಾರಧಾರೆ ಮುಂದುವರಿದಂತೆ ಶ್ರೀಮಂತರ ಲಾಭಾಂಶ, ಬಡ್ಡಿ ಪ್ರಮಾಣ ಮತ್ತು ಸ್ವಂತ ಆಸ್ತಿ ಸಂಗ್ರಹಗಳು ಕಡಿಮೆಯಾಗುವವು. ಅವರ ಸಂಪಾದನೆಯ ರೀತಿನೀತಿಗಳೂ ತೀಕ್ಷ್ಣ ಟೀಕೆಗಳಿಗೆ ಗುರಿಯಾಗುವವು. ವ್ಯವಹಾರಿಕವಾಗಿ ಶ್ರೀಮಂತರ ಪ್ರಭಾವವನ್ನು ತಗ್ಗಿಸಲು ಕಾರ್ಯಕರ್ತರು ಸಮರ್ಥರಾಗಲಿ ಬಿಡಲಿ, ಅವರು ಜನತೆಯ ಮುಂದಿಡುವ ವಿಚಾರಗಳು ಶ್ರೀಮಂತರ ಹಿತಕ್ಕೆ ವ್ಯತಿರಿಕ್ತವಾದವುಗಳೇ ಸರಿ. ಸಂಗಡಲೇ ಅವರು ವರ್ಗಣಿಗಾಗಿ ಶ್ರೀಮಂತರ ಬಳಿಗೆ ಹೋದರೆ, ಇಂಥ ಸಂಸ್ಥೆಗಳಿಗೆ ಸಹಾಯ ಮಾಡಿ ತಾವು ತಮ್ಮ ವಿರೋಧಿಗಳನ್ನು ಪೋಷಿಸುತಿರುವೆವೆಂಬ ಭಾವನೆ ಅವರಲ್ಲಿ ಮೂಡುವದು. ಕಾರ್ಯಕರ್ತರ ಸಂಸ್ಥೆಗಳಿಗೆ ಸಹಾಯ ನೀಡುವ ವಿಚಾರದಲ್ಲಿ ಶ್ರೀಮಂತರ ಹುರುಪು ತಣ್ಣಗಾಗುತಿರಲು ಇದೂ ಒಂದು ಕಾರಣ.

ಅತ್ತ ಜನ ಸಾಮಾನ್ಯರ ಮನಸಿನಲ್ಲಿ ಬಯಲಾಸೆಗಳು ಮನೆಮಾಡಿವೆ. ಅವರ ವಿಚಾರಗಳು ತಪ್ಪುದಾರಿ ಹಿಡಿದಿವೆ. ಜನರಿಗೆ ಒಳ್ಳೆಯ ಕಾರ್ಯಕರ್ತರೇನೋ ಬೇಕೆಂದಿದೆ. ಆದರೆ ಅವರನ್ನು ಪೋಷಿಸುವ ಕೆಲಸವನ್ನು ಸರಕಾರವಾದರೂ ಮಾಡಬೇಕು, ಇಲ್ಲದಿದ್ದರೆ ಕಾರ್ಯಕರ್ತರೇಸಾಧ್ಯವಾದರೆ ತಮ್ಮ ಹಳ್ಳಿಯ ಹೊರಗಿಂದ ಸಂಗ್ರಹಿಸಿದ ಹಣದಿಂದ ಸಮೃದ್ಧವಾದ ಸಂಸ್ಥೆಗಳು ಅವರ ಪೋಷಣೆಯ ಹೊಣೆ ಹೊರಬೇಕು ಎಂಬವಾಗಿ ಅವರು ಅಪೇಕ್ಷಿಸುತ್ತಾರೆ. ಸಂಸ್ಥೆಗಳಿಂದ ಪೋಷಿಸಲ್ಪಟ್ಟ ಇಡಿ ಹೊತ್ತಿನ ಕಾರ್ಯಕರ್ತರಿರುವದೇ ಯೋಗ್ಯವಲ್ಲವೆಂದು ಇನ್ನೊಂದು ಅಭಿಪ್ರಾಯವಿದೆ ತಮ್ಮ ನಿತ್ಯದ ಅವಶ್ಯಕತೆಗಳ ಚಿಂತೆ ತಪ್ಪಿದ ಮೇಲೆ ಅವರು ನೂಲುವದು, ಬೀದಿ ಉಡುಗುವದು, ಮಲಮೂತ್ರಗಳನ್ನು ಬಳಿಯುವದು, ದಾದಿ ಸೇಯುವದೇ ಮೊದಲಾದ ಕಾರ್ಯಗಳಲ್ಲಿ ಬೇಕಾದ ಹಾಗೆ ಮನಸು ಕೊಡಬಲ್ಲರು. ಆದರೆ ತಮ್ಮ ದಿನದ ತುತ್ತಿಗಾಗಿ ಬೆಳಗಿನಿಂದ ಸಂಜೆಯತನಕ ದುಡಿಯಬೇಕಾದ ಜನರಿಗೆ ಇಂಥ ‘ವಿನೋದ’ಗಳಲ್ಲಿ ಕಾಲಕ್ಷೇಪ ಮಾಡುವದು ಸಾಧ್ಯವಿಲ್ಲ. ಕಾರ್ಯಕರ್ತರು ಸ್ವಂತದ ರೊಟ್ಟಿಗಾಗಿ ಅತ್ತ ದುಡಿಯುತ್ತಲೂ ಇತ್ತ ಗ್ರಾಮಸೇವೆ ಮಾಡುತ್ತಲೂ ಇರಬೇಕು; ತಮ್ಮ ಉಡುಗುವ ಬಳಿಯುವ ನೂಲುವ ನೇಯುವ ಕಾರ್ಯಕ್ರಮಗಳಲ್ಲಿ ಹಳ್ಳಿಗರು ಭಾಗವಹಿಸಬೇಕೆಂದು ಕರೆಯಬಾರದು. ಇಂಥ ವಾತಾವರಣದಲ್ಲಿ ಕಾರ್ಯವೂ ಕಾರ್ಯಕರ್ತರೂ ಸೇರಿಯೇ ಹಾಳಾದರೆ ವಿಚಿತ್ರವೇನು?

ಆದುದರಿಂದ ಜನರಿಗೆ ಒಳ್ಳೆಯ ಕಾರ್ಯಕರ್ತರು ಬೇಕಾದರೆ ಅವರು ಕಾರ್ಯಕರ್ತನಲ್ಲಿ ಆಸ್ಥೆವಹಿಸಿ ಅವನ ಕೆಲಸಗಳಲ್ಲಿ ಸಹಕಾರ ನೀಡಬೇಕು. ಅಂದರೆ,

೧. ಸಾಮಾನ್ಯ ಜನರು—ಸಾಧಾರಣ ಅನುಕೂಲವಂತರು—ತಮ್ಮ ಹಿತದ ಮಾತೇ ಇದೆಂದು ಬಗೆದು ವಿಶ್ವಾಸಾರ್ಹರಾದ ಕಾರ್ಯಕರ್ತರ ಪೋಷಣೆಯ ಭಾರ ವಹಿಸಬೇಕು.

೨. ಇದು ತಪ್ಪಬೇಕಾದರೆ, ಜನರು ತಮ್ಮದೇ ನಿಧಿಯನ್ನು ಕೂಡಿಸಬೇಕು. ಅದರಲ್ಲಿ ಒಬ್ಬ ದಾನಿಯಿಂದ ಇಂತಿಷ್ಟಕ್ಕಿಂತ ಹೆಚ್ಚು ಹಣ ಸ್ವೀಕರಿಸತಕ್ಕದ್ದಲ್ಲವೆಂದು ನಿಯಮ ಹಾಕಿಕೊಳ್ಳಬೇಕು. ಕೆಲ ಸಂಸ್ಥೆಗಳು ದಾನ ಸ್ವೀಕಾರದ ಕನಿಷ್ಠ ಪರಿಮಿತಿಯನ್ನು ಹಾಕಿಕೊಂಡಿವೆ. ಆದರೆ ತದ್ವಿಪರೀತ ನಿಯಮವಿರಬೇಕೆಂದು ನನ್ನ ಸೂಚನೆ ಕನಿಷ್ಠ ಮಿತಿ ಒಂದು ದುಡ್ಡಾಗಿರಬಹುದು. ಲೋಕಮಾನ್ಯ ತಿಲಕರ ಸ್ವರಾಜ್ಯ ನಿಧಿಯೂ ಗಾಂಧೀಜಿ ಹರಿಜನರಿಗಾಗಿ ನಡೆಸಿದ್ದ ಸಂಗ್ರಹವೂ ಈ ಮಾದರಿಯವು. ಪರಮಾವಧಿಯನ್ನು ಮಾತ್ರ ನಿರ್ದಿಷ್ಟಗೊಳಿಸಬೇಕು—ಆಯಾ ಪರಿಸ್ಥಿತಿಗನುಸಾರವಾಗಿ ೫ರೂಪಾಯಿ, ೧೦ ರೂಪಾಯಿ ಅಥವಾ ೨೫ ರೂಪಾಯಿ ಯೆಂದು ಗೊತ್ತುಪಡಿಸಬಹುದು. ಈ ಪರಿಮಿತಿಯನ್ನು ಮೀರಿದ ವರ್ಗಣಿಗಳನ್ನು ಸ್ವೀಕರಿಸತಕ್ಕದ್ದಲ್ಲ.

೩ ಹಣರೂಪದಲ್ಲೇ ವರ್ಗಣಿ ಕೂಡಿಸುವ ಪದ್ಧತಿಯನ್ನು ಬಿಡಬೇಕು. ವಸ್ತುರೂಪದ ವರ್ಗಣಿಗಳಿಗೆ ಉತ್ತೇಜನಕೊಡಬೇಕು.

೪ ಯಾವನೊಬ್ಬ ವಿಶಿಷ್ಟ ದಾನಿಯ, ಅಥವಾ ಗೆಳೆಯರ ಇಲ್ಲವೆ ಬಳಗದವರ ಹೆಸರನ್ನು ಸಂಸ್ಥೆಗೆ, ಕಟ್ಟಡಕ್ಕೆ ಇಲ್ಲವೆ ಆಶ್ರಮಕ್ಕೆ ಇಡಬೇಕೆಂಬ ಅಥವಾ ದಾನಕೊಟ್ಟವನನ್ನು ಸಂಸ್ಥೆಯ ವಿಶ್ವಸ್ತ ಮಂಡಲದಲ್ಲಿ ತೆಗೆದು ಕೊಳ್ಳುವ ಕರಾರಿನ ಮೇಲೆ ದಾನವನ್ನು ಸ್ವೀಕರಿಸತಕ್ಕದ್ದಲ್ಲ.

೫ ಕಾರ್ಯಕರ್ತನನ್ನು ಇಟ್ಟುಕೊಳ್ಳಬೇಕೆಂದು ಬಯಸುವ ಜನರು ತಮಗೆ ಯಾವ ಬಗೆಯ ಸೌಕರ್ಯಗಳನ್ನು ಅಪೇಕ್ಷಿಸುವರೋ ಅಂಥ ಸೌಕರ್ಯಗಳು ಕಾರ್ಯಕರ್ತನಿಗೂ ಲಭಿಸಬೇಕು. ಸರಳಜೀವನ, ಬಡತನದ ಬಾಳುವೆ ಸ್ವಾರ್ಥತ್ಯಾಗ ಇವೆಲ್ಲ ಕಾರ್ಯಕರ್ತನ ಪಾಲಿಗೇ ಇರಬೇಕು ಮತ್ತು ಜನರೆಲ್ಲ ಬೇಕುಬೇಕಾದಂತೆ ಸುಖವಿಲಾಸಗಳ ಬೆನ್ನು ಹತ್ತಬಹುದು ಎಂಬೀ ಬುದ್ಧಿ ಇತರಕ್ಕದ್ದಲ್ಲ. ಕಾರ್ಯಕರ್ತನ ಸರಿಯಾದ ಪೋಷಣೆ ತಮ್ಮ ಸ್ವಂತದ ಕೆಲಸವೇ ಎಂದು ಜನರು ಬಗೆಯಬೇಕು.

೬ ಇನ್ನು ಬಡತನದ, ಸೇವಾಜೀವನದ ಶಪಥವೂ ಬಹುಸಂತಾನದ ಪೋಷಣೆಯೂ ಒಂದಕ್ಕೊಂದು ಹೊಂದುಗೂಡಲಾರವೆಂಬ ಅರಿವು ಕಾರ್ಯಕರ್ತನಿಗೂ ಇರಬೇಕು. ಇಂದ್ರಿಯನಿಗ್ರಹದಿಂದ ಸಮೇತವಾಗಿರದ ಅಪರಿಗ್ರಹವು ಕುಟುಂಬಕ್ಕೂ ಸಮಾಜಕ್ಕೂ ಒಂದು ಅಭಿಶಾಪ ಈ ಸತ್ಯ ಈ ದೇಶದಲ್ಲಿ ತೀರ ಉಪೇಕ್ಷಿಸಲ್ಪಟ್ಟಿದೆ. ಪರಿಣಾಮವಾಗಿ ಐದಾರು ಐದಾರು ಮಕ್ಕಳ ಪಾಲನೆ ಪೋಷಣೆಯ ಹೊರೆ ಹೊತ್ತ ಕಾರ್ಯಕರ್ತರನ್ನು ನಾವು ವಿಪುಲವಾಗಿ ಕಾಣಬಹುದು. ಇದರಿಂದಾಗುವ ಫಲವೆಂದರೆ, ಆಡಚಣ, ಬಡತನ, ಉದಾಸೀನತೆ, ಅನಾರೋಗ್ಯ, ಅಕಾಲಮೃತ್ಯು, ಮತ್ತು ಕಟ್ಟಕಡೆಗೆ, ತತ್ವಗಳನ್ನು ಬಲಿಗೊಟ್ಟಾದರೂ ಲಾಭದಾಯಕ ಸ್ಥಾನಗಳನ್ನು ಸಂಪಾದಿಸುವ ಲೋಭ ಇಲ್ಲವೆ ಒಬ್ಬ ಬಿರು ದಾನಶೂರರ ಆಶ್ರಯ ಗ್ರಹಣ.

ನಗರಗಳಲ್ಲಿಯೂ ಹಳ್ಳಿಗಳಲ್ಲಿಯೂ ಇರುವ ವಿಚಾರಿಗಳೂ ಕಾರ್ಯಕರ್ತರೂ ಈ ಮಾರ್ಗದಲ್ಲಿ ಕಾರ್ಯಾರಂಭ ಮಾಡಿದರೆ, ಉನ್ನತ ಮತ್ತು ಸ್ವತಂತ್ರ ಚರಿತ್ರದ ಕಾರ್ಯಕರ್ತರನ್ನು ದೊರೆಕಿಸುವ ಸಮಸ್ಯೆಯನ್ನು ಬಿಡಿಸಲು ಸುಲಭವಾದೀತು. ಇಲ್ಲದೆ ಹೋದರೆ, ಹಳೆಯ ಸೇವೆಯ ಪ್ರಯೋಜನವನ್ನು ಈಗಾದರೂ ಪಡೆಯೋಣವೆಂದು ಕಾಂಗ್ರೆಸ್ ಸರಕಾರವಿರುವ ಸಂಧಿಯನ್ನು ಸಾಧಿಸುವ ಹಂಬಲ ಹೆಚ್ಚುವದು ಅನಿವಾರ್ಯ.

ಮುಂಬಯಿ (ಹರಿಜನರಿಂದ)

೨೦-೧೨-೪೮

ಯುದ್ಧ ನೇತಾರರ ವಿಚಾರಣೆ

ವರ್ಧಾದಲ್ಲಿ ೨೬-೧೧-೪೮ ರಂದು ಮಹಿಳಾಶ್ರಮದಲ್ಲಿ ಶ್ರೀ ವಿನೋಬಾರವರು ಮಾಡಿದ ಪ್ರಾರ್ಥನೋತ್ತರ ಭಾಷಣ.

“ಜಾಗತಿಕ ಯುದ್ಧವೇನೋ ಮುಕ್ತಾಯವಾಯ್ತು. ಆದರೆ ಆಗ ಕೆರಳಿನಿಂತ ಭಾವೋದ್ರೇಕಗಳು ಇನ್ನೂ ಉಪಶಮನವಾಗಿಲ್ಲ. ಯುದ್ಧ ಮೂಲಕ ಉಂಟಾದ ಹೊಟ್ಟೆಯ ಕಿಚ್ಚೂ ಕೆಟ್ಟ ಮನಸ್ಸೂ ಮಾರ್ಪಡಲು ಅವಕಾಶವೇ ದೊರೆಕದಾಯ್ತು. ಯುದ್ಧಾಪರಾಧಕ್ಕೆ ಸೋತ ರಾಷ್ಟ್ರಗಳೇ ಸಂಪೂರ್ಣ ಹೊಣೆಯೆಂದು ಗೆದ್ದ ರಾಷ್ಟ್ರಗಳು ಗ್ರಹಿಸಿದವಲ್ಲದೆ ಸೋತ ನೇತಾರರನ್ನು ವಿಚಾರಣೆಗೆ ಗುರಿಪಡಿಸಿ ನ್ಯಾಯದಾನದ ಸೋಗಿನಲ್ಲಿ ಅವರೆಲ್ಲ ಯುದ್ಧಕ್ಕೂ ಜನಹತ್ಯೆಗೂ ಸಾರ್ವತ್ರಿಕ ವಿನಾಶಕ್ಕೂ ಕಾರಣರೆಂದು ತೀರ್ಮಾನಿಸಿ ಅವರನ್ನು ಗಲ್ಲಿಗೇರಿಸಿಸಲು ನಿರ್ಧರಿಸಿದರು.

“ಇತ್ತೀಚಿನ ಉದಾಹರಣೆಯೆಂದರೆ, ಜಪಾನದ ಯುದ್ಧ ನೇತಾರರ ವಿಚಾರಣೆ. ಅವರಲ್ಲಿ ಕೆಲವರಿಗೆ ಮರಣ ದಂಡನೆಯನ್ನೂ ಇನ್ನು ಕೆಲವರಿಗೆ ಆಜೀವ ಕಾರಾವಾಸವನ್ನೂ ವಿಧಿಸಲಾಯ್ತು. ಇವರ ವಿಚಾರಣೆಗೆ ನಿಯೋಜಿತರಾದ ನ್ಯಾಯಾಧೀಶರು ಒಂದಿಲ್ಲೊಂದು ಗೆದ್ದ ರಾಷ್ಟ್ರಗಳಿಂದ ಆಯ್ದು ತಂದವರೇ. ಅವರಲ್ಲಿ ಒಬ್ಬ ನ್ಯಾಯಾಧೀಶರು ಹಿಂದುಸ್ತಾನದವರಿದ್ದರು. ಹಿಂದುಸ್ತಾನವುಬಿತ್ತಾಯದಿಂದಯುದ್ಧರಂಗಕ್ಕೆ ನೂಕಲ್ಪಟ್ಟಿತ್ತಾದರೂ ಒಂದು ದೃಷ್ಟಿಯಿಂದ ಅದೂ ಗೆದ್ದ ರಾಷ್ಟ್ರವೇ ಸರಿ. ಭಾರತೀಯ ನ್ಯಾಯಾಧೀಶರು ತಮ್ಮ ವಿವೇಚನೆಯಲ್ಲಿ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿ ಇನ್ನುಳಿದ ನ್ಯಾಯಾಧೀಶರಿಗೆ ಒಪ್ಪಿಗೆಯಾಗದ ತೀರ್ಮಾನವನ್ನು ಕೊಟ್ಟರು. ಇವರ ಅಭಿಪ್ರಾಯದಂತೆ ಎಲ್ಲ ರಾಷ್ಟ್ರಗಳೂ ಅಷ್ಟೇ ಯುದ್ಧಾಪರಾಧ ಎಸಗಿದವರು. ಜಪಾನದ ನೇತಾರರು ಯುದ್ಧಾಪರಾಧವನ್ನಷ್ಟೇ ಮಾಡಿದರು. ಆದರೆ ಗೆದ್ದ ರಾಷ್ಟ್ರಗಳು, ಅಣು ಬಾಂಬಿನಂತಹ ಹೇಯವಾದ ಹಾಗೂ ಮಹಾಘಾತಕವಾದ ಅಸ್ತ್ರಪ್ರಯೋಗದಿಂದ ಅದಕ್ಕೂ ಮಿಗಿಲಾದ ಅಪರಾಧ ಮಾಡಿದ್ದಾರೆ. ನಿಜವಾಗಿಯೂ ನೋಡಿದರೆ, ಸೋತ ನೇತಾರರನ್ನು ವಿಚಾರಿಸುವ ಸೋಗು ಹಾಕುವದೇ ಮಾನವತೆಗೆ ಮಾಡಿದ ಒಂದು ಗುರುತರ ಅಪರಾಧವಾಗಿದೆ. ಜಪಾನದ ನೇತಾರರು ಆತ್ಮ ಸಮರ್ಥನೆಯ ತಮ್ಮ ಹೇಳಿಕೆಯಲ್ಲಿ, ಸೋತಿದ್ದರೂ ತಮ್ಮ ಕೃತಿಗಳಿಗಾಗಿ ತಾವು ಎಳ್ಳಷ್ಟೂ ಪಶ್ಚಾತ್ತಾಪ ಪಡುತ್ತಿಲ್ಲವೆಂದು ಸಂಪೂರ್ಣ ಘೋಷವಾಗಿ ಸಾರಿದ್ದಾರೆಂದು ಹೇಳಲಾಗಿದೆ.

“ಭಾರತೀಯ ನ್ಯಾಯಾಧೀಶರು ನಿರ್ಭೀತಿಯಿಂದ, ಧೀರೋದಾತ್ತತೆಯಿಂದ, ಸತ್ಯವಾದುದನ್ನೇ ತಮ್ಮ ತೀರ್ಮಾನದಲ್ಲಿ ಪ್ರಸ್ತಾಪಿಸಲು ಹಿಂಜರಿಯಲಿಲ್ಲವೆಂಬುದು ಅತ್ಯಂತ ತೃಪ್ತಿಕರ ಸಂಗತಿ”ಯಾಗಿದೆ.”

ಡಿ. ಎಂ.

(ಹಿಂದುಸ್ತಾನಿಯ ಮೂಲದಿಂದ ಅನುವಾದಿತ)

ಬೆಂಗಳೂರಲ್ಲಿ ಮಾನ್ಯ ದಿವಾಕರರು

ಭಾರತ ಸರಕಾರದ ಸುದ್ದಿ ಪ್ರಸಾರ ಶಾಖೆಯ ಮಂತ್ರಿಗಳಾದ ಶ್ರೀ ದಿವಾಕರ ರಂಗರಾಯರು ಡಿಸೆಂಬರ ತಾ. ೨೬ ರಂದು ಮುಂಜಾನೆ ಬೆಂಗಳೂರಿಗೆ ಮದ್ರಾಸದಿಂದ ಆಗಮಿಸಿದರು. ಮೈಸೂರ ಸರಕಾರದ ಅತಿಥಿಗಳಾಗಿ ಉಳಿದರು. ಮೈಸೂರ ಕಾಂ. ಅಧ್ಯಕ್ಷರೂ ನಗರ ಸಭಾಧ್ಯಕ್ಷರೂ ಇನ್ನಿತರ ಕಾಂಗ್ರೆಸ ಮುಖಂಡರೂ ಮೈಸೂರು ಗೃಹಸಚಿವ ಶ್ರೀ ಮರಿಗೆಪ್ಪನವರೂ ಸ್ಥಳೀಕ ಪತ್ರಿಕಾ ಸಂಪಾದಕರೂ ಅವರನ್ನು ಯಥೋಚಿತವಾಗಿ ಹಾರ ತುರಾಯಿಗಳಿಂದ ಸ್ವಾಗತಿಸಿದರು

ಮೈಸೂರಿನ ಆಕಾಶವಾಣಿಯನ್ನು ಅಭಿವೃದ್ಧಿಪಡಿಸಲು ಅತಿಶಕ್ತಿಯುತ ವಿತರಣಯಂತ್ರವನ್ನು ಏರ್ಪಡಿಸಿದ ಮೇಲೆ ಇಡೀ ಕನ್ನಡ ದೇಶಕ್ಕೇ ಅನುಕೂಲವಾಗುವಂತೆ ಆಕಾಶವಾಣಿಯ ಕೇಂದ್ರವನ್ನು ಬೆಂಗಳೂರಿಗೆ ಸ್ಥಳಾಂತರಿಸಬಹುದೆಂದು ಭಾರತದ ವಾರ್ತೆ ಮತ್ತು ಆಕಾಶವಾಣಿ ಮಂತ್ರಿಗಳಾದ ಶ್ರೀ ದಿವಾಕರರು ಡಿಸೆಂಬರ ತಾ. ೨೭ ರಂದು ಒಂದು ಸಂದರ್ಭದಲ್ಲಿ ತಿಳಿಸಿದರು.



ನೀನು ದೊಡ್ಡವನಾದರೆ?

ಮಗೂ, ಕನ್ನಡ ಕಂದಾ!

ನೀನು ದೊಡ್ಡವನಾ (ಳಾ) ದ ಮೇಲೆ ಏನು ಮಾಡಬೇಕು. ಹೇಗಿರಬೇಕು ಎಂದು ಎಂದಾದರೂ ಯೋಚಿಸಿರುವೆಯಾ? ಯೋಚಿಸಿ ಒಮ್ಮೆ ನೋಡು. ಆಮೇಲೆ ನನಗೆ ಬರೆ. ಈಗ ಬೆಳಗಾವಿಯಿಂದ ವೀರಭದ್ರನೆಂಬ ನಿನ್ನ ಚಿಕ್ಕ ಅಣ್ಣನೊಬ್ಬನು ಒಂದು ಪದ್ಯ ಬರೆದು ಕಳಿಸಿದ್ದಾನೆ. ಅದರಲ್ಲಿ ದೊಡ್ಡವನಾದ ಮೇಲೆ ಎಂಥ ಜೀವನ ನಡೆಸಬೇಕೆಂದು ಒಬ್ಬನು ಎಣಿಸಿದ್ದನ್ನು ಅವನು ವರ್ಣಿಸಿ ಹೇಳಿದ್ದಾನೆ.

೧

ಕಾಲೇಜದಿ ನಾ ಕಲಿಸಿತಿರ ಬೇಕ್
ಎಂ. ಬೀ. ಬೀ. ಎಸ್ ಆಗಿರಬೇಕ್
ಔಷಧಶಾಲೆಯ ತೆಗೆದಿರಬೇಕ್
ರೋಗಿಗಳೆಷ್ಟೋ ಬರುತಿರಬೇಕ್
ಗಳಿಕೆ ಹಿಮಾಲಯದಂತಿರಬೇಕ್
ಪರಹಿತ ಕೂಡಾ ಸಾಧಿಸಬೇಕ್!

೨

ಅತಿ ಗುಣವತಿ ತಾ ಸತಿಯಿರಬೇಕ್
ಅತಿರೂಪಿಣಿ ಅವಳಾಗಿರಬೇಕ್
ಕೈಸರ್ ಕಂಪನಿ ಕಾರಿರಬೇಕ್
ಅದರಲಿ ನಾವೇ ಕುಳ್ಳಿರಬೇಕ್
ನನ್ನೆಡಗಡೆಯಲ್ಲ ವಳಿರಬೇಕ್!

೩

ಊರಾಚೆಗೆ ಅಲೆಯುತ್ತಿರಬೇಕ್
ಸತಿ ಹಾಸ್ಯನ್ನೊತ್ತುತ್ತಿರಬೇಕ್
ಕನ್ನಡ ಪಲ್ಲದು ದನಿಗೊಡಬೇಕ್
ರನ್ನನ ಕನ್ನಡ ಅದು ಇರಬೇಕ್
ಕನ್ನಡದಲ್ಲಿ ನಾನಾ ನಗುತಿರಬೇಕ್
ಇದೆ ನನ್ನಂತರ ದ ಗುರಿಯಿರಬೇಕ್!

[illegible] ಚಿನ್ನಾಗಿದೆಯಲ್ಲವೆ? ಆದರೆ ಅದರ [illegible] ನೀನು ತಿಳಿದು ಕೊಳ್ಳುವುದು ಆವಶ್ಯಕ. ಹೆಂಡತಿ ಅತಿ ರೂಪವತಿಯೂ ಆಗಿರಬೇಕು. ಗುಣವತಿಯೂ ಆಗಿರಬೇಕು ಎಂಬುದು "ಅಪ್ಪಚ್ಚಿಯೂ (ದೋಸೆ ಇಲ್ಲವೆ ರೊಟ್ಟಿ) ಬೇಕು, ಅಮ್ಮಣ್ಣಿಯೂ (ಎದೆ ಹಾಲು) ಬೇಕು" ಎಂದು ಒಂದು ಮಗು ಹಟಮಾಡಿದಂತಾಗುವುದು. ತಾನು ತನ್ನ ಗಂಡನಿಗಿಂತ ರೂಪವತಿ ಎಂದು ತಿಳಿದುಕೊಂಡವಳಿಗೆ ತನ್ನ ಗಂಡನನ್ನು [illegible] ಗುಟ್ಟನ್ನು [illegible] ಕೊಳ್ಳಲು ಸಿದ್ಧನಾ(ಳಾ) [illegible] ಮಾತನ್ನು [illegible] ಯುವನು! [illegible] ಇರುವುದುಂಟು; [illegible] ಆದುದರಿಂದ [illegible] ದಾಗುವ ಸಂಭವವೇ ಹೆಚ್ಚು [illegible] ಸೊಸೇ, ಅತಿ ರೂಪವತಿ [illegible] ಹಂಬಲಿಗಿಂತ ಗುಣವತಿಯಾಗಬೇಕೆಂಬದನ್ನೇ ಇಟ್ಟುಕೊಂಡರೆ ಅದೇ ನಿನಗೆ ಭೂಷಣ; ಇಲ್ಲದಿದ್ದರೆ ಗಂಡನನ್ನು ಪ್ರೀತಿಸಲಾರದೆ ನೀನು ಸಿಡುಕಿಯೂ ಅತೃಪ್ತಳೂ ಅಹಂಕಾರಿಯೂ ಆಗಿ ನರಳುವೆ-ತಿಳಿಯಿತೇ?

ಎರಡನೆಯದಾಗಿ, ಮೇಲಿನ ಮೂರೂ ನುಡಿಗಳಲ್ಲಿ ಹೇಳಿದಂತೆ ಸಿರಿವಂತಿಕೆಯ ಆಸೆ ಆಕಾಂಕ್ಷೆಗಳನ್ನು ಚಿಕ್ಕಂದಿನಿಂದ ಬೆಳಸಿಕೊಂಡರೆ ಅದು ದೊಡ್ಡವರಾದ ನಂತರ ದೊರಕದೆ ಹೋದರೆ ಸಾಯುವತನಕ ಇದ್ದುದನ್ನು ಉಂಡರೂ ತೃಪ್ತಿ ಸಿಗ್ಗದೆ ನರಳುವ ಮನಃಸ್ಥಿತಿಯುಂಟಾಗುತ್ತದೆ. ಆದುದರಿಂದ ಹಣಕ್ಕಾಗಿ ಪ್ರಯತ್ನಿಸಬೇಕು. ಆದರೆ ಆ ಹಣ ಗುಣಕ್ಕಾಗಿ ಬಳಸತಕ್ಕದ್ದು, ಗುಣಿ ಎನಿಸಿಕೊಳ್ಳುವುದೇ ಅತ್ಯಂತದ ಗುರಿ ಎಂಬ ಆದರ್ಶವನ್ನು ಇಟ್ಟುಕೊಂಡರೆ ಯಾವಕಾಲದಲ್ಲೂ ಅತೃಪ್ತಿ, ಅಕೀರ್ತಿಗಳು ನಿನ್ನನ್ನು ಸೋಕಲಾರವು. ಹೌದಂತೀಯೋ ಅಲ್ಲ ಅಂತೀಯೋ? ಸಿಗಲಾರದ್ದನ್ನೆಲ್ಲ ಬಯಸುವ ಬುದ್ಧಿ ಹುಚ್ಚೇ ಸರಿ. ಇಂಗ್ಲೀಷಿನಲ್ಲಿ ಅದಕ್ಕೊಂದು ಗಾದೆಯಿದೆ, "ಆಸೆಗಳು ಕುದುರೆಗಳಾಗಿದ್ದರೆ ಭಿಕ್ಷುಕರು ಸವಾರರಾಗುತ್ತಿದ್ದರು!" ಎಂದು. ಆದುದರಿಂದ ನಮ್ಮ ಬೇಕುಗಳಲ್ಲಿ ಒಂದನೆಯದು ಯಾವುದು, ಎರಡನೆಯದು ಯಾವುದು, ಕಡೆತನಕ ಶಾಂತಿ ಸಂತೋಷಗಳನ್ನು ಮತ್ತು ಸತ್ಕೀರ್ತಿಯನ್ನು ಕೊಡತಕ್ಕವಾವುವು ಎಂಬುದನ್ನು ಹಿರಿಯರಿಂದ ಕೇಳಿ ವಿವೇಚಿಸಿ ಅದರಂತೆ ಬಾಳಲು ಈಗಿನಿಂದ ಯೋಚಿಸಬೇಕು.

ಮೂರನೆಯದಾಗಿ, [illegible] ಕಾರಿನ ಹಾರ್ನನ್ನು [illegible] ಕನ್ನಡದಲ್ಲಿ – ಅದರಲ್ಲೂ ರನ್ನಕವಿಯ ಹಳೆಗನ್ನಡದಲ್ಲಿ- ದನಿಗೂಡಬೇಕು ಎಂದಿರುವುದು [illegible] ನಿನ್ನ ಚಿಕ್ಕ ಅಣ್ಣನಿಗಿರುವ ಕನ್ನಡದ ಪ್ರೇಮವನ್ನು [illegible] ಅನೇಕ [illegible] ಇರುತ್ತದೆ; [illegible] ಪಟ್ಟ [illegible] (ಳಾ) ಗುವೆ. ಇಲ್ಲದಿದ್ದರೆ ಆ ಪ್ರೇಮ ತಪ್ಪು ತಪ್ಪು ಬರೆದು ಪತ್ರಿಕೆಗಳಿಗೆ ಕಳಿಸುವ ಹುಚ್ಚನ್ನು ಹಿಡಿಸುತ್ತದೆ ಎಂಬ ಅರಿವು ಇರುವದಿಲ್ಲ. [illegible] ಆದುದರಿಂದ ನೀನು ಓದನ್ನೇ [illegible] ಕೊಳ್ಳುತ್ತಿರುವೆಯಲ್ಲವೇ? ಅದಕ್ಕೇ ನಿನ್ನನ್ನು ನನ್ನ ಮುದ್ದು ಮರಿ, ಎಂದು ಕರೆಯಬೇಕೆನ್ನಿಸುತ್ತದೆ ನನಗೆ!

ಇತಿ ನಿನ್ನ [illegible]

[illegible]

ಆರು ನೂರು ವರ್ಷಗಳ ಹಿಂದೆ ಬೆಲೆ ನಿಯಂತ್ರಣ

ದಿಲ್ಲಿ ಸುಲ್ತಾನನೊಬ್ಬನ ಪ್ರಯೋಗ

ಎರಡನೆ ಮಹಾಯುದ್ಧದ ಜತೆಗೆ ಬಳುವಳಿಯಾಗಿ ಬಂದ ಬೆಲೆ ನಿಯಂತ್ರಣ ಮತ್ತು ಆದರ ಆಡಳಿತದಲ್ಲಿ ಕಾಣಬರುತಿರುವ ಅಕ್ಷಮತೆ ಇವುಗಳನ್ನು ಕುರಿತು ನಾವು ಬಹಳ ಆಡುತ್ತೀವೆ, ಕೇಳುತ್ತೇವೆ. ಆದರೆ ಆರು ಶತಕಗಳ ಹಿಂದೆ, ಇದೇ ಭಾರತದಲ್ಲಿ ಒಬ್ಬ ದೂರದರ್ಶಿ ಸುಲ್ತಾನ ಈ ಬಗೆಯ ಬೆಲೆ ನಿಯಂತ್ರಣಗಳನ್ನು ಸಫಲವಾಗಿ ಜಾರಿಗೆ ತಂದಿದ್ದನೆಂದು ಶ್ರೀ ಸತ್ಯ ಸಹಾಯ ಶ್ರೀವಾಸ್ತವರು "ಹಿಂದುಸ್ತಾನ ಟೈಮ್ಸ" ಪತ್ರಿಕೆಯಲ್ಲಿ ಬರೆಯುತ್ತಾರೆ.

೧೨೯೬ ನೆ ಇಸವಿಯಲ್ಲಿ ದಿಲ್ಲಿಯ ಸಿಂಹಾಸನವನ್ನೇರಿದ ಅಲ್ಲಾ–ಉದ್ದೀನ ಖಿಲಜಿ (?) ಹಲ ವಿಧದಲ್ಲಿ ಸ್ಮರಣಾರ್ಹನಾಗಿದ್ದಾನೆ. ಸಮರ ದೃಷ್ಟಿಯಲ್ಲಿ ಹೆಚ್ಚು ಸುರಕ್ಷಿತವಾದ ದಕ್ಷಿಣದ ದೊಡ್ಡ ನಗರವೊಂದಕ್ಕೆ ತನ್ನ ರಾಜಧಾನಿಯನ್ನು ವರ್ಗಾಯಿಸಿದ್ದು, ನಾಣ್ಯ ಪದ್ಧತಿಯನ್ನು ಸುಧಾರಿಸಲು ಪ್ರಯತ್ನಿಸಿದ್ದೇ ಮೊದಲಾದ ಕಾರಣಗಳಿಂದ ಅವನನ್ನು ಕೆಲ ಇತಿಹಾಸಕಾರರು ಹುಚ್ಚನೆಂದೂ ಕೆಲವರು ತನ್ನ ಕಾಲವನ್ನು ಮೀರಿನಿಂತ ದೊಡ್ಡ ಪ್ರತಿಭಾಶಾಲಿಯೆಂದೂ ಬಣ್ಣಿಸಿದ್ದಾರೆ. ಆದರೆ ಅವನು ಪ್ರಾರಂಭಿಸಿದ ಕ್ರಮಗಳಲ್ಲೆಲ್ಲ ಹೆಚ್ಚು ಯಶಸ್ವಿಯಾದುದು ಅವನ ಬೆಲೆ ನಿಯಂತ್ರಣ ಪದ್ಧತಿ.

ಸಾಮರಿಕ ಆವಶ್ಯಕತೆ

ಅವನ ರಾಜ್ಯಕಾಲದ ಸಂರಕ್ಷಣದ ಆವಶ್ಯಕತೆಗಳೇ ಅವನ ಹುಲುಸಾದ ಬುದ್ಧಿಯಲ್ಲಿ ಬೆಲೆ ನಿಯಂತ್ರಣದ ಉಪಾಯದ ಆವಿಷ್ಕಾರಕ್ಕೆ ಕಾರಣವಾದವು. ಮಂಗೋಲರ ದಾಳಿಯ ಶಾಶ್ವತ ಭೀತಿಯಿದ್ದ ಆ ಕಾಲದಲ್ಲಿ ಗಡಿಪ್ರದೇಶದಲ್ಲಿ ಅನೇಕಾನೇಕ ದುರ್ಗಗಳನ್ನು ಕಟ್ಟಿಸಿ ಸೈನ್ಯವನ್ನು ಕಾವಲಿರಿಸಬೇಕೆಂದು ಸುಲ್ತಾನನು ಯೋಜಿಸಿದನು. ಆದರೆ ಆ ದುರ್ಗಗಳನ್ನು ಸರಿಯಾಗಿ ರಕ್ಷಿಸಲು ಅಸಂಖ್ಯ ಸೈನಿಕರ ಆವಶ್ಯಕತೆಯಿತ್ತು. ಇಷ್ಟು ಜನರನ್ನು ಶಾಶ್ವತವಾಗಿ ಇಡಬೇಕಾದರೆ ಅವನ ಖಜಾನೆಯಲ್ಲಿದ್ದ ಹೊನ್ನು ಐದು ವರ್ಷಗಳಿಗೆ ಕೂಡ ಸಾಲುವಂತಿರಲಿಲ್ಲ. ಅವರ ಸಂಬಳವನ್ನು ಕಡಿಮೆ ಮಾಡಿದರೆ ಅಸಂತೋಷ ಬೆಳೆದು ಕೆಲಸ ಕೆಡಬಹುದಾಗಿತ್ತು.

ಆದರೆ ಸೈನಿಕರಿಗೆ ಬೇಕಾದ ಆಹಾರ ಅಸ್ತ್ರಶಸ್ತ್ರ ಕುದುರೆಗಳೇ ಮೊದಲಾದ ಪ್ರಾಣಿಗಳು ಇವೆಲ್ಲ ಅಗ್ಗವಾಗಿ ನಿರ್ದಿಷ್ಟ ಬೆಲೆಯಲ್ಲಿ ದೊರೆವಂತಾದರೆ ಅವರ ಸಂಬಳವನ್ನು ಇಳಿಸಿದರೂ ನಡೆಯಬಹುದೆಂದು ಸುಲ್ತಾನನಿಗೆನಿಸಿತು. ಇದಕ್ಕಾಗಿ ಇತಿಹಾಸದಲ್ಲೇ ಮೊದಲನೆ ಬಾರಿಯೋ ಏನೊ, ಸುಲ್ತಾನನು ಅವಶ್ಯ ವಸ್ತುಗಳ ನಿಯಂತ್ರಣವನ್ನು ಕೈಕೊಂಡನಲ್ಲದೆ ಅದನ್ನು ಯಶಸ್ವಿಯಾಗಿ ಉಪಯೋಗದಲ್ಲಿಟ್ಟನೆಂದು ಅವನ ಚರಿತ್ರಕಾರನಾದ್ಯ ಝಿಯಾ ಉದ್ದೀನ್ ಬರ್ನಿ ಬರೆದಿಟ್ಟಿರುವನು. ಸುಲ್ತಾನನ ಸಫಲ ಸಂರಕ್ಷಣ ಧೋರಣ ಮತ್ತು ದಕ್ಷಿಣದಲ್ಲಿ ಅಧಿಕತರ ಪ್ರದೇಶದ ವಿಜಯ ಇವುಗಳನ್ನು ನೋಡಿದರೆ ಬರ್ನಿಯ ಲೇಖ ಸುಳ್ಳಲ್ಲವೆಂದು ವ್ಯಕ್ತವಾಗುವದು.

ಅನ್ನ, ವಸ್ತ್ರ, ಪ್ರಾಣಿಗಳ ನಿಯಂತ್ರಣ

ಸುಲ್ತಾನನು ಆಹಾರ ವಸ್ತುಗಳ ಬೆಲೆಯನ್ನು ದಿಲ್ಲಿ ನಗರದಲ್ಲಿ ಈ ಬಗೆಯಾಗಿ ನಿಯಂತ್ರಿಸಿದ್ದನೆಂದು ಬರ್ನಿ ಉಲ್ಲೇಖಿಸಿದ್ದಾನೆ:

ಗೋದಿ–	ಮಣಕ್ಕೆ	೭॥	ಜಿತಾಲ
ಅಕ್ಕಿ–	,,	೫	,,
ಉದ್ದು–	,,	೫	,,
ಜವೆಗೋದಿ	,,	೪	,,

ಇತ್ಯಾದಿ.

ಮಣ= ೨೨ ಪೌಂ; ಜಿತಾಲ= ೧ ಆಣೆ.

ಸುಲ್ತಾನನು ಕಂದಾಯವನ್ನು ಧಾನ್ಯರೂಪದಲ್ಲಿ ವಸೂಲು ಮಾಡುವ ಮತ್ತು ಯಮುನಾ ತೀರದಲ್ಲೆಲ್ಲ ಧಾನ್ಯವನ್ನು ಕೊಳ್ಳಲು, ಕೆಲ ವೇಳೆ ಬಲವಂತದಿಂದ, ವ್ಯಾಪಾರಿಗಳನ್ನು ಸ್ಥಾಪಿಸುವ ಮೂಲಕ ಪ್ರತಿಯೊಂದು ಪ್ರಮುಖ ಕೇಂದ್ರದಲ್ಲಿ ಸಾಕಷ್ಟು ಧಾನ್ಯಗಳನ್ನು ಕೂಡಿಡುತಿದ್ದನು. ಪೇಟೆಯಲ್ಲಿ ಧಾನ್ಯ ಸಂಗ್ರಹದ ಕೊರತೆ ಕಂಡು ಬಂದಾಗ ತನ್ನ ಸಂಗ್ರಹವನ್ನು ಹೊರತೆಗೆದು ನಿರ್ದಿಷ್ಟ ದರಗಳಲ್ಲಿ ಮಾರುತಿದ್ದನು. ಬರ ಬಿದ್ದಾಗ ಕೂಡ ಬೆಲೆಗಳು ಏರಲವಕಾಶವಿರಲಿಲ್ಲ.

ಬಟ್ಟೆಯನ್ನು ಕೂಡ ನಿಯಂತ್ರಣಕ್ಕೊಳಪಡಿಸಲಾಗಿತ್ತು. ದಿಲ್ಲಿಯಲ್ಲಿ ಒಂದು ವಿಶಿಷ್ಟ ಬಟ್ಟೇ ಪೇಟೆಯನ್ನು ಕಟ್ಟಿಸಿ ಬಟ್ಟೆಯಂಗಡಿಗಳನ್ನೆಲ್ಲ ಅಲ್ಲಿಗೆ ವರ್ಗಾಯಿಸಿದ್ದಲ್ಲದೆ ಅದರ ಹೊರಗೆ ಬಟ್ಟೆ ಮಾರುವವನ್ನು ಪ್ರತಿಬಂಧಿಸಲಾಗಿತ್ತು. ಬಟ್ಟೆ ವ್ಯಾಪಾರಿಗಳೆಲ್ಲರೂ ತಮ್ಮ ಹೆಸರುಗಳನ್ನು "ದಿವಾನೇ– ರಿಯಾಸತ್" ನಲ್ಲಿ ನೊಂದುಗೊಳಿಸಬೇಕಾಗುತಿತ್ತು. ಅಲ್ಲಿ ವ್ಯವಹಾರದ ಸಮಯವನ್ನು ಕೂಡ ನಿರ್ದಿಷ್ಟಪಡಿಸಲಾಗಿತ್ತು. ೨೦ ಲಕ್ಷ ಟಂಕೆಗಳನ್ನು ಕೆಲ ಮುಲ್ತಾನಿ ವ್ಯಾಪಾರಿಗಳಿಗೆ ಮುಂಗಡ ಕೊಟ್ಟು ಸುಲ್ತಾನನು ನಿರ್ದಿಷ್ಟ ಬೆಲೆಗೆ ವಿಶಿಷ್ಟ ಬಟ್ಟೆಗಳನ್ನು ಸಂಗ್ರಹಿಸಿದ್ದನು.

ಕುದುರೆ ಮೊದಲಾದ ಪ್ರಾಣಿಗಳ ಬೆಲೆಗಳನ್ನು ಕೂಡ ನಿರ್ಧರಿಸಲಾಗಿತ್ತು. ಉದಾಹರ

— ೧೨ ಪುಟಕ್ಕೆ



ಅಂಗಹೀನರಿಗೊಂದು ಮೋಟಾರ್: ಲಂಡನ್ನಿನಲ್ಲಿ ಈಚೆಗೆ ನಡೆದ ಸೈಕಲ್ ಮತ್ತು ಮೋಟಾರ ಪ್ರದರ್ಶನದಲ್ಲಿ ಈ ಅಂಗಹೀನರ ಮೋಟಾರೂ ತೋರಿಸಲ್ಪಟ್ಟಿತು. ಅಂಗಹೀನರಿಗೆ ಯಾರ ಸಹಾಯವಿಲ್ಲದೆ ಇದನ್ನು ಏರಲು ಇಳಿಯಲು ಬರುತ್ತದೆ.

ರೂಪರಂಗ

ಹಾಲಿವುಡ್ಡಿನಲ್ಲಿ ತಾರಾನ್ವೇಷಣ

ಶ್ರೀ ಶಂತ್ರುಪಾಡಿ ಗೋಪಾಲಕೃಷ್ಣ ಹೆಗ್ಡೆ, ಮುಂಬಯಿ

ಹಾಲಿವುಡ್ ನಟನಟಿಯರ ಗಣನೆಗಾಗಿ ಅಮೇರಿಕೆಯ ದಿಗ್ದರ್ಶಕರು ಹೂಡುವ ಧನ [illegible] ಚಿತ್ರ ವ್ಯವಸಾಯಿಗಳು ವ್ಯಯಿಸುವ ಧನವ್ಯಯವಾದರೂ ಎಷ್ಟು? "ಚರಿತ್ರ ವರ್ಣನ" ಗಣನೆ ಮಾಡುವ ನಮ್ಮ ಹಿಂದೀಯ ದಿಗ್ದರ್ಶಕರು ಇದರಿಂದ ಪಾಠ ಕಲಿಯಲಿ. ಚಲಚಿತ್ರ ಪ್ರೇಕ್ಷಕರ ಮನರಂಜನೆಗಾಗಿ, ಹಾಲಿವುಡ್ಡಿನಲ್ಲಿ ಒಂದು ಚಿತ್ರದ ತಾರಾಗಣನಕ್ಕಾಗಿ ರೂಪಾಯಿ ೪೫,೦೦,೦೦೦ ವನ್ನು ಖರ್ಚು ಮಾಡುವರು ಎಂದು ತಿಳಿದಾಗ ನಮ್ಮಲ್ಲಿ ಕೆಲವರಿಗೆ ಹೃದಯ ಸ್ತಂಭನವಾಗಲಬಹುದು! ಈ ಲೇಖನವು ಅಮೇರಿಕೆಯ ಚಲನಚಿತ್ರ ತಾರಾಗಣನದ ನೋಟಗಳ ವೈಖರಿಯನ್ನು ನಿವೇದಿಸುವುದು. ಬೇಕಾದ ನಟನೊಬ್ಬ ಅಡಿಗೆ ಮಾಡುವವನೇ ಆಗಿರಬಹುದು! ಇಲ್ಲವೆ ನಟಿಯೊಬ್ಬಳು ಮನೆ ಕೂಲಿಯ ದಾಸಿಯೂ ಆಗಿರಬಹುದು! ನಿರ್ದಿಷ್ಟ ಪರೀಕ್ಷಾ ಪ್ರದರ್ಶನದ ಮೂಲಕ ಅವರೀರ್ವರೂ ದಿಗ್ದರ್ಶಕನನ್ನು ಸಮಾಧಾನ ಪಡಿಸಿದರಾಯಿತು. ಮುಂದೆ ಓದಿ ನೋಡಿ.

ನವನವೀನ ಚಿತ್ರದ ತಾರಾಗಣನೆಗಾಗಿ ನೂರಾರು ಜನ ಧೀರ ತರುಣರು ಊರೂರು ತಿರುಗುವ ಸಾಹಸ ಕೆಲಸವನ್ನು ಕೈಗೊಳ್ಳುವರು. ಎಳೆಯ ಹೆಣ್ಣುಗಂಡುಗಳಿಗಾಗಿ ಅಂದರೆ ಸಿನಿಮಾ ಜನತೆಯ ಅಭಿರುಚಿಗೆ ಬೇಕಾದ ವ್ಯಕ್ತಿಗಳಿಗಾಗಿ ಜನರನ್ನು ಆರಿಸಿ ತರುವರು. ನಟಿಯೊಬ್ಬಳು ಸ್ವರೂಪ ಸುಂದರಿಯಾಗಿ ತನ್ನ ಸೌಂದರ್ಯದಿಂದ ಇತರರ ಮನಸ್ಸನ್ನು ಸೂರೆಮಾಡುವಳೇ ಆಗಬೇಕೆಂದಿಲ್ಲ. ಅಥವಾ ನಟನೊಬ್ಬನು ಚಲಚಿತ್ರ ಅಭಿನಯ ಕಲೆಯಲ್ಲಿ ನಿಪುಣನಾದವನೇ ಆಗಬೇಕೆಂದಿಲ್ಲ! ಅವನ ಅಥವಾ ಅವಳ ದೇಹರೂಪಗಳು ಬೇರೆ ಯುವರನ್ನು ಮರುಳು ಮಾಡಿ ಮುಗ್ಧಗೊಳಿಸ ಬೇಕೆಂದೂ ಇಲ್ಲ. ಅವರ ಉದ್ದೇಶವು ಬೇರೆ. ಅದೆಲ್ಲವೂ ಲಕ್ಷಗಟ್ಟಲೆ ಸಿನಿಮಾ ಜನತೆಯ ಅಂತರಂಗವನ್ನು ತೃಪ್ತಿಪಡಿಸಲಿಕ್ಕಾಗಿ.... ಶಾಂತಿಗಾಗಿ! ನೂರಾರು ಜನರನ್ನು ಹುಡುಕಿ ತಂದರೂ ಅವರಲ್ಲಿ ನಟ ಅಥವಾ ನಟಿಯೊಬ್ಬರಿಗೆ ಕನಿಷ್ಠವೆಂದರೂ ತಿಂಗಳೊಂದರ ರೂ. ೧೫,೦೦೦ ಸಂಬಳವನ್ನು ಕೊಡಬೇಕಾಗುವುದು.

ಹೆಚ್ಚಾಗಿ ಸಿನಿಮಾ ನಟನಟಿಯರ ಭವಿಷ್ಯವು ಚೆನ್ನಾಗಿರುವದಿಲ್ಲ. ಇಂಗ್ಲಂಡಿನ ಒಂದು ದೊಡ್ಡ ಸ್ಟುಡಿಯೋವು ೩೦,೦೦೦ ಜನರನ್ನು ಪರೀಕ್ಷೆಗಾಗಿ ಸ್ವಾಗತಿಸುವುದಂತೆ. ಅಮೇರಿಕೆಯ ಹಾಲಿವುಡ್ಡಿನಲ್ಲಿ ಅದರ ಇಮ್ಮಡಿಯೋ ಮುಮ್ಮಡಿಯೋ. ಹೀಗಿದ್ದರೂ ೬೦,೦೦೦ ಸಂಪರ್ಶನಗಳಲ್ಲಿ ಹೆಚ್ಚು ಕಡಿಮೆ ಕೇವಲ ಇಪ್ಪತ್ತು ಜನರಿಂದ ವಾಗ್ದಾನ ಮಾಡಿಸಿಕೊಳ್ಳುವರು. ಇವರಲ್ಲಿ ಒಬ್ಬೊಬ್ಬರು ಮುಂದೆ ಜೆಸರಾಂತ ನಟನಟಿಯರಾಗಿ ವಿರಾಜಿಸಬಹುದು. ಚುಟುಕಿನಲ್ಲಿ ಹೇಳುವದಾದರೆ ಈ ಎರಡು ಅಮೂಲ್ಯ ವ್ಯಕ್ತಿಗಳಿಗಾಗಿ ಒಂದು ಚಿತ್ರಾಲಯಕ್ಕೆ ೪೫,೦೦,೦೦೦ ರೂ. ಗಳ ವ್ಯಯಪಟ್ಟಿಯು ತಯಾರಾಗುತ್ತದೆ.

ಇದೀಗ ಇಲ್ಲೊಂದು ಚಿಕ್ಕ ಕತೆ ಕೆಲವು ತಿಂಗಳ ಹಿಂದೊಮ್ಮೆ ಹೆಸರಾಂತ ದಿಗ್ದರ್ಶಕ ವಾಲ್ಟರ್ ವಾಂಜರ್ ಎಂಬವರು ಒಬ್ಬ ನಟಿಗಾಗಿ ಬಹಳ ಪ್ರಯತ್ನ ಮಾಡಿದರು. ಊರೂರು ಹುಡುಕಿ ಶೋಧಿಸಿದರು. ನಾಟಕ ಕಂಪನಿಗಳಿಗೆ ಬರೆದು ತಿಳಿಸಿದರು. ವರ್ತಮಾನ ಪತ್ರಿಕೆಗಳಲ್ಲಿ ಜಾಹಿರಾತು ಕೊಟ್ಟು ನೋಡಿದರು. ನಾಟಕಶಾಲಾ ಕೇಂದ್ರಗಳನ್ನು ವಿಚಾರಿಸಿದರು. ಒಟ್ಟು ಖರ್ಚಾದ ಹಣವನ್ನು ವೆಚ್ಚ ಮಾಡಿದರು. ಕೆಲವು ಸಾವಿರ ಹುಡುಗಿಯರ ಅಂಕ ಪರೀಕ್ಷೆಗಾಗಿ ಕರೆಯಿಸಿದರು. ೩೮ ಬಾಲಿಕೆಯರನ್ನು ಚಿತ್ರ ಪರೀಕ್ಷೆಗೆ ಒಳಪಡಿಸಿದರು. ಕೊನೆಗೆ ಐದು ಹುಡುಗಿಯರನ್ನು ಆಮೇರಿ[illegible]

[illegible]

ದರೆ. [illegible] ಆಯಿತಲ್ಲ!

ಇನ್ನೊಮ್ಮೆ ಈ ರೀತಿ ನಡೆಯಿತು. ಎಳೆಯ ತರುಣ ತರುಣಿಯರು ನಾಟಕಶಾಲೆಗಳಲ್ಲಿ, ಪ್ರದರ್ಶನಮಂದಿರಗಳಲ್ಲಿ ಕೆಲಸ ಮಾಡಿದವರಾದರೆ ಅವರಲ್ಲಿ ಸ್ವಾಭಾವಿಕವಾದ ಅಭಿನಯಾಭಿರುಚಿ, ವಾಕ್ಚಾತುರ್ಯ, ನಿಪುಣತೆ, ಇತ್ಯಾದಿಗಳು ಇರಬಹುದು, ಆದರೆ ಅವರ ರೂಪ ಲಾವಣ್ಯಗಳು ಚಲಚಿತ್ರದಲ್ಲಿ ಬದಲಾಗಬಹುದು. ಹೀಗೆ ಒಮ್ಮೆ ಒಂದು ಹುಡುಗಿಯ ಅವಶ್ಯಕತೆಯಾಯಿತು. ಮೊದಲು ಆಕೆಯ ಭಾವಚಿತ್ರವನ್ನು ತೆಗೆದು ಅನಂತರ ಕೆಲವು ತರತರದ ಅಲಂಕಾರಿಕ ಬಟ್ಟೆಬರೆಗಳನ್ನು ಉಟ್ಟುತೊಟ್ಟುಕೊಂಡು ಭಾವಚಿತ್ರವನ್ನು ತೆಗೆದಲ್ಲಿ ಕೇವಲ ಅವಳ ಬಟ್ಟೆಯ ಬದಲಾವಣೆಯಿಂದ, ರೂಪ, ವೇಷ, ಒಯ್ಯಾರಗಳೂ ಬದಲಾಗುವುವು ಎಂಬುದನ್ನು ಚಿತ್ರದಲ್ಲಿ ತೋರಿಸಬೇಕಾಗಿತ್ತು. ಹುಡುಕಾಡಿ ಕೊನೆಗೆ ಸಿಕ್ಕಿದವಳೊಬ್ಬಳು ಯಾವುದೋ ಹೋಟೇಲೊಂದರಲ್ಲಿ ಕೆಲಸ ಮಾಡುತ್ತಿದ್ದಳಾಕೆ! ಅವಳ ಭಾವಚಿತ್ರವನ್ನು ತೆಗೆದು ಪರೀಕ್ಷಿಸಿ ಕೆಲವೇ ತಾಸುಗಳಲ್ಲಿ ಅವಳೊಡನೆ ಒಪ್ಪಂದ ಮಾಡಿಕೊಂಡರು. ಅದು ವರೆಗೆ ವಾರ ಒಂದರ ರೂ ೧೫ ಕ್ಕೆ ಕೆಲಸ ಮಾಡುತ್ತಿದ್ದ ಹುಡುಗಿ ಈಗ ರೂ ೧೫,೦೦೦ ಸಂಪಾದಿಸುತ್ತಾಳೆ!

ಹೆಂಗಸರಿಗಂತೂ ಹತ್ತು ಪಾಲು ಹೆಚ್ಚು. ಗಂಡಸರು ಸಿನಿಮಾ ಪರೀಕ್ಷೆಗೆ ಹೋಗುತ್ತಾರೆ. ತಾರಾನ್ವೇಷಣವೆಂದರೆ ಅದೊಂದು ಪರೀಕ್ಷೆಯೆನ್ನುವುದಕ್ಕಿಂತಲೂ ಸ್ಪರ್ಧೆಯೆನ್ನುವುದು ಲೇಸು. ಅಷ್ಟು ಜನರಿಗದರಲ್ಲೊಂದು ಆಸಕ್ತಿ. ಕಾರಣವೇನಿರಬಹುದು? ಒಂದೆರಡು ಕಪ್ಪು ಪುಕ್ಕಟೆ ಚಾ ಪಾನೀಯಕ್ಕಾಗಿ ಅವರು ಮನ ಸೋಲಲಿಕ್ಕಿಲ್ಲ. ಸಿನಿಮಾ ನಟನಟಿಯರೊಡನೆ ಆಟ ಕೂಟದ ಅವಕಾಶ ಸಿಗಬಹುದೆಂದು ಇರಬಹುದು. ಹಾಲೀವುಡ್ಡಿನಲ್ಲಿ ಎಲ್ಲಿ ಒಬ್ಬಳು ಚೆಲುವಿನ ಹುಡುಗಿ ಹೋಗುವಳೋ ಅವಳೊಡನೆ ಯಾರಾದರೊಬ್ಬ ಚೆಲುವನನ್ನು ಕಾಣದೇ ಕಾಣಬಹುದು.

ನಗು, ತಾರುಣ್ಯ, ಸೌಂದರ್ಯ, ತಮಾಷೆ ಇವುಗಳೆಲ್ಲ ಸಿನಿಮಾ ಜನತೆಯ ಅಥವಾ ಪ್ರೇಕ್ಷಕರ ಅಭಿರುಚಿಗಳು. ಅಂತಹರು ಶಾಲೆ ಕಾಲೇಜುಗಳಲ್ಲಿರಬಹುದು; ಹೋಟೇಲು, ಆಫೀಸುಗಳಲ್ಲಿರಬಹುದು. ಹೋಟೇಲಿನಲ್ಲಿಯ ಹುಡುಗಿ ಬಾಹ್ಯ ಸೌಂದರ್ಯದಲ್ಲಿ ಚೆನ್ನಾಗಿರಬಹುದು. ಆದರೆ ಚಲಚಿತ್ರಕ್ಕೆಂದು ಅವಳನ್ನು ಆರಿಸಿದಲ್ಲಿ ಕೆಲವೊಮ್ಮೆ ಅವಳ ಭಾವಚಿತ್ರವೇ ಬದಲಾಗಿ ಚಿತ್ರಪಟ ಚೆನ್ನಾಗದು. ಶಾಲೆಯ ಹುಡುಗಿಯರ ತಾರಾ ಪರೀಕ್ಷೆಯು ಅವರ ಶಾಲೆಯ ಗುಣಗಳಿಂದ ಎಣಿಸಲಾಗುವುದಿಲ್ಲ. ಅವಳು ಗಣಿತದಲ್ಲಿ ಮುಂದಿರಬಹುದು! ಆದರೆ ಕುಣಿತದಲ್ಲಿ? ಮಾತಿನಲ್ಲಿ ವಾಚಾಳಿಯಿರಬಹುದು! ಆದರೆ ಸಂಗೀತದಲ್ಲಿ? ಸಂಗೀತದಲ್ಲಿ ಯಾವಳು ನಡೆನುಡಿಯಲ್ಲಿ ಕಂಡು ಹುಚ್ಚು ಹವ್ಯಾಸ ಮೋಡಿಗಳನ್ನು ಪ್ರದರ್ಶಿಸುವಳೋ ಅವಳಿಗೆ ಪ್ರಥಮ ಸಂದರ್ಭವು ಸಿಗುವುದು. ಕಾರಣ ಅವಳಲ್ಲಿ ಬಾಲ್ಯದಿಂದಲೂ ಉಕ್ಕಿ ಸೊಕ್ಕಿ ಬಂದ ಅಭಿರುಚಿ ಇದೆಯಲ್ಲಿ ಸಂಗೀತದಲ್ಲಿ! ಒಂದೇ ಮಾತಿನಲ್ಲಿ ಹೇಳುವುದಾದರೆ ಚಲಚಿತ್ರವು ಜನರು ಮೆಚ್ಚುವಂತಹದಾಗಬೇಕಾದರೆ ಕುರಿಯನ್ನು ನರಿ ಮಾಡಿದರಾಗದು. ನರಿಯನ್ನು ಕುರಿ ಮಾಡಿದರಾಗದು. ಯಾವ ಯಾವ ಪಾತ್ರಕ್ಕೆ ಎಂತೆಂಥವ ವ್ಯಕ್ತಿಗಳು ಬೇಕೋ ಅಂತಹರನ್ನೇ ಹೆಕ್ಕಿದರೆ ವಾಸಿ. ಅರಿತಿದ್ದರೆ ಅದು ಚಿತ್ರ. ಇಲ್ಲವಾದರೆ ವ್ಯರ್ಥ.

ಭಾರತ ಐತಿಹಾಸಿಕ ಪುರಾತನ ಗ್ರಂಥ ಸಮಿತಿಯ ಸಭೆಯು ದಿಲ್ಲಿಯಲ್ಲಿ ಡಿಸೆಂಬರ ತಾ ೨೩, ೨೪ ಈ ಎರಡು ದಿನ ಕೂಡಿ, ಈಗ ಬ್ರಿಟನದಲ್ಲಿದ್ದ ಭಾರತೀಯ ಇತಿಹಾಸಕ್ಕೆ ಸಂಬಂಧಿಸಿದ ಎಲ್ಲ ಹಳೆಯ ಪುಸ್ತಕಗಳನ್ನೂ ಕಾಗದ ಪತ್ರಗಳನ್ನೂ ತಿರುಗಿ ಭಾರತಕ್ಕೆ ಕೊಡಬೇಕೆಂದು ಹಿಂದುಸ್ತಾನ ಸರಕಾರವು ಇಂಗ್ಲಿಶ್ ಸರಕಾರಕ್ಕೆ ಕೇಳಬೇಕೆಂಬ ಗೊತ್ತುವಳಿಯನ್ನು ಸ್ವೀಕರಿಸಿತು. ಮುಂದಿನ ಸಭೆಗೆ ಒರಿಸ್ಸಾ ಸರಕಾರವು ಆಮಂತ್ರಣ ಕೊಟ್ಟದ್ದು ಅದು ಕಟಕದಲ್ಲಿ ಸೇರುವದು.

ಆರು ನೂರು ವರ್ಷಗಳ ಹಿಂದೆ ಬೆಲೆ ನಿಯಂತ್ರಣ

(೧೧ ನೆಯ ಪುಟದಿಂದ)

ಜೆಗೆ ಉತ್ತಮ ಜಾತಿಯ ಕುದುರೆಗೆ ೧೦೦-೧೨೦ ಟಂಕೆ, ಗಾಡಿಯೆತ್ತುಗಳಿಗೆ ೪-೫ ಟಂಕೆ, ಹಿಂಡುವ ದನಕ್ಕೆ ೩-೪ ಟಂಕೆ, ಎಮ್ಮೆಗೆ ೧೦-೧೨ ಟಂಕೆ, ಆಡಿಗೆ ೧೦-೧೪ ಜಿತಾಲು ಬೆಲೆಯೆಂದು ಗೊತ್ತಾಗಿತ್ತು. ಗುಲಾಮ ವ್ಯಾಪಾರವಿನ್ನೂ ನಡೆಯುತ್ತಿದ್ದ ಆ ಕಾಲದಲ್ಲಿ ಗುಲಾಮರ ಬೆಲೆಯನ್ನು ಕೂಡ ಅವರ ರೂಪ, ಲಿಂಗ, ವಯಸ್ಸುಗಳನ್ನನುಸರಿಸಿ ನಿರ್ಧರಿಸಲಾಗಿತ್ತು.

ದಂಡ ನೀತಿ

ನಿಯಂತ್ರಣವನ್ನು ಪರಿಣಾಮಕರವಾಗಿ ಆಚರಣೆಯಲ್ಲಿಡುವ ಸಲುವಾಗಿ ಮಲಿಕ್–ಕಾದೇ–ವುಲ್ ಎಂಬವನನ್ನು ಶಹರಾಯಿ ಮಂಡಿ ಇಲ್ಲವೆ ಪೇಟೆ ನಿಯಂತ್ರಕನಾಗಿ ಸುಲ್ತಾನನು ನೇಮಿಸಿದ್ದನು ಅವನು ಲಂಚಕ್ಕೆ ಕೈಯೊಡ್ಡದಂತೆ ಅವನಿಗೆ ಜಹಗೀರನ್ನು ದಯಪಾಲಿಸಲಾಗಿತ್ತು. ಅವನ ಕೈಕೆಳಗೆ ಒಳ್ಳೆಯ ಸಂಬಳ ಪಡೆಯುವ ನೂರಾರು ನಿಯಂತ್ರಣಾಧಿಕಾರಿಗಳು ಸತತವಾಗಿ ಶ್ರಮಿಸುತ್ತಿದ್ದರು. ಪ್ರತಿಯೊಬ್ಬ ನಾಗರಿಕನಿಗೆ ಒಮ್ಮೆಗೆ ಅರ್ಧ ಮಣ ಧಾನ್ಯ ಕೊಳ್ಳುವ ಹಕ್ಕಿತ್ತು. ಅದು ದೊರೆಯದಂತೆ ಅಥವಾ ಅದನ್ನು ದೊರಕಿಸಲು ತೊಂದರೆಯಾದಂತೆ ಕಂಡುಬಂದರೆ ನಿಯಂತ್ರಣಾಧಿಕಾರಿಗಳನ್ನು ಹೊಣೆ ಹಿಡಿಯಲಾಗುತಿತ್ತು.

ಲಾಭ ಹೊಡೆಯುವ ಸಲುವಾಗಿ ವಸ್ತುಗಳನ್ನು ಸಂಗ್ರಹಿಸಿಟ್ಟವರಿಗೆ ಉಗ್ರವಾದ ಶಾಸನ ಮಾಡಲಾಗಿತ್ತು. ನವಾಬ ಜನರು ಕೂಡ ಧಾನ್ಯವನ್ನು ಸಂಗ್ರಹಿಸಿಡುವಂತಿರಲಿಲ್ಲ. ಅವರ ಅಧಿಕಾರಕ್ಷೇತ್ರದಲ್ಲಿ ಕಳ್ಳ ಸಂಗ್ರಹವೆಲ್ಲಾದರೂ ಸಿಕ್ಕಿದರೆ ಅವರೇ ಅದರ ತಪ್ಪಿಗೆ ಬಾಧ್ಯರಾಗುತಿದ್ದರು.

ಬೆಲೆ ಹೆಚ್ಚಿಸಲಾರದ ಹೊಟ್ಟೆಕಿಚ್ಚಿಗೆ ಒಮ್ಮೊಮ್ಮೆ ವ್ಯಾಪಾರಿಗಳು ತೂಕದಲ್ಲಿ ತಗಲು ಮಾಡುತಿದ್ದರು. ಇದೂ ದಂಡನಾರ್ಹವಾಗಿ ಮಾಡಲ್ಪಟ್ಟಿತ್ತು. ಪದೇ ಪದೇ ತೂಕದಲ್ಲಿ ತಗಲುಮಾಡಿದ ಸಿಕ್ಕಿ ಬಿದ್ದವನು ತಗಲು ಮಾಡಿದ ತೂಕಕ್ಕೆ ಸರಿಹೋಗುವಷ್ಟು ಮಾಂಸವನ್ನು ತನ್ನ ದೇಹದಿಂದ ಕೊಡಬೇಕಾದ ಪ್ರಸಂಗಗಳೂ ಬಂದಿದ್ದವು

ಈ ಪ್ರಕಾರವಾಗಿ ಯಶಸ್ವಿಯಾದ ಬೆಲೆ ನಿಯಂತ್ರಣವನ್ನು ಸುಲ್ತಾನನು ಸಾವಕಾಶವಾಗಿ ವಿಸ್ತರಿಸುತ್ತ ಹೋಗಿ ರೊಟ್ಟಿ, ಮಿಠಾಯಿ, ಕಬ್ಬು, ಮೀನು, ವೀಳ್ಯದೆಲೆಗಳನ್ನು ಕೂಡ ನಿಯಂತ್ರಣಕ್ಕೊಳಪಡಿಸಲು ಸಮರ್ಥನಾದ ನೆಂದು ಉಲ್ಲೇಖವಿದೆ.



ಭಾರತಕ್ಕೆ ಹೊಸ ಉಗಿಹಡಗುಗಳು: [illegible] ಕರಾಚಿಗಳ ನಡುವೆ ಸರಕುಗಳನ್ನೂ ಪ್ರಯಾಣಿಕರನ್ನೂ ಒಯ್ಯಲು ಈಚೆಗೆ [illegible] ಸಾಬರಮತಿಯೆಂಬ ಹಡಗುಗಳನ್ನು ಕಟ್ಟಲಾಯಿತು. [illegible] ಬಂದರದಿಂದ ಸರಸ್ವತಿ ಹಡಗನ್ನು ಸಮುದ್ರಕ್ಕಿಳಿಸಲಾಗಿನ ಚಿತ್ರ.

ಕರ್ನಾಟಕ

ಧಾರವಾಡ

ಕೊಪ್ಪಳದ ರಾಷ್ಟ್ರೀಯ ಸ್ವಯಂಸೇವಕ ಸಂಘದ ಏಳು ಕಾರ್ಯಕರ್ತರು ಕಳೆದ ರವಿವಾರ ಹುಬ್ಬಳ್ಳಿಯಲ್ಲಿ ದುರ್ಗದ ಬೈಲಿನಲ್ಲಿ ಜಯ ಘೋಷ ಮಾಡಿ ಹಸ್ತಪತ್ರಿಕೆಗಳನ್ನು ಹಂಚಿದ್ದಕ್ಕಾಗಿ ೩ ತಿಂಗಳ ಶಿಕ್ಷೆ ಮತ್ತು ೧೫೦ ರೂ. ದಂಡ ಕೊಡದಿದ್ದರೆ ಮತ್ತೆ ೧½ ತಿಂಗಳ ಶಿಕ್ಷೆ ವಿಧಿಸಲಾಯಿತು.

ತಾರಾನಾಥ ವಕ್ತೃತ್ವ ಸ್ಪರ್ಧೆಯಲ್ಲಿ ವಿಲಿಂಗ್ಡನ್ ಕಾಲೇಜಿನ ವಿದ್ಯಾರ್ಥಿ ಎಸ್. ಪಿ. ಭಟ್ಟ ಇವರಿಗೆ ೧೫ ರೂ. ಗಳ ಪ್ರಥಮ ಬಹುಮಾನ ಧಾರವಾಡ ಒಕ್ಕಲತನ ಕಾಲೇಜಿನ ಬಸವಣ್ಣೆಪ್ಪ ದೊಡ್ಡಪ್ಪನವರ ಇವರಿಗೆ ೧೦ ರೂ. ಗಳ ಎರಡನೆ ಬಹುಮಾನಗಳು ದೊರೆತವು.

ನವಂಬರ ತಿಂಗಳ ಕೊನೆಯವರೆಗೆ ಕರ್ನಾಟಕದಲ್ಲಿ೨೭೭೦೬೯-೪-೪ ಜೈಕೂಡಿದ್ದು ಕೇಂದ್ರ ಸಮಿತಿಯವರು ಕರ್ನಾಟಕದಲ್ಲಿ೧೪೩೩೩-೧-೫ ರೂ. ಕೂಡಿದೆ ಎಂದು ಪ್ರಸಿದ್ಧಿಸಿದ ಅಂಕಿ ಜೂನ ಕೊನೆಯ ವರೆಗಿನವು; ಸಮಿತಿಯ ಕಾರಕೂನರಲ್ಲಿ ಆಗಾಗ ಬದಲಿಯಾದ್ದರಿಂದ ವಸೂಲಾದವುಗಳ ಯಾದಿಯನ್ನು ಕಳಿಸುವದಾಗಿಲ್ಲ ಎಂದು ಮುಂತಾಗಿ ಕರ್ನಾಟಕ ಗಾಂಧೀ ರಾಷ್ಟ್ರೀಯ ಸ್ಮಾರಕ ಸಮಿತಿಯವರು ಪ್ರಸಿದ್ಧಿಸಿದ್ದಾರೆ.

ಹಿಂದುಸ್ತಾನೀ ಸೇವಾದಲದ ರೌಪ್ಯ ಮಹೋತ್ಸವದ ನಿಮಿತ್ತ ಶ್ರೀ ಬಿಂದುಮಾಧವ ಬುರ್ಲಿ ಮತ್ತು. ರಾ. ವೆ. ಕರಗುದರಿಯವರು ಸೇವಾದಲ ಸಂಚಿಕೆಯನ್ನು ಸಿದ್ಧಪಡಿಸಿದ್ದು ಅದರ ಪ್ರಕಾಶನ ಸಮಾರಂಭವು ರಜತ ಮಹೋತ್ಸವದ ದಿನ ಅಂದರೆ ದಿಸೆಂಬರ ೨೮ ಮುಂಜಾನೆ ಜಯಹಿಂದ ಕಾರ್ಯಾಲಯದಲ್ಲಿ ಶ್ರೀಮತಿ ಉಮಾಬಾಯಿ ಕುಂದಾಪುರ ಇವರ ಹಸ್ತದಿಂದ ಜರುಗಿತು.

ಕರ್ನಾಟಕ ಪ್ರಾಂತೀಯ ಕಾಂಗ್ರೆಸಸಮಿತಿ, ಏಕೀಕರಣ ಮಹಾಸಮಿತಿ, ಕರ್ನಾಟಕ ಶಾಸನ ಸಭಾ ಸದಸ್ಯರು ಮೊದಲಾದವರ ದೊಡ್ಡ ಪ್ರಮಾಣದ ಪ್ರಾತಿನಿಧಿಕ ಸಭೆಯೊಂದನ್ನು ಇದೇ ಜನೆವರಿ ಎರಡನೆಯ ವಾರಾಂತ್ಯದಲ್ಲಿ ದಾವಣಗೆರೆಯಲ್ಲಿ ಕರೆದು ಕನ್ನಡಿಗ ಮುಂದಿನ ಕಾರ್ಯ ಧೋರಣೆಯ ಸ್ವರೂಪವನ್ನು ಗೊತ್ತುಪಡಿಸಲಾಗುವದು. ಈ ಬಗ್ಗೆ ನಿಶ್ಚಿತ ತಾರೀಖು ಮುಂತಾದ್ದನ್ನು ಮುಂದೆ ಪ್ರಸಿದ್ಧಿಸಲಾಗುವದು ಎಂದು ಕರ್ನಾಟಕ ಏಕೀಕರಣ ಮಹಾ ಸಮಿತಿಯವರು ಪ್ರಕಟಿಸುತ್ತಾರೆ.

ವತನದಾರ ಕುಲಕರ್ಣಿಯರ ಕಾರ್ಯ ಪದ್ಧತಿಯಿಂದ ಸರಕಾರವು ಸಂತುಷ್ಟವಾಗಿಲ್ಲ, ಅವರ ಸ್ಥಳದಲ್ಲಿ ತಲಾಟಿಯರನ್ನು ನೇಮಿಸುವದು ಸರಕಾರದ ಉದ್ದೇಶವಿದೆ. ಆದುದರಿಂದ ಕುಲಕರ್ಣಿಯರ ಪಗಾರದ ಪೋಟಗಿಯನ್ನು ಹೆಚ್ಚಿಸುವ ಇಚ್ಛೆ ಇಲ್ಲ ಎಂದು ಮುಂತಾಗಿ ಮುಂಬಯಿ ಸರಕಾರದವರು ನವಲಗುಂದ ವತನದಾರ ಕುಲಕರ್ಣಿ ಸಂಘದವರ ಪತ್ರಕ್ಕೆ ಉತ್ತರರೂಪವಾಗಿ ಬರೆದಿರುತ್ತಾರೆ.

ನವಲಗುಂದ ಮುನಿಸಿಪಾಲಿಟಿಯ ತ್ರೈವಾರ್ಷಿಕ ಚುನಾವಣೆಯಲ್ಲಿ ಸಿವಿಲ್ ಬೋರ್ಡಿನವರು ಒಟ್ಟು ೧೨ ಸ್ಥಳಗಳಲ್ಲಿ ೯ ಜನರು ಆರಿಸಿ ಬಂದಿರುವರು.

ಉತ್ತರ ಕನ್ನಡ

ಶಾಲೆಗೆ ಹೋಗುವ ಚಿಕ್ಕ ಮಕ್ಕಳಿಗೆಲ್ಲ ಮಧ್ಯಾಹ್ನದ ಊಟ ಕೊಡುವ ಯೋಜನೆಯನ್ನು ಮುಂಬಯಿ ಸರಕಾರದವರು ವಿಚಾರಿಸುತ್ತಿರುವರು ಎಂದು ಮುಂತಾಗಿ ಕಾರವಾರದಲ್ಲಿ ಶಾಲಾ ಆರೋಗ್ಯ ಯೋಜನೆಯ ವೈದ್ಯಕೀಯ ಅಧಿಕಾರಿಗಳಾದ ಡಿ ಎಸ್ ಎಂ ದವೆಯವರು ಸಾರ್ವಜನಿಕ ಸಭೆಯೊಂದರಲ್ಲಿ ಹೇಳಿದರು. ಈ ಯೋಜನೆಗೆ ಪ್ರಾರಂಭಕ್ಕೆ ಏನಿಲ್ಲೆಂದರೂ ೧೦ ಲಕ್ಷ ರೂಪಾಯಿ ವೆಚ್ಚ ಬರಬಹುದೆಂದೂ ಅವರು ಹೇಳಿದರು.

೨೮ ನೇ ತಾರೀಖಿನ ದಿನ ಕಾರವಾರದಲ್ಲಿ ೧೦ ಜನ ಆರ್ ಎಸ್ ಎಸ್ ಕಾರ್ಯಕರ್ತರು ಕಾಯದೇಭಂಗ ಮಾಡುವದಕ್ಕಾಗಿ ಮಾರುತಿ ದೇವರ ಗುಡಿಯಲ್ಲಿ ಕಲೆತದ್ದರಿಂದ ಪೋಲೀಸರು ಅವರನ್ನು ಸೆರೆಹಿಡಿದರು. ಬಂಧಿತರಾದವರಲ್ಲಿ ಒಬ್ಬ ಸರಕಾರೀ ನವಕರನಿರುವನು.

ಉತ್ತರ ಕನ್ನಡ ಜಿಲ್ಹಾ ಒಕ್ಕಲತನ ಹಾಗು ದನಕರುಗಳ ಪ್ರದರ್ಶನವನ್ನು ಫೆಬ್ರುವರಿ ೧೨ಕ್ಕೆ ಏರ್ಪಡಿಸಲು ನಿರ್ಧರಿಸಲಾಗಿದೆ. ಉದ್ಘಾಟನ ಸಮಾರಂಭವನ್ನು ಜರುಗಿಸಲು ಮುಂಬಯಿ ಮುಖ್ಯ ಮಂತ್ರಿಗಳಿಗೆ ಬಿನ್ನವಿಸಲಾಗಿದೆ. ಅವರು ಒಲ್ಲೆಂದರೆ ಶ್ರೀ ವೈಕುಂಠಲಾಲ ಮೆಹತಾ ಇಲ್ಲವೆ ಎಂ ಪಿ ಪಾಟೀಲರನ್ನು ಕೇಳಿಕೊಳ್ಳಲಾಗುವದು.

ದ. ಕನ್ನಡ

ಮದ್ರಾಸಿನ ವಿಧಿ ಮಂಡಲದ ಸದಸ್ಯರಾದ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ದರ್ ಸಮಿತಿಯ ವರದಿಯನ್ನು ಖಂಡಿಸಿ ಹೇಳಿಕೆಯೊಂದನ್ನಿತ್ತಿದ್ದಾರೆ. "ದರ್ ಸಮಿತಿಯವರು ಭಾಷಾ ಪ್ರಾಂತ ರಚನೆಯ ಬಗ್ಗೆ ಮದ್ರಾಸ ಮತ್ತು ಮುಂಬಯಿ ಶಾಸನ ಸಭೆಗಳು ಈ ಮೊದಲು ಸ್ವೀಕರಿಸಿದ ಗೊತ್ತುವಳಿಗಳನ್ನೂ ದಕ್ಷಿಣ ಹಿಂದುಸ್ತಾನದ ಜನತೆಯ ಅಭಿಪ್ರಾಯವನ್ನೂ ಸಂಪೂರ್ಣವಾಗಿ ನಿರಾಕರಿಸಿದ್ದಾರೆ. ಕಾಂಗ್ರೆಸು ನೇಮಿಸಿದ ಮೂವರು ಸದಸ್ಯರ ಸಮಿತಿಯು ಈ ಸಮಸ್ಯೆಯನ್ನು ಸರಿಯಾಗಿ ಬಗೆಹರಿಸಬಹುದೆಂದು ನಂಬೋಣ. ಇಲ್ಲವಾದರೆ ಹೊಸ ಘಟನೆಯು ಆಂಧ್ರ, ಕರ್ನಾಟಕಗಳಲ್ಲಾದರೂ ಸಫಲವಾಗಲಾರದು." ಎಂದು ಶ್ರೀ ಹೆಗ್ಗಡೆಯವರು ತಮ್ಮ ಹೇಳಿಕೆಯಲ್ಲಿ ಹೇಳಿದ್ದಾರೆ. ಈ ಕುರಿತು ಶ್ರೀ ಹೆಗ್ಗಡೆಯವರು ಮದ್ರಾಸಿನ ವಿಧಿ ಮಂಡಲದಲ್ಲಿ ಗೊತ್ತುವಳಿಯೊಂದನ್ನು ಮಂಡಿಸಲಿರುವರು.

ಮದ್ರಾಸು ಶಾಸನ ಸಭೆಯ ಸದಸ್ಯರಾದ ಶ್ರೀ ಕೆ. ಆರ್ ಕಾರಂತರು ದರ್ ಸಮಿತಿಯ ವರದಿಯ ಬಗ್ಗೆ ಗೊತ್ತುವಳಿಯೊಂದನ್ನು ಶಾಸನ ಸಭೆಯಲ್ಲಿ ಮಂಡಿಸಲಿರುವರೆಂದು ತಿಳಿಯುತ್ತದೆ.

ಜೋಧಪುರದ ಡಿ. ಪಿ. ಆಯ್. ಯವರಾದ ಡಾ. ಕೆ. ಎನ್. ಕಿಣಿಯವರು ತಾ. ೧೨ ರಂದು ಜಿಲ್ಹಾ ಅಧ್ಯಾಪಕ ಸಂಘದ ನೇತೃತ್ವದಲ್ಲಿ "ಇಂದಿನ ಶಿಕ್ಷಣ ಸಮಸ್ಯೆಗಳು" ಎಂಬ ವಿಷಯದ ಮೇಲೆ ಭಾಷಣವಿತ್ತರು. ಅವರು ತಮ್ಮ ಭಾಷಣದಲ್ಲಿ ನರ್ಸರಿ ಶಾಲೆಗಳು, ಬುನಾದಿ ಶಾಲೆಗಳು, ಪ್ರೌಢ ಶಾಲೆಗಳು ಮೊದಲಾದವುಗಳ ಕುರಿತು ವಿವರಿಸಿದರು. ಶ್ರೀ ಎಂ. ಎಸ್. ಪೀತಾಂಬರರಾಯರು ಅಭಿನಂದಿಸಿದರು.

ಮಂಗಳೂರಿನ ಬಿ. ಇ. ಎಂ. ಹೈಸ್ಕೂಲಿನ ವಾರ್ಷಿಕೋತ್ಸವವು ತಾ. ೨೧ ರಂದು ವಿದ್ಯಾ ಖಾತೆಯ ಡಿವಿಜನಲ್ ಇನ್ಸ್‌ಪೆಕ್ಟರ್ ಶ್ರೀ ಸಿ. ನಟರಾಜನ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ಶಿಕ್ಷಣದ ಹೊಸ ದೃಷ್ಟಿಯನ್ನೂ ಹೆತ್ತವರ ಸಹಾಯವನ್ನೂ ವಿವರಿಸಿದರು.

ಮದ್ರಾಸಿನ ಅಮೇರಿಕನ ಡೆಂಟಲ್ ಕಾಲೇಜಿನ ಸ್ಥಾಪಕರೂ ಪ್ರಿನ್ಸಿಪಾಲರೂ ಆದ ಡಾ. ಎಚ್. ಎಂ. ರಾಯರು ತಾ. ೨೨ ರಂದು ಬೆಳಿಗ್ಗೆ ಹೃದಯಸ್ತಂಭನದಿಂದ ನಿಧನ ಹೊಂದಿದರೆಂದು ತಿಳಿಸಲು ವಿಷಾದಪಡುತ್ತೇವೆ. ಶ್ರೀಯುತರು ದಕ್ಷಿಣ ಕನ್ನಡದವರು ಮದ್ರಾಸಿನಲ್ಲಿ ಗಣನೀಯ ವ್ಯಕ್ತಿಗಳಾಗಿದ್ದರು.

ಮಂಗಳೂರಿನಲ್ಲಿ ತಾ. ರಂದು ಕಾಯಿದೆ ಭಂಗ ಮೆರವಣಿಗೆ ಮಾಡಿದುದಕ್ಕೆ ಕೆಲವರು ಆರ್. ಎಸ್. ಎಸ್. ಸ್ವಯಂಸೇವಕರ ಮೇಲೆ ಲಾಠಿ ಪ್ರಹಾರ ಮಾಡಿ ಬಂಧಿಸಲಾಗಿದೆಯಾಗಿ ತಿಳಿಯುತ್ತದೆ. ಈಗ ಎಲ್ಲವೂ ಶಾಂತವಾಗಿದೆ.

ಮಂಗಳೂರಲ್ಲಿ ಈ ವರೆಗೆ ಬಂಧಿಸಲ್ಪಟ್ಟ ಆರ್. ಎಸ್. ಎಸ್. ಸ್ವಯಂಸೇವಕರಲ್ಲಿ ತಾ. ೨೨ ರ ವರೆಗೆ ೧೨೮ ಜನರ ವಿಚಾರಣೆಯಾಗಿದೆ. ಅದರಲ್ಲಿ ೮೧ ಜನರಿಗೆ ಮೂರು ತಿಂಗಳ ಕಠಿಣ ಸಜೆ ಮತ್ತು ೧ ತಿಂಗಳ ಸಾದಾ ಸಜೆಯೂ ೨೧ ಜನರಿಗೆ ೧೫ ರೂಪಾಯಿ ಜುಲ್ಮಾನೆಯೂ ವಿಧಿಸಲ್ಪಟ್ಟು, ೯ ಮಂದಿಯನ್ನು ಜಾಮೀನ ಮೇಲೆ ಬಿಡುಗಡೆ ಮಾಡಲಾಗಿದೆ. ತಾ. ೨೩ ರಂದು ಪುತ್ತೂರಿನಲ್ಲಿ ಬಂಧಿತರಾದ ೨೦ ಜನರ ವಿಚಾರಣೆ ನಡೆದು ೩ ತಿಂಗಳ ಕಠಿಣ ಸಜೆ ಹಾಗು ೧ ತಿಂಗಳ ಸಾದಾ ಸಜೆ ವಿಧಿಸಲ್ಪಟ್ಟಿದೆ.

ಬಳ್ಳಾರಿ

ಹೂವಿನ ಹಡಗಲಿ ತಾಲೂಕಿನ ಸೊಳಗುಂದದಲ್ಲಿ ಹೊಸದಾಗಿ ಪ್ರಯೋಗಾರ್ಥವಾಗಿ ಅಂಚೆ ಕಚೇರಿಯನ್ನು ಪ್ರಾರಂಭಿಸಲಾಗಿದೆ.

ಬಳ್ಳಾರಿಯಲ್ಲಿ ಬ್ರೂಸಪೇಟೆಯ ಪೋಲೀಸರು ಅನಂತಪುರ ಜಿಲ್ಲೆಯಿಂದ ಅಲ್ಲಿಗೆ ಬರುತ್ತಿದ್ದ ಒಂದು ಲಾರಿಯನ್ನು ಹಿಡಿದು ೪೦ ಚೀಲ ಜೋಳ ಜಪ್ತಮಾಡಿ ಲಾರಿ ಒಡೆಯನ ಮೇಲೆ ಖಟ್ಲೆ ಹಾಕಿದ್ದಾರೆ.

ಬಳ್ಳಾರಿಯಲ್ಲಿ ಕಳೆದವಾರ ಶ್ರೀ ರೇವಣಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ದರ್ ಸಮಿತಿಯ ವರದಿಯನ್ನು ಖಂಡಿಸಲಾಯಿತು. ಶ್ರೀ ಟೇಕೂರ ಸುಬ್ರಹ್ಮಣ್ಯಂರವರು ಡಿ ಎಚ್ ವೆಂಕೋಬರಾಯರು ಮತ್ತು ರೇವಣಸಿದ್ಧಯ್ಯನವರು ವರದಿಯನ್ನು ನಿಷೇಧಿಸಿದರು.

ವಿಜಾಪುರ

ವಿಜಾಪುರ ಜಿಲ್ಹಾ ಲೋಕಲ್ ಬೋರ್ಡ ಪ್ರಾಥಮಿಕ ಶಿಕ್ಷಕ ಶಿಕ್ಷಕಿಯರ ಸಮ್ಮೇಳನ ತಿಕೋಟೆ ನಗರದ ಮುಕ್ತಾಯ ಸಮಾರಂಭ ೨೨ ಕ್ಕೆ ದಕ್ಷಿಣ ಭಾಗದ ಕಮಿಶನರರಾದ ಶ್ರೀ ಆರ್ ಡಿ ಮೀರಚಂದಾನಿ ಇವರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಬೀಳಗಿಯಲ್ಲಿ ಪ್ರಮುಖ ನಾಗರಿಕರಾಗಿದ್ದ ಶ್ರೀ ಕೃಷ್ಣನಾಯಕ ಬಾಜಿ ಇವರು ೨೩ ಕ್ಕೆ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಸರಳ ಸ್ವಭಾವಿಗಳು ಪರೋಪಕಾರಿಗಳು ರಾಷ್ಟ್ರೀಯವೃತ್ತಿಯವರು ಆಗಿದ್ದರು.

ವಿಜಾಪುರದಲ್ಲಿ ಸೇವಾ ಕೇಂದ್ರದ ಉದ್ಘಾಟನವು ೨೮ ಕ್ಕೆ ನಗರ ಸಭೆಯ ಅಧ್ಯಕ್ಷರಾದ ಶ್ರೀ ಕಮದೋಡ ಇವರ ಹಸ್ತದಿಂದ ಜರುಗಿತು. ಸಾಮಾಜಿಕ ಕಲ್ಯಾಣ ಕೇಂದ್ರದ ಸುಪರಿಂಟೆಂಡೆಂಟರಾದ ಶ್ರೀ ಮುದಾಸಪ್ಪರವರ ಹಸ್ತದಿಂದ ಧ್ವಜವಂದನವಾಯಿತು.

ನೂಲಿನ ನಿಯಂತ್ರಣವು ಜಾರಿಯಲ್ಲಿ ಬಂದು ೨೫ ದಿನಗಳಾದರೂ ನೇಕಾರರಿಗೆ ನೂಲು ಸಿಕ್ಕದೆ ಇದ್ದುದರಿಂದ ಬಹಳ ತೊಂದರೆಯಾಗಿದೆ. ಸಾವಿರಾರು ಮಗ್ಗಗಳು ನಿಂತುಬಿಟ್ಟವೆ. ಜಿಲ್ಲಾಧಿಕಾರಿಗಳು ಇತ್ತ ಗಮನಿಸಿ ನೂಲು ಸಿಕ್ಕುವಂತೆ ಮಾಡಬೇಕೆಂದು ಶ್ರೀ ಚನ್ನಪ್ಪ ಮುದ್ದೇಬಿಹಾಳ ಇವರು ಬಿನ್ನವಿಸುತ್ತಾರೆ.

ಕೊಡಗು

ಶನಿವಾರಸಂತೆ ಹೋಬಳಿ ಗುಡುಗಳಲೆ ಜಯದೇವಬಾಲೆಯಲ್ಲಿ ೩-೪ ನೇದಿನ ದಸಗಳ ಶಾಸ್ತ್ರಿ ವಿಜೃಂಭಣೆಯಿಂದ ನಡೆಯಿತು. ಆಗ ಕಾರ್ಯದರ್ಶಿ ಎನ್ ಕೆ ಮೂರ್ತಿಯವರು ಅಧ್ಯಕ್ಷ ಡಿ. ಬಿ. ಸಿ. ಟಿ. ಮುದಲಿಯಾರರ ಸನ್ನಿಧಿಯಲ್ಲಿ ವರದಿಯನ್ನು ಒಪ್ಪಿಸಿದರು. ಶನಿವಾರ ಸಂತೆಯಲ್ಲಿ ಜನಿಸಿದರೆಂದು ಹೇಳಲಾಗುತ್ತಿರುವ ಶ್ರೀ ಕೊಡಂಡೇರ ಕಾರ್ಯಪ್ಪನವರು ಸೇನಾಪತಿಗಳಾದುದಕ್ಕೆ ಸಂತೋಷಪಡುತ್ತದೆ. ಇದಕ್ಕಾಗಿ ಹಿಂದುಸ್ತಾನ ಸರಕಾರವನ್ನು ಅಭಿನಂದಿಸುತ್ತೇವೆ. ಶ್ರೀ ಕಾರ್ಯಪ್ಪನವರು ತಮ್ಮ ಧೈರ್ಯ ಶೌರ್ಯಗಳಿಂದ ಕೊಡಗಿಗೆ ಕೀರ್ತಿ ತಂದುದು ಅಭಿನಂದನೀಯ. ಅದೇ ರೀತಿಯಾಗಿ ಹಿಂದುಸ್ತಾನ ಸರಕಾರದವರು ಶ್ರೀ ದಿವಾಕರ ರಂಗರಾಯರನ್ನು ಕೇಂದ್ರ ಸರಕಾರದ ಮಂತ್ರಿಗಳನ್ನಾಗಿ ಮಾಡಿದ್ದು ತುಂಬ ಅಭಿನಂದನೀಯವಾಗಿದೆ. ಕನ್ನಡ ನಾಡಿನ ಏಳಿಗೆಗೆ ಕರ್ನಾಟಕ ಪ್ರಾಂತ್ಯವಾಗದೆ ವಿಧಿಯಿಲ್ಲ. ಇದಕ್ಕಾಗಿ ಆಹರ್ನಿಶ ದುಡಿಯುತ್ತಿರುವ ಪ್ರಮುಖರೊಬ್ಬರಿಗೆ ಮಂತ್ರಿಪದ ದೊರೆತಿದ್ದರಿಂದ ಕನ್ನಡಿಗರ ಅಭೀಷ್ಟ ಬೇಗ ಕೈಗೂಡುವದೆಂದು ಆಶಿಸಲಾಗಿದೆ. ಕರ್ನಾಟಕದ ಈ ಇಬ್ಬರು ಮಹನೀಯರಿಗೆ ಪರಮಾತ್ಮನು ದೀರ್ಘಾಯುರಾರೋಗ್ಯವನ್ನು ದಯಪಾಲಿಸಲಿ ಎಂದು ಮುಂತಾಗಿ ಈ ವರದಿಯಲ್ಲಿ ಬರೆಯಲಾಗಿದೆ.

ಸೋಮವಾರ ಪೇಟೆಯ ಸಾಹುಕಾರ ಶ್ರೀ ಸಿದ್ದಣ್ಣನವರು ಶನಿವಾರ ಸಂತೆಯ ಹೈಯರ ಎಲಿಮೆಂಟರಿ ಶಾಲೆಗೆ ೫೦೦ ರೂಪಾಯಿ ಕೊಡುವ ವಾಗ್ದಾನ ಮಾಡಿರುವರು.

ಕನ್ನಡ ಸಂಸ್ಥಾನ

ಮೈಸೂರು ಸಂಸ್ಥಾನ ಕಾಂಗ್ರೆಸ ಕಮಿಟಿಯ ಸಭೆಯನ್ನು ಶಿವಮೊಗ್ಗದಲ್ಲಿ ಕರೆಯಲಾಗಿತ್ತು. ಕಿಡಿಗೇಡಿಗಳು ಕಲ್ಲು ತೂರಿ ಶಾಂತಿಭಂಗ ಮಾಡಲು ಪ್ರಯತ್ನಿಸಿದರು. ಪೊಲೀಸರು ಅಶ್ರುವಾಯು ಪ್ರಯೋಗಿಸಿ ಗುಂಪನ್ನು ಚದರಿಸಿದರು. ಮಂತ್ರಿಗಳು ಸಂಘಗಳನ್ನು ನಿಷೇಧಿಸಿದರು. [illegible]

ಹರಿಹರದ ಬಳಿ ಹಾಗು [illegible] ೧೫೦ ಕ್ಕೂ ಹೆಚ್ಚು ೧೦ ನೇ ತಾರೀಖಿನಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. [illegible]

ಚಿತ್ರದುರ್ಗದ ಜೈನ ಶ್ವೇತಾಂಬರ ಸಮಾಜದವರು [illegible] ನಿಧಿಗೆ ತಮ್ಮ ಸಾವಿರ ರೂಪಾಯಿ [illegible] ಒಂದು ಕೊಟಡಿಗೆ ತಮ್ಮ ಸಮಾಜದ ಹೆಸರು ಇಡಬೇಕೆಂದು ನಿಧಿಯ ಅಧ್ಯಕ್ಷರನ್ನು ಬಿನ್ನವಿಸಿಕೊಂಡಿದ್ದಾರೆ.

ದಾವಣಗೆರೆಯಲ್ಲಿ ಬೇಗ ಟೆಲಿಫೋನ ವ್ಯವಸ್ಥೆಯಾಗಲಿದ್ದು ನಾಗರಿಕರು ಇದರ ಲಾಭ ಪಡೆಯಬೇಕೆಂದು ಬಿನ್ನವಿಸಲಾಗಿದೆ.


ಮೈಸೂರ ಸಂಸ್ಥಾನದಲ್ಲಿಯ ಧೀವರ ಪದ್ಧತಿಯನ್ನು ಕಾಂಗ್ರೆಸಿನ ನೀತಿಯನ್ನು ಆಕ್ಷೇಪಿಸಿ [illegible] ರಾಜಣ್ಣ ಸೆಟ್ಟಿ ಎಂಬ ಕಾಂಗ್ರೆಸ ಕಾರ್ಯಕರ್ತರು ೨೩ ರಾತ್ರಿ ಉಪವಾಸ ಶುರು ಮಾಡಿದ್ದರು. ಅದಕೆ ಪೋಲೀಸರು ಅವರನ್ನು ಹಿಡಿದು ಬಂಧಿಸಿದರು. ಅವರೂ ಉಪವಾಸ ನಿಲ್ಲಿಸಿಲ್ಲ.

ಚಿರಡಿಯ ಮ್ಯಾಜಿಸ್ಟ್ರೇಟರು ಆರ್ ಎಸ್ ಎಸ್ ದ ೪೯ ಸ್ವಯಂಸೇವಕರಿಗೆ ತಲಾ ೩ ತಿಂಗಳು ಶಿಕ್ಷೆ ಹಾಗು ೧೦೦ ರೂ. ದಂಡ ಇಲ್ಲದೆ ೧ ತಿಂಗಳು ಶಿಕ್ಷೆ ವಿಧಿಸಿದರು. [illegible] ಕ್ಷಮೆ ಬೇಡಿ ಒಂದು ವರ್ಷದ ಸದ್ವರ್ತನೆಯ ಜಾಮೀನು ಕೊಟ್ಟು ಬಿಡುಗಡೆ ಹೊಂದಿದರು.

ಬೆಳಗಾವಿ

ಬೆಳಗಾವಿಯಲ್ಲಿಯ ಎಲ್ಲ ಮಾಧ್ಯಮಿಕ ಶಾಲೆಗಳ ವಾರ್ಷಿಕ ಪಂದ್ಯಾಟದ ಕೊನೆಯ ಆಟ ಜಿ. ಟಿ. ಕಾಲೇಜಿನ ಪ್ರಿನ್ಸಿಪಾಲ ಶ್ರೀ ನಾಡಿಗೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ [illegible] ಬಹುಮಾನಗಳನ್ನು ಹಂಚಿದರು. ಈ ಪಂದ್ಯಾಟದಲ್ಲಿ ೧೪ ಶಾಲೆಗಳು ಭಾಗವಹಿಸಿದ್ದವು. ಸುಮಾರು ೧೬೦೦ ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಬೆಳಗಾವಿ ಎಕ್ಸ್ಚೇಂಜ್ ಎಂಬ ಹೆಸರಿನ [illegible] ಕೆಲಸ [illegible] ಕಾರಕೂನರು ಆಫೀಸಿನ ಪ್ರವಾಸ ಭತ್ಯೆಯನ್ನು [illegible] ಬ್ಯಾಂಕಿನಿಂದ ಹಣ ತೆಗೆದುಕೊಂಡು ಓಡಿಹೋಗಿದ್ದನು. ಅವನನ್ನು ಈಗ ಪುಣೆಯಲ್ಲಿ ಬೆಳಗಾವಿಯ ಪೋಲೀಸ್ ಇನ್ಸ್‌ಪೆಕ್ಟರ ಶ್ರೀ [illegible] ಇವರು ಹಿಡಿದಿರುವರು.



ಹಿಂದುಸ್ತಾನ

ಮುಂಬಯಿ

ಮುಂಬಯಿ ಸರಕಾರದವರು ಒಂದು ಆಜ್ಞೆ ಹೊರಡಿಸಿ ಅಕ್ಕಿಯಲ್ಲಿಯ ಜೀವಸತ್ವ ಪದಾರ್ಥವು ನಾಶವಾಗಬಾರದೆಂಬ ಉದ್ದೇಶದಿಂದ ಅಕ್ಕಿಗಳನ್ನು ಪಾಲಿಶ ಮಾಡಕೂಡದೆಂದೂ ಯಾವದೇ ಗಿರಣಿಯವರು ಅಕ್ಕಿಗಳನ್ನು ಪಾಲಿಶ ಮಾಡಿದಲ್ಲಿ ಅದು ಅಪರಾಧವೆನಿಸುವದೆಂದೂ ವಿಧಿಸಿದ್ದಾರೆ.

ಸಿನೇಮಾ ಥಿಯೇಟರಗಳಲ್ಲಿ ಪಿಕೇಟಿಂಗ ಮಾಡಬಾರದೆಂಬ ಕಾಯದೆಗನುಸರಿಸಿ ಸುರತದಲ್ಲಿ ಡಿಸೆಂಬರ ತಾ ೨೫ ರಂದು ಇಬ್ಬರು ಹೊರಗೆ ಹಾಕಲ್ಪಟ್ಟಿದ್ದರು. ಮುಂದೆ ಆಟ ಮುಗಿಸಿಕೊಂಡು ದ್ವಾರಪಾಲಕರು ಮನೆಗೆ ಹೋಗುವಾಗ ಪಿಕ್ಕೇಟಿಂಗ ಮಾಡಿದವರು ಅವರ ಮೇಲೆ ಹಲ್ಲೆ ಮಾಡಿ ಒಬ್ಬನನ್ನು ಇರಿದರೆಂದೂ ಇನ್ನೊಬ್ಬನ ತಲೆ ಗಾಯವಾಗಿದೆಯೆಂದೂ ತಿಳಿಯುತ್ತದೆ.

ಮುಂಬಯಿಯಲ್ಲಿ ತಾ ೨೫ ರಂದು ಸಮಾಜವಾದೀ ಪಕ್ಷದ ಪರವಾಗಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಡಚ್ ಸರಕಾರದವರು ಇಂಡೋನೇಶಿಯದ ಮೇಲೆ ನಡಿಸಿದ ಹೀನ ದಾಳಿಯನ್ನು ಖಂಡಿಸುವ ಗೊತ್ತುವಳಿ ಸ್ವೀಕರಿಸಲಾಯಿತು.

ಚಿತ್ರಪಟಗಳ ನಿರ್ಮಾಪಕರು ಪ್ರದರ್ಶಕರು ಹಾಗು ಪುಸ್ತಕಗಳ ರಜಿಸ್ಟರ್ಡ ಪ್ರಕಾಶಕರ ಹೊರತಾಗಿ ಉಳಿದವರು ಸಿನೇಮಾ ಪುಸ್ತಿಕೆಗಳನ್ನು ಮುದ್ರಿಸುವದು ಮತ್ತು ಹಂಚುವದು ಕಾಗದ ನಿಯಂತ್ರಣ ಹುಕುಮಿನನ್ವಯ ಅಪರಾಧವಾಗುವದೆಂದೂ ಹಾಗೆ ಮಾಡಿದವರ ಮೇಲೆ ಉಗ್ರಕ್ರಮ ಕೈಕೊಳ್ಳಲಾಗುವದೆಂದೂ ಸರಕಾರೀ ಪ್ರಕಟನೆ ಹೊರಟಿದೆ.

ಕೊಲ್ಹಾಪುರ ನಗರದ ಮಹಿಳಾ ಜ್ಞಾನ ಮಂದಿರದ ಕಾರ್ಯದರ್ಶಿಗಳಾದ ಶ್ರೀಮತಿ ಜಯದೇವಿ ತಾಯಿ ಲಿಗಾಡೆಯವರು ಹೈದರಾಬಾದದಿಂದ ೩॥ ತಿಂಗಳ ಅವಧಿಯಲ್ಲಿ ಬಂದ ೩೫,೮೫೫ ಜನರಿಗೆ ಅನ್ನ ನೀಡಿದರು, ೬೦೦೦ ರೂ ವೆಚ್ಚಮಾಡಿ ೬೧೫ ಜನರಿಗೆ ಸಮವಸ್ತ್ರ ಹಂಚಿದರು, ವಿದ್ಯಾರ್ಥಿಗಳಿಗೆ ೯೧೫ ರೂ ಫೀಗಾಗಿಯೂ ೫೨೦ ರೂ ಪುಸ್ತಕಕ್ಕಾಗಿಯೂ ಕೊಟ್ಟರು, ೧೬೨ ಸ್ತ್ರೀಯರ ಬಾಣಂತಿತನ ಮಾಡಿಸಿದರು, ಸ್ವಯಂಸೇವಕರ ಸಹಾಯದಿಂದ ೨೬೫೦ ಸೇರು ಹಾಲು ಶೇಖರಿಸಿ ಚಿಕ್ಕ ಮಕ್ಕಳಿಗೆ ಹಂಚಿದರು ಎಂದು ಮೊದಲಾಗಿ ತಿಳಿಯುತ್ತದೆ.

ಮುಂಬಯಿ ಪ್ರಾಂತದ ಕಾಯದೆ ಶಿಕ್ಷಣ ಪದ್ಧತಿಯನ್ನು ಪರಿಶೀಲಿಸಿ ಅದರಲ್ಲಿ ಮಾಡಬೇಕಾದ ಸುಧಾರಣೆಯ ಬಗ್ಗೆ ಸೂಚನೆ ಕೊಡುವದಕ್ಕಾಗಿ ಸರಕಾರದವರು ಮುಂಬಯಿ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿರುತ್ತಾರೆ.

ಬ್ರಿಟಿಷ ಸರಕಾರದ ಜನತಾ ಶಿಕ್ಷಣದ ಅಧಿಕಾರಿಗಳಾದ ಅಂಗೆ ಮಿನ ಹಾಗು ಗ್ರಾಮೋದ್ಧಾರ ಅಧಿಕಾರಿಗಳಾದ ಸೋಯೆಟಿನರವರು ಹಿಂದುಸ್ತಾನದ ಮೂಲ ಶಿಕ್ಷಣ ಪದ್ಧತಿಯನ್ನೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಗಳ ಬಗ್ಗೆ ಅನುಸರಿಸಲಾದ ಪದ್ಧತಿಗಳನ್ನೂ ನೋಡಿಕೊಂಡು ಯೋಗ್ಯ ಮಾರ್ಪಾಟುಗಳೊಂದಿಗೆ ತಮ್ಮ ದೇಶದಲ್ಲಿ ಬಳಕೆಗೆ ತರಬೇಕೆಂದು ಬಯಸಿ ಹಿಂದುಸ್ತಾನದ ಪ್ರಮುಖ ಶಿಕ್ಷಣ ಕೇಂದ್ರಗಳನ್ನು ನೋಡುತ್ತಿರುವರೆಂದು ತಿಳಿಯುತ್ತದೆ.

ಇಂಡಿಯನ್ ಪ್ರೆಸ್ ಅಸೋಸಿಯೇಶನ್‌ದ ವ್ಯವಸ್ಥಾಪಕರೂ ನುರಿತ ಪತ್ರಿಕೋದ್ಯಮಿಗಳೂ ಆದ ಶ್ರೀ. ಶ್ರೀಧರ ಕೇಲಕರರ ವಿವಾಹವು ಡಿಸೆಂಬರ ತಾ ೨೫ಕ್ಕೆ ಶ್ರೀ ಪ್ರೇಮಾಬಾಯಿ ಬಿ. ಎ. ಬಿ. ಟಿ. ಇವರೊಡನೆ ಸಿವಿಲ ಮ್ಯಾರೇಜ ಪದ್ಧತಿಯಂತೆ ಜರುಗಿತು.

ಎಲ್ಲ ಪ್ರಾಂತ ಮತ್ತು ಸಂಸ್ಥಾನಗಳ ಸುದ್ದಿ ಖಾತೆಗಳ ಮಂತ್ರಿಗಳ ಪರಿಷತ್ತು ಜಾನೇವರಿ ತಿಂಗಳ ೨ ನೆಯ ವಾರದಲ್ಲಿ ಮುಂಬಯಿಯಲ್ಲಿ ಸೇರಲಿರುವದೆಂದು ತಿಳಿದು ಬರುತ್ತದೆ. ಭಾರತದ ಸುದ್ದಿ ಮತ್ತು ಆಕಾಶವಾಣಿ ಮಂತ್ರಿಗಳಾದ ಶ್ರೀ ದಿವಾಕರರು ಅಧ್ಯಕ್ಷತೆ ವಹಿಸುವರು.

ಸುಮಾರು ೧೫೦೦ಕ್ಕಿಂತ ಹೆಚ್ಚು ಮಹಿಳೆಯರು ತಾ. ೨೮ ರ ಮಧ್ಯಾಹ್ನ ಮುಂಬಯಿಯಲ್ಲಿ ಮೆರವಣಿಗೆ ತೆಗೆದು ಸೆಕ್ರೆಟರಿಯೇಟದವರೆಗೆ ಹೋಗಿ, ಆರ್. ಎಸ್. ಎಸ್. ದ ಮೇಲಿನ ನಿರ್ಬಂಧ ತೆಗೆಯಬೇಕೆಂದೂ ಅವರೊಡನೆ ಒಪ್ಪಂದ ಮಾಡಿಕೊಳ್ಳಬೇಕೆಂದೂ ಗೃಹಮಂತ್ರಿ ಮುರಾರಜಿಯವರನ್ನು ಕೇಳಿಕೊಂಡರು.

ಮದ್ರಾಸ

ಭಾರತ ಸರಕಾರದ ಸುದ್ದಿ ಮತ್ತು ಆಕಾಶವಾಣಿಯ ಮಂತ್ರಿಗಳಾದ ಶ್ರೀ ರಂಗರಾವ ದಿವಾಕರರಿಗೆ ಮದ್ರಾಸ ಕರ್ನಾಟಕ ಸೇವಾ ಸಂಘದವರು ಡಿಸೆಂಬರ ತಾ ೨೫ ರಂದು ಮಾನಪತ್ರ ಕೊಟ್ಟರು. ಆಗ ಮಾನ್ಯ ಮಂತ್ರಿಗಳು ಮಾತನಾಡುತ್ತ ೧॥ ಕೋಟಿ ಕನ್ನಡಿಗರು ಒಂದುಗೂಡಿ, ಮೈಸೂರು ಮಹಾರಾಜರ ಘಟನಾತ್ಮಕ ಅಧಿಪತ್ಯದಲ್ಲಿ ಏಕೀಕೃತ ಕರ್ನಾಟಕ ಬೇಕೆಂದು ಬೇಡಿದರೆ ಅದಕ್ಕೆ ಮನ್ನಣೆ ದೊರೆಯಲು ತಡವಾಗದೆಂದು ಮೊದಲಾಗಿ ಹೇಳಿದರು.

ಮದ್ರಾಸದಲ್ಲಿ ಮಾನ್ಯ ದಿವಾಕರರು ತಾ. ೨೫ ರಂದು ಸಂಜೆ, ಅ. ಭಾ. ಖಾದಿ ಮತ್ತು ಔದ್ಯೋಗಿಕ ಪ್ರದರ್ಶನದಲ್ಲಿ, ಚಾರಿತ್ರಿಕ ಚಲಚ್ಚಿತ್ರೋತ್ಸವದ ಉದ್ಘಾಟನೆಯನ್ನು ಮಾಡಿದರು. ಮುನ್ನ ದಿನ ಮಾನ್ಯ ಮಂತ್ರಿಗಳು ಒಂದು ಅನೌಪಚಾರಿಕ ಪರಿಷತ್ತನ್ನು ಕರೆದು, ಚಾರಿತ್ರಿಕ, ಶೈಕ್ಷಣಿಕ, ಮತ್ತು ಸಾಂಸ್ಕೃತಿಕ ಚಿತ್ರಪಟಗಳ ನಿರ್ಮಾಣ, ವಿತರಣ, ಪ್ರದರ್ಶನ ಇವುಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನೂ ಈ ವಿಷಯದಲ್ಲಿ ಪ್ರಾಂತಿಕ ಮತ್ತು ಕೇಂದ್ರ ಸರಕಾರದವರು, ಚಿತ್ರಪಟಗಳ ಉದ್ಯೋಗದವರು ನಡೆಸಿದ ಪ್ರಯತ್ನಗಳನ್ನು ಕ್ರೋಢೀಕರಿಸುವ ಶಕ್ಯಾಶಕ್ಯತೆಯನ್ನು ಚರ್ಚಿಸಿದರು.

ಅ. ಭಾ. ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಯ ಸ್ಥಳವನ್ನು ತಮಗೆ ಕೊಡಮಾಡಿದ್ದು ತಾವು ಅದನ್ನು ಸ್ವೀಕರಿಸಲು ನಿರ್ಧರಿಸಿದ್ದಾಗಿ ಮದ್ರಾಸ ಕಂದಾಯ ಮಂತ್ರಿಗಳಾದ ಶ್ರೀ ಕಾಳಾ ವೆಂಕಟರಾಯರು ಒರ್ವ ಸುದ್ದಿಗಾರರಿಗೆ ಹೇಳಿದರೆಂದು ತಿಳಿಯುತ್ತದೆ.

ಮದ್ರಾಸ ಸರಕಾರದವರು ಕೇಂದ್ರ ಕದಲೀ ಸಂಶೋಧನ ಶಾಖೆಯೊಂದನ್ನು ಸ್ಥಾಪಿಸಲು ನಿರ್ಧರಿಸಿ ಅದಕ್ಕಾಗಿ ೧ ಲಕ್ಷ ೮೮ ಸಾವಿರ ರೂಪಾಯಿ ಮಂಜೂರು ಮಾಡಿದ್ದಾರೆ.

ಮದ್ರಾಸನಗರ ಮತ್ತು ಹಳ್ಳಿಗಳಿಗೆ ಸಾಕಷ್ಟು ವಿದ್ಯುಚ್ಛಕ್ತಿಯನ್ನು ಪೂರೈಸುವ ಉದ್ದೇಶದಿಂದ ಮದ್ರಾಸ ಸರಕಾರದವರು ಪ್ರಾಂತದಲ್ಲಿಯ ವಿದ್ಯುತ್ ಕೇಂದ್ರಗಳನ್ನೆಲ್ಲ ರಾಷ್ಟ್ರೀಕರಿಸಲು ನಿರ್ಧರಿಸಿದ್ದಾರೆ. ಈ ಬಗ್ಗೆ ಯೋಜನೆಯು ಸಿದ್ಧವಾಗಿದ್ದು ಅದನ್ನು ಕೇಂದ್ರ ಸರಕಾರದ ಒಪ್ಪಿಗೆಗಾಗಿ ಕಳಿಸಲಾಗಿದೆ.

ಹಿಂದುಸ್ತಾನ ಸಾರಿಗೆ ಮಂತ್ರಿಗಳಾದ ಶ್ರೀ. ಎನ್. ಗೋಪಾಲಸ್ವಾಮಿ ಅಯ್ಯಂಗಾರರು ಮದ್ರಾಸದಲ್ಲಿ ತಾ. ೨೭ ರಂದು ಒಂದು ಸಂದರ್ಶನದಲ್ಲಿ, ಅತಿಪ್ರಸರಣವನ್ನು ಸಂಪೂರ್ಣವಾಗಿ ತಡೆಯುವದಕ್ಕೆ ಎಷ್ಟು ವರ್ಷಗಳು ತಗಲುವವೋ ಹೇಳುವದು ಕಠಿಣವಾದರೂ ಈಗ ಸರಕಾರದವರು ಕೈಕೊಂಡ ಯೋಜನೆಯಿಂದ ಬೆಲೆಗಳ ಏರಿಕೆಯು ಮಾತ್ರ ತಡೆಹಿಡಿಯಲ್ಪಟ್ಟಿದೆ ಎಂದು ನುಡಿದರು.

ಒಂದು ಕೇಂದ್ರ ಚಲಚ್ಚಿತ್ರ ನಿಯಂತ್ರಣ ಮಂಡಲವನ್ನು ನಿರ್ಮಿಸುವ ಬಗ್ಗೆ ಹಿಂದುಸ್ತಾನ ಸರಕಾರದವರು ವಿಚಾರಿಸುತ್ತಿರುವರೆಂದು ಅಧಿಕೃತವಾಗಿ ತಿಳಿಯುತ್ತದೆ.

ತೆನಾಮಪೇಟೆಯಲ್ಲಿ ನಡೆದ ಅ. ಭಾ. ಖಾದಿ ಸ್ವದೇಶಿ ಮತ್ತು ಔದ್ಯೋಗಿಕ ಪ್ರದರ್ಶನದ ಅಂಗವಾದ ವಿದ್ಯಾ ನಗರದ ಪ್ರೌಢ ಶಿಕ್ಷಣ ವಿಭಾಗವನ್ನು ಸಂದರ್ಶಿಸಿದ ಸುಮಾರು ೬೦೦ ಜನರು, ಪ್ರತಿವರ್ಷ ಒಬ್ಬನನ್ನಾದರೂ ಸಾಕ್ಷರನನ್ನಾಗಿ ಮಾಡುವ ಪ್ರತಿಜ್ಞೆ ತೆಗೆದುಕೊಂಡರು. ಅವರಲ್ಲಿ ಮದ್ರಾಸದ ಮಂತ್ರಿಗಳನೇಕರಿರುವರೆಂದು ತಿಳಿಯುತ್ತದೆ.

ಓಡಿಸಾ

ಓಡಿಸಾ ಪ್ರಾಂತಿಕ ಅಂಚೆ ಮತ್ತು ಕೆಳವರ್ಗದ ನೌಕರರ ವಾರ್ಷಿಕ ಸಭೆಯ ಅಧ್ಯಕ್ಷ ಸ್ಥಾನದಿಂದ ತಾ. ೨೭ ರಂದು ಶ್ರೀಮತಿ ಅರುಣಾ ಅಸಫಅಲಿ ಅವರು, ಜೀವನ ವೆಚ್ಚದಷ್ಟೇ ಕೂಲಿಯು ದೊರೆಯದೆ ಹೋದರೆ ಕೂಲಿಕಾರರಿಂದ ಹೆಚ್ಚಿನ ಕೆಲಸವನ್ನು ಅಪೇಕ್ಷಿಸಕೂಡದೆಂದೂ ಶ್ರೀ ಜಯಪ್ರಕಾಶರಿಂದ ಮುಂದಿಡಲ್ಪಟ್ಟ ಬೇಡಿಕೆಗಳಿಗೆ ಮಾನ್ಯತೆ ಸಿಕ್ಕದಿದ್ದರೆ ಸಂಪು ಹೂಡಲು ನೀವೆಲ್ಲ ಸಿದ್ಧರಿರಬೇಕೆಂದೂ ನುಡಿದರು.

ಹೊಸದಿಲ್ಲಿ

ಹಿಂದೀ ಸೈನಿಕರು ಕ್ರಿಸಮಸ್‌ವನ್ನು ಚಳಿಯಲ್ಲಿ ಕಳೆಯಬಾರದೆಂದು ಡಿಸೆಂಬರ ತಾ ೨೪ ರಂದು ದಿಲ್ಲಿಯಿಂದ ಪೂಂಚಕ್ಕೆ ೩ ಸಾವಿರ ರಗ್ಗುಗಳನ್ನು ಕಳಿಸಲಾಯಿತೆಂದು ತಿಳಿಯುತ್ತದೆ.

ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದರು ಒಂದು ಹೇಳಿಕೆ ಹೊರಡಿಸಿ, ನಿಧಿ ಸಂಗ್ರಹಕ್ಕಾಗಿ ಕಾಂಗ್ರೆಸಿಗರು ಸಾಕಷ್ಟು ದುಡಿಯುತ್ತಿಲ್ಲವೆಂದೂ ಜಾನೇವರಿ ತಿಂಗಳವನ್ನೆಲ್ಲ ಕಾಂಗ್ರೆಸ ಕಾರ್ಯಕರ್ತರು ನಿಧಿ ಸಂಗ್ರಹಕ್ಕಾಗಿಯೇ ವಿನಿಯೋಗಿಸಿ ಇದಕ್ಕಾಗಿ ತಮ್ಮ ಶಕ್ತಿ ಸರ್ವಸ್ವವನ್ನೂ ಉಪಯೋಗಿಸಬೇಕೆಂದೂ ನಿರ್ದೇಶಿಸಿದ್ದಾರೆ.

ಡಿಸೆಂಬರ ತಾ ೨೩ ರಂದು ಭಾರತ ಇತಿಹಾಸ ಸಂಶೋಧನ ಸಂಸ್ಥೆಯ ರಜತೋತ್ಸವವು ದಿಲ್ಲಿಯಲ್ಲಿ ನೆರವೇರಿತು. ಅದನ್ನು ಉದ್ಘಾಟಿಸುತ್ತ ಭಾರತದ ಮುಖ್ಯ ಮಂತ್ರಿ ಪಂ. ಜವಾಹರಲಾಲರು, ಇತಿಹಾಸಕಾರರು ಜಗತ್ತಿನಲ್ಲಿಯ ರಚನಾತ್ಮಕ ಹಾಗೂ ಸಹಕಾರ ಪ್ರವೃತ್ತಿಗಳಿಗಷ್ಟೇ ಪ್ರಾಮುಖ್ಯತೆ ಕೊಡಬೇಕಲ್ಲದೆ ವಿಧ್ವಂಸಕ ಮತ್ತು ಪ್ರತ್ಯೇಕತೆಯ ಭಾವನೆಗೆ ಪುಟಕೊಡುವಂತಹ ಘಟನೆಗಳಿಗೆ ಇಂಬುಗೊಡಕೂಡದು ಎಂದು ಮೊದಲಾಗಿ ನಿವೇದಿಸಿದರು. ಈ ಸಂಸ್ಥೆಗೆ ಭಾರತದ ಶಿಕ್ಷಣ ಮಂತ್ರಿ ಮೌ. ಅಬುಲಕಲಂ ಅಝಾದರು ಅಧ್ಯಕ್ಷರು.

ಹಿಂದುಸ್ತಾನ ಸರಕಾರದ ವಿದೇಶ ಶಾಖೆಯವರು ಒಂದು ಪ್ರಕಟನೆ ಹೊರಡಿಸಿ ಹಿಂದುಸ್ತಾನ ಸರಕಾರದವರು, ಲಂಡನದಲ್ಲಿಯ ಹಿಂದೀ ಹಾಯಕಮಿಶನರರಾದ ಶ್ರೀ ವ್ಹಿ. ಕೆ. ಕೃಷ್ಣ ಮೆನನ್ನರನ್ನು ಅಲ್ಲಿಂದ ಸ್ಥಳಾಂತರಿಸಿ ಅವರ ಹುದ್ದೆಗೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ನೇಮಿಸುವರೆಂಬುದಾಗಿ ಹಬ್ಬಿದ ಸುದ್ದಿಯು ನಿರಾಧಾರವೆಂದು ಸಾರಿದ್ದಾರೆ.

ರಾಷ್ಟ್ರೀಯ ಚಳವಳಿಯಲ್ಲಿ ಸೇರಿದ್ದಕ್ಕೆ ನೌಕರಿ ಕಳೆದುಕೊಂಡ ಸರಕಾರಿ ನೌಕರರಿಗೆ ಅವರ ನೌಕರಿ ನಿಂತ ದಿನದಿಂದ ಪಿಂಚಣಿ ಅಥವಾ ಪರಿಹಾರಧನ ಕೊಡಲು ಹಿಂದುಸ್ತಾನ ಸರಕಾರದವರು ನಿರ್ಧರಿಸಿರುವರೆಂದು ಡಿಸೆಂಬರ ತಾ ೨೪ ರಂದು ಗೃಹಶಾಖೆಯ ಪ್ರಕಟನೆ ಹೊರಟಿದೆ. ಇದರಂತೆ ಪಿಂಚಣಿ ಕಳೆದುಕೊಂಡವರಿಗೂ ಅದನ್ನು ಕಳೆದುಕೊಂಡದಿನದಿಂದ ತಿರುಗಿ ಕೊಡಲಾಗುವದು.

ಹಿಂದೂ ಮಹಾ ಸಭೆಯ ಅ. ಭಾ. ಸಮಿತಿಯು ಶ್ರೀ ಎಲ್. ಬಿ. ಭೋಪಟಕರರ ಅಧ್ಯಕ್ಷತೆಯಲ್ಲಿ ಡಿಸೆಂಬರ ತಾ೨೫ ರಿಂದ ಸೇರಿ ತಾ೨೭ ಕ್ಕೆ ಮುಕ್ತಾಯವಾಯ್ತು. ಹಿಂದುಸ್ತಾನದ ಬೇರೆ ಬೇರೆ ಭಾಗಗಳಿಂದ ಸುಮಾರು ೧೨೦ ಸದಸ್ಯರು ಬಂದಿದ್ದರು. ಅಖಂಡ ಹಿಂದುಸ್ತಾನ ಸ್ಥಾಪನೆ, ನಿಜವಾದ ಪ್ರಜಾಪ್ರಭುತ್ವದ ಸ್ಥಾಪನೆ, ಸರ್ವರಿಗೂ ವಿಚಾರ, ಭಾಷಣ, ಸಂಘ ಸ್ವಾತಂತ್ರ್ಯ, ಪ್ರಾಚೀನ ಸಂಸ್ಕೃತಿಯ ಪುನರುಜ್ಜೀವನ, ಹಿಂದೀ ರಾಷ್ಟ್ರಭಾಷೆ ಮತ್ತು ದೇವನಾಗರಿ ಲಿಪಿ, ಹಿಂದೂ ಧರ್ಮವನ್ನು ಬಿಟ್ಟು ಹೋದವರ ಶುದ್ಧೀಕರಣ, ರೈತರು ಕೂಲಿಕಾರರಿಗೆ ತಕ್ಕ ಆರ್ಥಿಕ ಪ್ರತಿಫಲ, ಗೋಹತ್ಯಾ ಪ್ರತಿಬಂಧ, ಅಂತಾರಾಷ್ಟ್ರೀಯ ಶಾಂತಿ ಇವೇ ಮೊದಲಾದವುಗಳ ಬಗ್ಗೆಯೂ ನಿರಾಶ್ರಿತರ ಬಗ್ಗೆಯೂ ಚರ್ಚಿಸಿ ಗೊತ್ತುವಳಿಗಳನ್ನು ಸ್ವೀಕರಿಸಲಾಯ್ತು.

ಹೈದರಾಬಾದ

ಹೈದರಾಬಾದ ನಿರಾಶ್ರಿತರ ಪುನರ್ನಿವೇಶನಕ್ಕಾಗಿ ಮುಖ್ಯ ಮಂತ್ರಿಗಳ ನಿಧಿಯಿಂದ ೫೦ ಸಾವಿರ ರೂಪಾಯಿಗಳನ್ನು ಕೊಡುವದಾಗಿ ಪಂ. ಜವಾಹರಲಾಲರು ತಾ ೨೫ ರಂದು ಸಾರಿದರು.

ಹೈದರಾಬಾದ ಸರಕಾರದವರು ಇಮ್ರೋಜ ಪತ್ರಿಕೆಯ ಸಂಪಾದಕರಾಗಿದ್ದ ಶೇಬುಲ್ಲಾ ಖಾನರ ಪತ್ನಿಗೆ ಅವರ ಜೀವಮಾನವಿರುವವರೆಗೂ ಪ್ರತಿತಿಂಗಳ ೧೦೦ ರೂ. ಸಹಾಯ ವೇತನ ಕೊಡಬೇಕೆಂದು ನಿರ್ಧರಿಸಿದ್ದಾರೆ. ಇದರಂತೆ ಶೇಬುಲ್ಲಾ ಖಾನರಿಗೆ ಸಹಾಯ ನೀಡುತ್ತಿದ್ದ ಬೀಗನೋರ್ವನ ಕೈಗಳೆರಡನ್ನೂ ಕಡಿದಿದ್ದರಿಂದ ಅವನಿಗೆ ಕೂಡ ಪ್ರತಿತಿಂಗಳ ಅವನ ಜೀವಮಾನವಿರುವ ವರೆಗೆ ೫೦ ರೂ. ಕೊಡುವದಾಗಿ ನಿರ್ಧರಿಸಿದ್ದಾರೆ.

ಸಂಯುಕ್ತ ಪ್ರಾಂತ

ಉತ್ತರ ಹಿಂದುಸ್ತಾನದ ಕೊನೆಯ ಅರಸನಾದ ಜಯಚಂದನ ಕಾಲದ ೬ ತಾಮ್ರಪಟಗಳು ಸಿಕ್ಕಿದ್ದು ಅವುಗಳನ್ನು ಸಂಯುಕ್ತ ಪ್ರಾಂತದ ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿದೆ. ಇವು ಕ್ರಿ. ಶ. ೧೧೬೪ ರಿಂದ ೧೧೭೨ ರ ವರೆಗಿನವಿರುತ್ತವೆ.

ಅಲಹಾಬಾದದಲ್ಲಿ ತಾ. ೨೬ರಂದು ಸೇರಿದ ೪ ನೆಯ ವಕೀಲರ ಪರಿಷತ್ತಿನಲ್ಲಿ ಅದರ ಅಧ್ಯಕ್ಷಸ್ಥಾನದಿಂದ ಶ್ರೀ ಬಹಾದೂರಜಿಯವರು ಮಾತನಾಡುತ್ತ ವಕೀಲರಲ್ಲದವರು ನ್ಯಾಯಾಧೀಶರಾಗುವದು ವಿಸಂಗತವೆಂದೂ ಕೂಡಲೆ ನ್ಯಾಯಾಂಗವನ್ನೂ ಕಾರ್ಯಾಂಗವನ್ನೂ ಬೇರ್ಪಡಿಸಬೇಕೆಂದೂ ನುಡಿದರು. ಅಲಹಾಬಾದದ ಮುಖ್ಯ ನ್ಯಾಯಾಧೀಶರು ಈ ಪರಿಷತ್ತನ್ನು ಉದ್ಘಾಟಿಸುತ್ತ, ಮುನಸೀಫರ ಸ್ಥಳಗಳನ್ನು ವಿಶ್ವವಿದ್ಯಾಲಯದ ಪದವೀಧರರಿಂದ ತುಂಬದೆ ಪ್ರಮುಖ ವಕೀಲರನ್ನು ಆ ಸ್ಥಳಗಳಿಗೆ ನೇಮಿಸಬೇಕೆಂದು ಹೇಳಿದರು.


ಹಿಂದುಸ್ತಾನದಲ್ಲಿ ಝೆಕೋಸ್ಲೋವಾಕಿಯಾದ ರಾಯಭಾರಿಯಾದ ಅರೋಸ್ಲಾವ ಸೇನೋವ್ಹಾ ಇವರು ಸಪತ್ನೀಕರಾಗಿ ತಾ. ೨೫ ರಂದು ಕಾಶೀ ವಿಶ್ವನಾಥ ಮೂರ್ತಿಯ ಮುಂದೆ ತೆಂಗಿನ ಕಾಯಿ ಹೂವಿನಹಾರ ಇಟ್ಟು ವಂದನೆಗಳನ್ನು ಸಮರ್ಪಿಸಿದರು.

ತಾ. ೨೫ ರಂದು ಅಲಹಾಬಾದದಲ್ಲಿ ಸೇರಿದ ಬೃಹನ್ಮಹಾರಾಷ್ಟ್ರದ ೧೭ ನೆಯ ಪರಿಷತ್ತಿನ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತ, ಹಿಂದುಸ್ತಾನದ ಗಣಿ, ವಿದ್ಯುತ್ ಲೋಕೋಪಯೋಗಿ ಶಾಖೆಯ ಮಂತ್ರಿಗಳಾದ ಶ್ರೀ. ಎನ್. ವ್ಹಿ. ಗಾಡಗೀಳರು, ಮಹಾರಾಷ್ಟ್ರೀಯರು ರಾಷ್ಟ್ರದ ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲು ಕಾಂಗ್ರೆಸ ಸರಕಾರಕ್ಕೆ ಹೃತ್ಪೂರ್ವಕ ಸಹಾಯ ನೀಡಬೇಕೆಂದೂ ಘಟನಾತ್ಮಕ ಮಾರ್ಗದಿಂದ ಪ್ರಾಂತ ನಿರ್ಮಾಣವನ್ನು ಅವರು ಸಾಧಿಸದೆ ಬಿಡರೆಂದೂ ನುಡಿದರು.

ಪಶ್ಚಿಮ ಬಂಗಾಲ

ಅ. ಭಾ. ಸಂಗೀತ ಪರಿಷತ್ತಿನ ೪ ನೆಯ ಅಧಿವೇಶನವು ಕಲಕತ್ತೆಯಲ್ಲಿ ಡಾ. ಎಂ. ಆರ್. ಜಯಕರರ ಅಧ್ಯಕ್ಷತೆಯಲ್ಲಿ ಡಿಸೆಂಬರ ತಾ ೨೪ ರಂದು ಸೇರಿತು. ಅವರು ಮಾತಾಡುತ್ತ, ಈ ವರೆಗೆ ಸಂಗೀತ ಕಲೆಯ ಪೋಷಕರಾಗಿದ್ದ ರಾಜರು, ಮಹಾ ರಾಜರು, ಜಮೀನದಾರರು ಮೊದಲಾದವರಿಗೆ ದುರ್ದಿನಗಳು ಬಂದಿದ್ದರಿಂದ ಸರಕಾರವೇ ಇನ್ನು ಸಂಗೀತಜ್ಞರಿಗೆ ಆಶ್ರಯ ನೀಡಬೇಕೆಂದೂ ಆಂತರಿಕ ಹಾಗೂ ಬಾಹ್ಯ ಆಕ್ರಮಣಗಳಿಂದ ಸಂಗೀತವನ್ನು ರಕ್ಷಿಸಬೇಕೆಂದೂ ಹೇಳಿದರು.





ವಾರದ ಭವಿಷ್ಯ

ಜ್ಯೋತಿಷಿ– ಕೃಷ್ಣಶಾಸ್ತ್ರಿ ಭಡೆ ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ

ಜನೆವರಿ ತಾ. ೩ ರಿಂದ ಜನೆವರಿ ೯ ರ ವರೆಗೆ

ಮೇಷ

ನಿಮ್ಮ ಮತ್ತು ಮಕ್ಕಳ ಆರೋಗ್ಯ ಅನುಕೂಲ. ಹೆಂಡತಿ ಕೂಡ ಮುಕ್ತೈಕ್ಯ. ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಆವಳ ಪ್ರಕೃತಿ ಸ್ವಲ್ಪ ಕೆಡುವದು. ಬಂಧು ವರ್ಗದವರು ಹಿತ ವಿರೋಧದ ಕೆಲ ಕೆಲಸ ಮಾಡುವರು. ಉದ್ಯೋಗದಲ್ಲಿ ಉತ್ತಮ ಪ್ರಗತಿ. ಬಹಳ ಪ್ರತಿಷ್ಠೆ ಮತ್ತು ತುಂಬ ಲಾಭ. ಅಧಿಕಾರ ಇಲ್ಲವೆ ವರ್ಚಸ್ಸಿನಲ್ಲಿ ಹೆಚ್ಚಳ. ಬಹು ಜನ ಸಮೂಹದಲ್ಲಿ ಜಾಹೀರ ಗೌರವ ಆಗುವ ಸಂಭವವೂ ಇದೆ. ಸ್ಥಾವರದಲ್ಲಿ ಸ್ವಲ್ಪ ಮನಸಿನ ವಿರುದ್ಧ ಘಟನೆಗಳು ಮತ್ತು ಹಾಗೆ ಆಗುವದಕ್ಕಾಗಿ ಅನಿವಾರ್ಯವಾಗಿ ಒಪ್ಪಿಗೆ ಕೊಡಬೇಕಾದ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪರ ಸ್ತ್ರೀ ಬಗ್ಗೆ ಪಾಪಬುದ್ಧಿ. ಪ್ರವಾಸಾದಿ ಕೆಲಸ ಹಿತದ್ದು. ಅಶ್ವಿನಿಯು ಕೊನೆಯ ೨ ಮತ್ತು ಭರಣಿಯ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ.೩, ೪, ೮, ೯, ಅನುಕೂಲ.

ವೃಷಭ

ಎಲ್ಲರ ಪ್ರಕೃತಿ ಉತ್ತಮ. ಹೆಂಡತಿ ಮತ್ತು ಮಕ್ಕಳ ವರ್ತನೆ ಉತ್ತಮ. ಆದರೆ ಇತರರ ಭೆಟ್ಟಿ ವಿರುದ್ಧ. ಪ್ರಾಪಂಚಿಕ ಸುಖ ಒಟ್ಟಾರೆ ನೋಡಿದರೆ ತೊಂದರೆಯದೆ. ಮಕ್ಕಳಲ್ಲಿ ಒಬ್ಬರ ಉನ್ನತಿ ಬಹಳ. ಉದ್ಯೋಗದಲ್ಲಿ ಉತ್ತಮ ಪ್ರಗತಿ. ಒಳ್ಳೆ ಪ್ರತಿಷ್ಠೆ ತುಂಬ ಲಾಭ. ಆದರೆ ಪ್ರತಿಯೊಂದು ಕೆಲಸದಲ್ಲಿ ಜೀವ ಒತ್ತೀ ಇಟ್ಟು ಶ್ರಮ ಮಾಡಬೇಕಾಗುವ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉತ್ತಮ ಯಶಸ್ಸು. ಆದರೆ ಪ್ರತಿಸ್ಪರ್ಧಿಗಳು ಮತ್ತೆ ತಲೆಯೆತ್ತುವ ಸಿದ್ಧತೆಯಲ್ಲಿ. ಮಿತ್ರರಿಂದ ಅವಹೇಲನೆ. ಪ್ರವಾಸಕ್ಕಿಂತ ಭೆಟ್ಟಿ ಉತ್ತಮ. ಪತ್ರವ್ಯವಹಾರ ಹೆಚ್ಚು ಅನುಕೂಲ. ಕೃತ್ತಿಕೆಯು ೩ ರೋಹಿಣಿಯು ೧ ಮತ್ತು ಮತ್ತು ಮೃಗಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ ೩, ೪, ೫, ೬, ಅನುಕೂಲ.

ಮಿಥುನ

ಸ್ವತಃ ನಿಮಗೆ ಮತ್ತು ಮಕ್ಕಳಿಗೆ ಸ್ವಲ್ಪ ಕಾಯಿಲೆ. ಆದರೆ ಹೆಂಡತಿಗೆ ಒಳ್ಳೆ ಆರೋಗ್ಯ. ಉಭಯತರಲ್ಲಿ ಮನಃಸ್ವಾಸ್ಥ್ಯ ಕಡಮೆ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಒಳ್ಳೆ ಪ್ರತಿಷ್ಠೆ ಮತ್ತು ತುಂಬ ಲಾಭ. ಅವಚಿತ ಲಾಭದ ಸಂಭವ. ಮಿತ್ರ ಸುಖ ಉತ್ತಮ. ಬಂಧು ವರ್ಗದವರಲ್ಲಿ ಉನ್ನತಿ ಆದರೆ ಅವರ ವರ್ತನೆಯಲ್ಲಿ ಬಹಳ ಕಿರಕಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಆದರೆ ಖೊಟ್ಟಿ ಪುರಾವೆ ಮಾಡಿದ ಲೋಕಾಪವಾದ. ಪ್ರವಾಸ ಮತ್ತು ಭೆಟ್ಟಿಯೂ ಪತ್ರವ್ಯವಹಾರಕ್ಕಿಂತ ಅನುಕೂಲ. ಆರಿದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೬, ೭, ೮, ೯, ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣವೆ. ಹೆಂಡತಿ ಕೂಡ ಮೇಲಿಂದ ಮೇಲೆ ವಿರೋಧ. ಬಹಳ ವಿಷಯಗಳಲ್ಲಿ ಪ್ರಾಪಂಚಿಕ ತೊಂದರೆ ಹೆಚ್ಚು. ಮಕ್ಕಳಿಂದ ಕೆಲ ಹಿತದ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಮಿತ್ರ ಸುಖ ಅನುಕೂಲ. ವೆಚ್ಚ ಮಾತ್ರ ವಿಪರೀತ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳದೆ ಹೆಚ್ಚು ಜೋರು. ಪ್ರವಾಸ ಬಹಳ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷೆಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೬, ೭, ೮, ೯, ಅನುಕೂಲ.

ಸಿಂಹ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಉತ್ತಮ. ಆದರೆ ಹೆಂಡತಿಗೆ ಮತ್ತು ತಾಯಿಗೆ ಬಹಳ ಕ್ಲೇಶ. ಅಲ್ಲದೆ ನಿಮ್ಮ ನಿಮ್ಮಲ್ಲಿ ಮತಭೇದ. ಸ್ಥಾವರದಲ್ಲಿ ಸ್ವಲ್ಪ ಹಾನಿ. ಆಪ್ತರಲ್ಲಿ ಒಬ್ಬರಲ್ಲಿಯ ಮಂಗಳ ಕಾರ್ಯಕ್ಕೆ ಹಾಜರ ಉಳಿಯಲು ಆಗದ್ದರಿಂದ ಮನಸ್ಸಿಗೆ ದೊಡ್ಡ ವಿರಸ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭದಲ್ಲಿ ಕೊರತೆಯುಂಟಾಗುವ ಸಂಭವ. ಬಂಧು ವರ್ಗದ ಪರಿವಾರದಲ್ಲಿ ಕ್ಲೇಶ. ಮಿತ್ರರಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಪತ್ರವ್ಯವಹಾರ ತೊಂದರೆಯದು. ಆದರೆ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಮಘೆಯ ಕೊನೆಯ ೨ ಮತ್ತು ಪೂರ್ವದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೩, ೪, ೮, ೯ ಅನುಕೂಲ.

ಕನ್ಯಾ

ಪ್ರಕೃತಿ ಉತ್ತಮ. ಹೆಂಡತಿಯು ಹುರುಪು ಹೆಚ್ಚಿಸುವಸಲಹೆಕೊಡುವವಳು. ಆದರೆ ಮಕ್ಕಳು ಮಾತ್ರ ಬಹಳ ತಪ್ಪು ಹಾದಿ ಹಿಡಿಯುವರು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸ್ವಲ್ಪ ಮಟ್ಟಿಗೆ ಅನುಕೂಲ. ಆದರೆ ಕೆಲ ಮಟ್ಟಿಗೆ ತೊಂದರೆಯದು. ಉದ್ಯೋಗದಲ್ಲಿ ಪ್ರಗತಿ ಬಹಳ. ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ. ಹಕ್ಕಿನ ಉಚ್ಚಾಟನೆ ಮಾಡಬೇಕೆಂಬ ಅನೇಕರ ವಿಚಾರ. ಮಿತ್ರರಲ್ಲಿ ವಿರೋಧ. ಉತ್ಪನ್ನಕ್ಕಿಂತ ವೆಚ್ಚ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಮತ್ತು ಫಜೀತಿ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಅನುಕೂಲ. ಉತ್ತರೆಯು ೩ ಮತ್ತು ಹಸ್ತಾದ ೧ ಮತ್ತು ೪ ಮತ್ತು ಚಿತ್ರಾದ ೧ ನೇ ಚರಣಕ್ಕೆ ತೊಂದರೆ ಕಡಮೆ. ತಾ ೬, ೭ ಅನುಕೂಲ.

ತುಲಾ

ಎಲ್ಲರ ಪ್ರಕೃತಿ ಉತ್ತಮ ಪ್ರಾಪಂಚಿಕ ಸುಖ ತೊಂದರೆಯದು. ಮತ್ತು ಸ್ಥಾವರದಲ್ಲಿ ಕೆಲ ಹೊಸ ಕಿಟಕಿಟ ಪ್ರಾರಂಭ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅಷ್ಟಕ್ಕಷ್ಟೆ. ಆದರೆ ಅವಮಾನದಿಂದ ಲಾಭ ಅನುಕೂಲ. ಚೈನಿಯಲ್ಲಿ ಬಹಳ ವೆಚ್ಚ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ, ಪ್ರವಾಸ ಅನಪೇಕ್ಷಿತವೆನಿಸಿ ಬಹಳ ದೂರದಲ್ಲಿ; ಆದರೆ ಅದರಲ್ಲಿಯ ಹೇತು ವಿಪರ್ಯಸ್ತ. ಭೆಟ್ಟಿಯೂ ತೊಂದರೆಯದು. ಆದರೆ ಪತ್ರವ್ಯವಹಾರ ಅನುಕೂಲ. ಸ್ವಾತಿಯು ಕೊನೆಯ ೨ ಮತ್ತು ವಿಶಾಖಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೩, ೪, ೯ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆಯುಷ್ಯದಲ್ಲಿ ವಿಶೇಷ ಸುಖದ ಘಟನೆಗಳ ಕಾಲ ಇದೆ ಎಂದು ಗೊತ್ತಾಗುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಸುಕ್ಕಟೆ ಮಾನ ದೊರೆಯುವ ಮತ್ತು ಲಾಭ ಹೆಚ್ಚು ದೊರೆಯುವ ಗುತ್ತಿಗೆ ಹತ್ತುವ ಸಂಭವ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಅನುರಾಧೆಯ ಕೊನೆಯ ೨ ಮತ್ತು ಜೇಷ್ಠದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ ೫, ೬, ೭, ಅನುಕೂಲ.

ಧನು

ನಿಮ್ಮ ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಮಕ್ಕಳ ಪ್ರಕೃತಿ ಕೆಡುವ ಸಂಭವ. ಪ್ರಾಪಂಚಿಕ ಸುಖ ಸಾಧಾರಣವೆ ಮತ್ತು ಚಿಂತೆಯುಂಟಾಗುವಂತಹ ಕೆಲ ಘಟನೆಗಳು. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಬಹಳ ಉತ್ತಮ. ಆದರೆ ಲಾಭ ಸಾಧಾರಣವೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ತೊಂದರೆ ಮತ್ತು ವೆಚ್ಚದ ಮಾನದಿಂದ ಅನುಕೂಲತೆ ಕಡಮೆ. ಶತ್ರುಗಳಲ್ಲಿ ಕೆಲವರ ಉತ್ಕರ್ಷ ಹೆಚ್ಚು. ಮಿತ್ರರಲ್ಲಿ ವಿರೋಧ. ಪ್ರವಾಸಾದಿ ಕೆಲಸ ಹಿತದ್ದು. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೩, ೪, ೯ ಅನುಕೂಲ.

ಮಕರ


ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಸಾಧಾರಣವೆ ಆದರೆ ಮಕ್ಕಳ ಪ್ರಕೃತಿ ಉತ್ತಮ. ಅಲ್ಲದೆ ಅದರಲ್ಲಿಯ ಕೆಲ ಜನರ ವಿಶೇಷ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ವೆಚ್ಚ ಅಪರಿಮಿತವಾಗುವದರಿಂದ ಮಿತ್ರ ಸುಖ ಉತ್ತಮ. ಸ್ಥಾವರದಲ್ಲಿ ಅನುಕೂಲ ಘಟನೆಗಳು ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಅನುಕೂಲ. ಆದರೆ ತೊಂದರೆ ಮತ್ತು ವೆಚ್ಚ ಬಹಳ. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾಷಾಢದ ೩ ಶ್ರವಣದ ೧ ಮತ್ತು ೩ ಹಾಗು ಧನಿಷ್ಠೆಯ ೧ ನೇ ಚರಣಗಳಿಗೆ ತೊಂದರೆ ಕಡಮೆ. ತಾ ೩, ೪, ೬ ಅನುಕೂಲ.

ಕುಂಭ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಹೆಚ್ಚು ಅನುಕೂಲ. ಮಕ್ಕಳಲ್ಲಿ ಕೆಲ ಜನರ ಉತ್ಕರ್ಷ ಆದರೆ ಕೆಲ ಜನರಿಗೆ ಕ್ಲೇಶ. ಉದ್ಯೋಗದಲ್ಲಿ ಉತ್ತಮ ಪ್ರಗತಿ ಮತ್ತು ತುಂಬ ಲಾಭ. ಆದರೆ ಪ್ರತಿಷ್ಠೆ ಕಡಮೆಯಾಗುವದು. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವಲ್ಪ ಒಳ್ಳೆಯ. ಪ್ರವಾಸ ಉತ್ತಮ. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ತೊಂದರೆಯದು. ಶತತಾರಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೬, ೭, ೮, ೯ ಅನುಕೂಲ.

ಮೀನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಉತ್ತಮ. ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಮಹತ್ವದ್ದಾಗಿಯೇ. ಆದರೆ ವೆಚ್ಚ ಬಹಳ ಮತ್ತು ಮಹತ್ವದ್ದಲ್ಲದ ವಿಷಯದಲ್ಲಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆ ಯಶಸ್ಸು. ಪ್ರವಾಸಾದಿ ಕೆಲಸ ಉತ್ತಮ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೬, ೭, ೯ ಅನುಕೂಲ.



[ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುತ್ತೇವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿತೆಂದೇ ತಿಳಿಯಬೇಕೆಂದು ... ಈ ವಾರದ ಕೆಲವು ತಿಳಿಸುತ್ತೇವೆ. -ಸಂ]

ಅಶೋಕ ಚಕ್ರ

ಲೇಖಕರು:- ಶ್ರೀ ಮಿರ್ಜಿ ಅಣ್ಣಾರಾಯರು ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ ಧಾರವಾಡ. ೨೯೨ ಪುಟ ರೂ. ३-೮

ಅನ್ನ

ಲೇಖಕರು: ಶ್ರೀ ರಂ. ಶ್ರೀ. ಮುಗಳಿ. ಪ್ರಕಾಶಕರು: ಮನೋಹರ ಗ್ರಂಥಪ್ರಕಾಶನ ಸಮಿತಿ, ಧಾರವಾಡ. ೪೦೬ ಪುಟ ರೂ. ೪।-

ಕನ್ನಡ ಸಾಹಿತ್ಯದಲ್ಲಿ ಇದೀಗ ಕಾದಂಬರಿಯುಗ ಕಾಲಿಟ್ಟಂತಿದೆ. ಅನೇಕ ಅನುವಾದಿತ ಕಾದಂಬರಿಗಳಲ್ಲದೆ ಸ್ವತಂತ್ರ ಕಾದಂಬರಿಗಳೂ ತಕ್ಕಷ್ಟು ಸಂಖ್ಯೆಯಲ್ಲಿ ಪೇಟೆಗೆ ಬರುತ್ತಿವೆ ಇವುಗಳಲ್ಲಿ ಎಲ್ಲವೂ ಉತ್ತಮ ವರ್ಗದವೆಂದು ವಾಚನಾರ್ಹವೆಂದು ಕೂಡ, ಹೇಳಲು ಸಾಧ್ಯವಿಲ್ಲ. ಹಲವು ಇನ್ನೂ ಬರೆದು ಮುಗಿಸಿ ಆರುವ ಮುಂಚೆಯೆ ಮುದ್ರಕನ ಕಾವಲಿಯ ಮೇಲೇರಿ ಹಸಿಬಿಸಿಯಾಗಿಯೆ ಹೊರಬರುತ್ತಿವೆ. ಇದರ ಮೇಲೆ ಪುಟಸಂಖ್ಯೆಯ ಸ್ಪರ್ಧೆ— ಬಹುಶಃ ಶ್ರೀ ಕು. ವೆಂ. ಪು. ಅವರ "ಕಾನೂರು ಸುಬ್ಬಮ್ಮ ಹೆಗ್ಗಡತಿ"ಯ ಸಂಗಡ ಪ್ರಾರಂಭವಾದುದು—ಇನ್ನೂ ನಡೆದೇ ಇದೆ. ಜತೆಜತೆಗೇ ಸಮಕಾಲೀನ ರಾಜಕೀಯ ಸ್ಥಿತ್ಯಂತರಗಳ ಹಿನ್ನೆಲೆಯನ್ನಿಟ್ಟುಕೊಂಡು, ಅದರ ಗಂಧಗಾಳಿ ಕೂಡ ಇಲ್ಲದವರು, ಕಾದಂಬರಿಗಳನ್ನು ಹೊಸೆಯುವ ಫ್ಯಾಶನ್ ಬೇರೆ ಹಿಡುಗಿಸಿದೆ. ಈ ಧೂಳಿದ್ದ ಕಾದಂಬರೀ ಲೋಕದಲ್ಲಿ ಹಲವು ದಿಕ್ಕುತಪ್ಪಿದ, ತಪ್ಪಿಸುವ ಪುಸ್ತಕಗಳು ಹೊರಬರುತ್ತಿರುವದು ಸ್ವಾಭಾವಿಕವಾಗಿದ್ದರೂ ಅವಕ್ಕೆ ಓದುಗರು ಉತ್ತೇಜನ ಕೊಡದಿರುವದು ಒಳ್ಳೆಯದೆಂದು ಸೂಚಿಸಬೇಕಾಗುತ್ತದೆ.

ಮೇಲಿನ ಎರಡು ಕಾದಂಬರಿಗಳನ್ನು ವಿಮರ್ಶಿಸಲು ಬೇರಾವ ಕಾರಣವಿಲ್ಲದಿದ್ದರೂ ಅವುಗಳ "ಸಮಕಾಲೀನ" ಸ್ವರೂಪವನ್ನು ಅನುಲಕ್ಷಿಸಿ ಅವನ್ನು ಒಟ್ಟಿಗೆ ತೆಗೆದುಕೊಳ್ಳಲಾಗಿದೆ. ಶ್ರೀ ಅಣ್ಣಾರಾಯರ ಕಾದಂಬರಿಯ ವಸ್ತುವಿಗೂ ಅದರ ಹೆಸರಿಗೂ ಸಂಬಂಧವೇನೆಂದು ಪ್ರಸ್ತುತ ವಿಮರ್ಶಕ ಸಾಕಷ್ಟು ತಲೆಕೆರೆದುಕೊಂಡ. ಆದರೆ, ಪೇಟೆಯಲ್ಲಿ "ಸಮಕಾಲೀನ" ವಸ್ತುವಿನ ಕಥೆ ಕಾದಂಬರಿಗಳಿಗಾಗಿ ತುಂಬ ತೃಷೆಯುಂಟಿರುದನ್ನು ಬಿಟ್ಟರೆ, ಮತ್ತಾವ ಸಮರ್ಥನೆಯೂ ಕಾಣಲಿಲ್ಲ- ಕೊನೆಯ ಪುಟ, ಎರಡು ಪುಟಗಳಲ್ಲಿ ಮಾತ್ರ ಕಥೆಯನ್ನು ಮೂಗು ಹಿಡಿದೆಳೆದು ತಂದು ಅಶೋಕಚಕ್ರಕ್ಕೆ ಗಂಟು ಹಾಕಲಾಗಿದೆ. ಕೊನೆಯ ಪುಟದಲ್ಲಿ "ಅಶೋಕಚಕ್ರ" ಶಬ್ದದ ಮೇಲೆ ಶ್ಲೇಷೋಕ್ತಿಯನ್ನು ಹಾರಿಸುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ.— ಅದೂ ಅಬದ್ಧ ಶ್ಲೇಷೆಯಾಗಿದೆ. ದಿನವೂ ಸಾಯುವ ನೂರಾರು ಜನರೊಡನೆ ಪ್ರಸ್ತುತ ಕಥಾನಾಯಕನೂ ಭಾರತೀಯ ಸ್ವಾತಂತ್ರ್ಯ ಲಾಭದ ದಿನ ಸತ್ತದ್ದಷ್ಟೇ ಸಂಬಂಧ.

"ಅಶೋಕ ಚಕ್ರ"ದ ನಾಯಕ ಬಾಬಣ್ಣನ ದುರ್ಗತಿಗೆ ಅವನ ನಿರ್ವಿದ್ಯೆಯಾಗಲಿ, ಅಥವಾ ಲೇಖಕರು ಕೊನೆಯ ಪುಟಗಳಲ್ಲಿ ತೋರಿಸಲೆಳಸಿದಂತೆ ಜನತಾ ಸರಕಾರ ಅಥವಾ ಅದರ ಕಾಯದೆಗಳಾಗಲಿ ಕಾರಣವಾಗಿರದೆ, ಅವನ ಸಹಜಾತವಾದ ಮೌಢ್ಯ, ಲಾಲಸೆ, ಅಸಂಯಮಗಳೇ ಕಾರಣವಾದವೆಂದು ಕಾದಂಬರಿಯಿಂದ ಅನಿಸುತ್ತದೆ. ಮೂಢನಿಗೆ ಎಲ್ಲ ಪರಿಸ್ಥಿತಿಗಳೂ ಕಾಯದೆಗಳೂ ಪ್ರತಿಕೂಲವೆ. ಗಳಾದ ರಂಥ ಪುಂಬನ ಜೀವನವನ್ನು ಕಾದಂಬರಿವದು. ಲ್ಲಿ ಚಿತ್ರಿಸಬಾರದೆಂದು ನಮ್ಮ ಅಭಿಪ್ರಾಯ ಸುಮಾರು. ಆದರೆ ಅದೊಂದು ದೇಶಕಾಲಾತೀತಯದು ಕಾ. ತಿಹಮಕಾಲೀನ ಸ್ಥಿತಿಗತಿಗಳಿಗೆ ಅದನ್ನು ಯಲ್ಲಿ ಮೆರವಣಿಗೆ ಅವನ ಅಧಃಪತನಕ್ಕೆ ವಿಶಿಷ್ಟ ವರೆಗೆ ಹೋಗಿ, ೧ ಅಥವಾ ಸ್ವಾತಂತ್ರ್ಯೋದಯವು ಮೇಲಿನ ನಿರ್ಬಂಧ ೨ಬ ಅರ್ಥ ಧ್ವನಿತವಾಗುವಂತೆ ರೊಡನೆ ಒಪ್ಪಂದ ಒಕಾದಂಬರಿಕಾರನನು ಅಪ್ರಾಗ್ರಹಮಂತ್ರಿ ಮುರಾರಜಿ ಕೊಂಡರು.

ಮೊಣಕತೆಯ ಅಪವಾದಕ್ಕೆ ಗುರಿ ಮಾಡಬಹುದು. ಬಾಬಣ್ಣನು ಶ್ರೀಮಂತನಾಗಿದ್ದರೂ ವಿದ್ಯಾವಂತನಾಗಿದ್ದರೂ ಅವನ ಸ್ಥಿತಿ ಇದಕ್ಕಿಂತ ಬಹಳ ವ್ಯತಿರಿಕ್ತವಾಗುತ್ತಿದ್ದಿಲ್ಲ. "ಅಶೋಕ ಚಕ್ರ"ವೆಂಬ ಹೆಸರನ್ನು ನೋಡಿ, ಇದನ್ನು ತೆಗೆದುಕೊಂಡು, ಅದರಲ್ಲಿ ಇಂದಿನ ರಾಜಕೀಯ ಸಾಮಾಜಿಕ ಪ್ರಶ್ನೆಗಳು ಮಥಿಸಲ್ಪಟ್ಟಿರಬಹುದೆಂಬ ಭ್ರಾಂತಿಯಿಂದ ಓದತೊಡಗಿದವನು ಗೊಂದಲದಲ್ಲಿ ಬೀಳುವದು ಖಂಡಿತ. ಇತರ ವೃತ್ತಿಗಳಲ್ಲಿ ಸಾಧಾರಣ ವರ್ಗದ ಓದಬಹುದಾದ ಈ ಕಾದಂಬರಿಯಲ್ಲಿ ಈ ಜನಪ್ರಿಯತೆಯ ಲಾಲಸೆಯೊಂದು ದೋಷವಾಗಿದೆ. ಲೇಖಕರು ಹಳ್ಳಿಯ ಮತ್ತು ಗ್ರಾಂಥಿಕ ಭಾಷೆಗಳ ಕಲಬೆರಕೆಮಾಡಿಯೂ ಸ್ವಲ್ಪ ಗುಣನಾಶ ಮಾಡಿದ್ದಾರೆ. ಆದರೆ ಅಣ್ಣಾರಾಯರಿಗೆ ತಾವು ಚಿತ್ರಿಸುತ್ತಿರುವ ಸಮಾಜದ ಮತ್ತು ಜೀವನದ ಸಂಪೂರ್ಣ ಅನುಭವವಿದೆ; ಅದನ್ನು ಸಾಕಷ್ಟು ಮನನೀಯವಾಗುವಂತೆ ಚಿತ್ರಿಸುವ ಲೇಖನ ಸಾಮರ್ಥ್ಯವೂ ಇದೆ. ಇದೇ ಈ ಕಾದಂಬರಿಯ ಗುಣ.

ಆದರೆ ವಿದ್ವಾಂಸರಾದ ಶ್ರೀ ಮುಗಳಿಯವರು ಬರಗಾಲದ ಹಿನ್ನೆಲೆಯನ್ನಿಟ್ಟುಕೊಂಡು ಒಂದು ಕಥೆಯನ್ನು ಹೊಸೆಯಹೋಗಿ ಕಥೆಯನ್ನು ಹಿನ್ನೆಲೆಗೆ ತಳ್ಳಿ ಬರಗಾಲದ ವರದಿಯನ್ನೇ ಹೆಣೆದಿದ್ದಾರೆಂದು ಹೇಳಲು ವಿಷಾದವಾಗುತ್ತದೆ. ಈ ದಶಕದ ಪೂರ್ವಾರ್ಧದಲ್ಲಿ ಭಾರತದಲ್ಲಿ ಬಿದ್ದ ಬರಗಾಲವೊಂದು ಪ್ರಚಂಡ ದುರ್ಘಟನೆ. ಅದರ ವ್ಯಾಪ್ತಿ ವಿಸ್ತಾರವಾದದು. ಅದು ಉಂಟುಮಾಡಿದ ಮಾನವಯಾತನೆ ವಿವಿಧವಾದುದು, ಅಗಾಧವಾದುದು- ಶ್ರೀ ಮುಗಳಿಯವರು ಬಂಗಾಲ, ವಿಜಾಪುರಗಳಲ್ಲಿ ಪರಿಹಾರಕಾರ್ಯಮಾಡಿದ ಒಬ್ಬ ಕನ್ನಡ ವೈದ್ಯಕೀಯ ವಿದ್ಯಾರ್ಥಿಯ ಜೀವನದ ದುರಂತಕಥೆಯನ್ನು ಇಲ್ಲಿ ಹೇಳಹೋಗಿದ್ದಾರೆ. ಸ್ವತಃ ಕಥೆಯ ಕಲ್ಪನೆ, ಪಾತ್ರಸೃಷ್ಟಿ ಮೊದಲಾದ ಸ್ಥೂಲ ರೇಖೆಗಳಲ್ಲೇನೂ ಅಂಥ ದೋಷವಿಲ್ಲ. ಆದರೆ ಅವರು ಬಣ್ಣತುಂಬಿದ ಮೇಲೆ ಮಾತ್ರ ಪೂರ್ಣ ಚಿತ್ರದ ಸ್ವರೂಪ ವಿಕೃತವಾಗಿ ಬಿಟ್ಟಿದೆ. ಪೆಟ್ಟಿಗೆಯಲ್ಲಿರುವ ಎಲ್ಲ ಬಣ್ಣಗಳನ್ನೂ ಬಳಿದೇ ಬಿಟ್ಟೇನೆಂಬ ಚಿತ್ರಕಾರ ಚಿತ್ರವನ್ನು ವಿದ್ರೂಪಗೊಳಿಸುವಂತೆ ಇಡಿ ಬರಗಾಲದ ಭೀಷಣ ಚಿತ್ರದ ದಿಗ್ದರ್ಶನ ಮಾಡುವ ಛಲಕ್ಕೆ ಬಿದ್ದು ಪತ್ರಿಕೆಗಳಲ್ಲಿ ಬಂದ ವರದಿಗಳು, ಕರ್ಣಾಕರ್ಣಿಕೆಗಳು ಮೊದಲಾದೆಲ್ಲ ಬಗೆಬಗೆಯ ಹೊಂದಿಕೆಯಿಲ್ಲದ ಸರಕುಗಳನ್ನು ಕಥೆಯ ಹಡಗಿನಲ್ಲಿ ತುಂಬಿ ಅದನ್ನು ಮುಳುಗುವಂತೆ ಮಾಡಲಾಗಿದೆ. ಸರಕುಗಳಲ್ಲಿ ಅರ್ಧಾಂಶವನ್ನಾದರೂ ಸಮುದ್ರಕ್ಕೆ ಒಗೆಯುವ ಅರ್ಥತ್ಯಾಗ ಪಾಂಡಿತ್ಯ ಲೇಖಕರಲ್ಲಿದ್ದಿದ್ದರೆ ಅವರು ಹಡಗನ್ನು ಸುರಕ್ಷಿತವಾಗಿ ದಡಗಾಣಿಸಬಹುದಾಗಿತ್ತು. ಕ್ರಾಂತಿ, ಬರಗಾಲಗಳಂಥ ವಸ್ತುಗಳನ್ನು ಹಿನ್ನೆಲೆಯಲ್ಲಿಟ್ಟು ಕಥೆ, ಕಾದಂಬರಿ, ಚಿತ್ರಗಳನ್ನು ರಚಿಸುವ ಕಲಾಕಾರನು ಹಲವು ಆಮಿಷಗಳನ್ನು ಗೆಲ್ಲಬೇಕಾಗುವದು. ಫ್ರೆಂಚ ಕ್ರಾಂತಿಯ ಹಿನ್ನೆಲೆಯಲ್ಲಿ ಕಾದಂಬರಿ ಬರೆದ ಡಿಕನ್ಸನು ಫ್ರೆಂಚ ಅರಸ-ಅರಸಿಯರ ಶಿರಚ್ಛೇದ ದೃಶ್ಯವನ್ನು ಕೊಡದೆ ಸಂಯಮ ತೋರಿದ್ದಕ್ಕಾಗಿ ವಿಮರ್ಶಕರಿಂದ ಪ್ರಶಂಸೆ ಹೊಂದಿದುದನ್ನು ನಾವಿಲ್ಲಿ ನೆನೆದುಕೊಳ್ಳಬಹುದು. ಶ್ರೀ ಮುಗಳಿಯವರು ತದ್ವಿರುದ್ಧವಾಗಿ ವರ್ತಿಸಿ ಪ್ರತಿಯೊಂದು ಹೊಂಡದಲ್ಲಿಯೂ ಬಿದ್ದೆದ್ದು ಮುಂದೆ ಹೋಗುತ್ತಾರೆ. ಕತೆಯ ಮಿತಿ-ಮೇರೆಯನ್ನು ಲೆಕ್ಕಿಸದೆ ಬರೆದ ಈ ಪುಸ್ತಕ ಕಾದಂಬರಿಯೂ ಅಲ್ಲ ವರದಿಯೂ ಅಲ್ಲ ಎಂಬಂತಾಗಿದೆ. ಬಂಗಾಲದ ಜನಜೀವನದ ಪ್ರತ್ಯಕ್ಷ ಪರಿಚಯವನ್ನು ಮಾಡಿಕೊಳ್ಳಲು ಲೇಖಕರು ಪ್ರಯತ್ನಿಸಿದ್ದರೆ, ನೂರಾರು ವರದಿ, ಮತ್ತು ಪರಸ್ಪರ ವಿಸಂಬದ್ಧವಾದ ಘಟನೆಗಳ ಸಂಗ್ರಹಕ್ಕಿಂತ ಅದು ಕಥೆಯ ಸಾಧುತ್ವವನ್ನು ಹೆಚ್ಚಿಸಲು ಲೇಖಕರಿಗೆ ಸಹಾಯಕವಾಗುತ್ತಿತ್ತು. ಬಹುಶಃ ಕೊನೆಯಲ್ಲಿ ಕೊಟ್ಟ ವಿರಾಟ್ ಸಂದರ್ಭ ಸಾಮಗ್ರಿಯೇ ಲೇಖಕರ ಕಾಲುಹಿಡಿದೆಳೆಯಿತೋ ಏನೋ.

ಸುಮಾಂಜಲಿ

ಲೇಖಕರು: ಶ್ರೀ ಆರ್. ಸಿ. ಹಿರೇಮಠ, ಪ್ರಕಾಶಕರು: ಶ್ರೀ ಆರ್. ಎ. ಹಿರೇಮಠ, ವಾಗ್ದೇವಿ ಗ್ರಂಥಮಾಲೆ, ರೈಟರಓಣಿ, ಧಾರವಾಡ. ೬೪ ಪುಟ, ರೂ. ೧.

ಪ್ರೊ. ಹಿರೇಮಠ (ಬಾಗಿಲುಕೋಟೆ ಕಾಲೇಜು) ಅವರ ೨೮ ಕವಿತೆಗಳು ಇಲ್ಲಿ ಸಂಗ್ರಹಿಸಲ್ಪಟ್ಟಿವೆ. ಇದರಲ್ಲಿ ಬಂದ ೫-೬ ಕವಿತೆಗಳನ್ನು ಬಿಟ್ಟರೆ ಉಳಿದವು ಪ್ರಕಟವಾಗಿರದಿದ್ದರೆ ಕನ್ನಡ ಸಾಹಿತ್ಯಕ್ಕೆ ಮತ್ತು ವಿಶೇಷತಃ ವಿದಗ್ಧರಾದ ಕವಿಗಳ ಕೀರ್ತಿಗೆ ಯಾವ ಬಡತನವೂ ಬರುತ್ತಿದ್ದಿಲ್ಲೆಂದು ವಿಷಾದದಿಂದ ಹೇಳಬೇಕಾಗಿದೆ. ಇವನ್ನೋದಿದರೆ ಲೇಖಕರು ತೀರಾ ಬಾಲ್ಯಾವಸ್ಥೆಯಲ್ಲಿ ಇವುಗಳನ್ನು ಬರೆದಿರಬೇಕೆಂದು ತೋರುತ್ತದೆ.

ಪಾಶ್ಚಿಮಾತ್ಯ ದೇಶಗಳಲ್ಲಿಯ ಭೂಸುಧಾರಣೆಗಳು

ಲೇಖಕರು: ಶ್ರೀ ಸಿ ಎಂ. ಕುಲಕರ್ಣಿ; ಪ್ರಕಾಶಕರು: ಜನತಾ ಶಿಕ್ಷಣಮಾಲೆ, ಧಾರವಾಡ, ಮಾರಾಟಗಾರರು: ಸಮಾಜ ಪುಸ್ತಕಾಲಯ ಧಾರವಾಡ. ४೭ ಪುಟ, ೮ ಆಣೆ.

ಭೂಮಿಯೇ— ಅರ್ಥಾತ್ ಒಕ್ಕಲತನವೇ— ಎಲ್ಲ ಆರ್ಥಿಕ ಚಟುವಟಿಕೆಯ ಮೂಲವೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು. ಭೂಮಿಯ ಒಡೆತನದ ಪ್ರಶ್ನೆಯೆ ಹಲವು ಕ್ರಾಂತಿಗಳ ಮೂಲವಾಗಿದ್ದುದನ್ನು ಇತಿಹಾಸ ಹೇಳುತ್ತದೆ. ಭಾರತದಲ್ಲಿ ಕೂಡ ಭೂಮಿ, ಒಕ್ಕಲಿಗ, ಸರಕಾರ, ಮಧ್ಯಮಪುರುಷರಾದ ಜಮೀನ್ದಾರರೇ ಮೊದಲಾದವರ ಪರಸ್ಪರ ಸಂಬಂಧದ ವಿಷಯದಲ್ಲಿ ಮಹತ್ವದ ಪರಿವರ್ತನೆಗಳಾಗುತ್ತಿವೆ; ಇನ್ನೂ ಆಗಬೇಕೆಂಬ ಕೂಗು, ಬೇಡಿಕೆ, ಏಳುತ್ತಿದೆ. ಇಂಥ ಆಯಕಟ್ಟಿನ ಸಮಯದಲ್ಲಿ ಎಲ್ಲ ನಾಗರಿಕರೂ ಈ ಪ್ರಶ್ನೆಯ ವಿವಿಧ ರೂಪ, ವಿವಿಧ ರಾಷ್ಟ್ರಗಳಲ್ಲಿ ಅವು ಬಿಡಿಸಲ್ಪಟ್ಟ ರೀತಿಗಳೇ ಮೊದಲಾದವುಗಳನ್ನು ಅರಿತುಕೊಳ್ಳುವ ಅವಶ್ಯಕತೆಯಿದೆ. ಶ್ರೀ ಸಿ. ಎಂ. ಕುಲಕರ್ಣಿಯವರು ಹಲವು ಮೂಲಗಳಿಂದ ವಿಷಯಗಳನ್ನು ಸಂಗ್ರಹಿಸಿ ಅದನ್ನು ಪ್ರಕಟಿಸಿದ್ದು ಜನತಾ ಶಿಕ್ಷಣ ಮಾಲೆಗೆ ಒಪ್ಪುವ ಕೆಲಸ.

Vijnana Ephemeris for 1949

Publishers. Astrological Research Institute, Bombay 25. Price Re. 1

ಜಾತಕಾದಿಗಳಿಗೆ ಅತ್ಯವಶ್ಯವಾಗಿರುವ ಗ್ರಹಗಣಿತವನ್ನೊಳಗೊಂಡ ಈ ನಿತ್ಯ ಸ್ಪುಟ ಪಂಚಾಂಗವನ್ನು ಕಳೆದ ಕೆಲ ವರ್ಷಗಳಿಂದ ಮುಂಬಯಿಯ ಜ್ಯೋತಿಷ ಸಂಸ್ಥೆಯವರು ಪ್ರಕಟಿಸುತ್ತಿದ್ದಾರೆ. ೧೯೪೯ ರ ಬಗ್ಗೆ ಹೊರಡಿಸಲ್ಪಟ್ಟಿರುವ ಈ ಚಿಕ್ಕ ಹೊತ್ತಿಗೆಯಲ್ಲಿ ಕೇವಲ ದೈನಿಕ ಗ್ರಹಚಾರ ಮಾತ್ರವಲ್ಲ, ಜಾತಕ ಮತ್ತು ಫಲವಿವೇಚನೆಗೆ ಬೇಕಾದ ಇನ್ನೂ ಹಲವು ಉಪಯುಕ್ತ ಹೋರಾಕೋಷ್ಟಕಗಳೂ ೧೯೪೯ ರ ಪೇಟೆಯ ಭವಿಷ್ಯವೂ ಅಡಕವಾಗಿವೆ. ಇದರಲ್ಲಿರುವ ಗಣಿತ ಅತ್ಯಂತ ಸೂಕ್ಷ್ಮವಾಗಿರುವದರಿಂದ ಈ ಭಾಗದಲ್ಲಿ ಸಾಮಾನ್ಯ ಪಂಚಾಂಗಗಳಿಗಿಂತ ಇದು ಹೆಚ್ಚು ಉಪಯುಕ್ತವಾಗಿದೆ.

ಈ ವಾರದ ಕತೆ

(೨ನೆಯ ಪುಟದಿಂದ)

"ನೀವು ಎರಡು-ಮೂರು ವರುಷವಾದರೂ ಧಾರವಾಡಕ್ಕೆ ಬರಲಿಲ್ಲ." ಸುಮನಾ ಕೇಳಿದಳು.

"ಅಹುದು. ತಪ್ಪು ಒಪ್ಪುವೆ. ಈ ಸಾರೆ ಬರುವೆ" ಎಂದು ನಗುತ್ತ ಹೇಳಿದೆ.

ಗಾಡಿಯು ಬಿಡುವ ಗಂಟೆಯಾಯಿತು.

"ಅಲ್ಲ. ಆ ದಿನ ಒಬ್ಬ ಕ್ರಿಶ್ಚಿಯನ್ ಹೆಂಗಸು ನಮ್ಮನ್ನು ಏನೇನೋ ಬಯ್ದಳು. ಆಕೆಯು ಈಗ ಎಲ್ಲಿರುವಳು ಬಲ್ಲಿರಾ?"

"ನನಗೆ ಹೇಗೆ ಗೊತ್ತು?"

"ಮೊನ್ನೆ ನಾನು, ಇವರು ತಿರುಗಾಡಲು ಈ ಕಡೆಗೆ ಬಂದಿದ್ದೆವು. ಆಕೆ ಬೇರೊಬ್ಬನ ಬೆನ್ನು ಹತ್ತಿರುವಳು," ಸ್ತ್ರೀ ಸಹಜ ಮಾತ್ಸರ್ಯದಿಂದ ನುಡಿದಳು.

ಗಾಡಿ ಹೊರಟಿತು.

"ಅಹುದು. ಆಕೆ ಈಗ ಬೇರೊಬ್ಬನನ್ನು ಮದುವೆಯಾಗಿರುವಳು. ಗಂಡನೂ ಬೇರೊಬ್ಬಳನ್ನು ಹುಡುಕಿಕೊಂಡು ಬರಲು ಹೊರಟಿರುವನು" ಎಂದೆನು.

ಈ ಮಾತು ಆಕೆಗೆ ಕೇಳಿಸಿದುವೋ ಇಲ್ಲವೋ!

...ಕೆಯನ್ನು ಹುಬ್ಬಳ್ಳಿ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರು ಮುದ್ರಿಸಿ ಪ್ರಕಟಿಸಿದರು.